ಲಂಕೇಶ್


ಮೇ 12, 2010 ರೂ. 12/-

ಕತ್ರಿಗುಪ್ಪೆ ಲಿಂಗನ ಅಂತ್ಯ

ಅರಣ್ಯ ಸ್ವಾಹ ಮಾಡಿದ ಆಶೀಸರ

ಲಿಂಗಾಯತ ಧರ್ಮ ಮತ್ತು ಅನಿಷ್ಠ ಜಾತಿ ಲಿಂಗಮರು

ಶಾಸ್ತ್ರಿನಗರ ಅನಿಲನ ಕೊಲೆಗಾರ ಅಜಯಸಾರಥಿ



ಪೃಥ್ವಿ

ರೆಡ್ಡಿ ಗ್ಯಾಂಗ್ ಮೇಲೆ

ಪುನೀತ್ ಬಾಂಬ್

ಹರಾಜಾಗುತ್ತಿರುವ ಗ್ರಾಮ ಪಂಚಾಯತಿಗಳು ಮತ್ತು ವಿಕೇಂದ್ರೀಕರಣದ ಮಿತಿಗಳು

ಹಸಿರು ಕ್ರಾಂತಿಯ ನಂತರದಲ್ಲಿ ದೇಶದೆಲ್ಲೆಡೆ ಗ್ರಾಮ ಪಂಚಾಯತಿಗಳನ್ನೂ ಒಳಗೊಂಡಂತೆ ಒಟ್ಟಾರೆ ಸಂಸದೀಯ ರಾಜಕಾರಣವು ಹಸಿರು ಕ್ರಾಂತಿ ಮತ್ತು ಭೂ ಸುಧಾರಣೆಗಳ ಪ್ರಧಾನ ಫಲಾನುಭವಿಗಳಾಗಿರುವ ಮತ್ತು ಸಂಖ್ಯಾತ್ಮಕವಾಗಿ ಹೆಚ್ಚಿರುವ ಹಿಂದುಳಿದ ಜಾತಿಗಳ ಮೇಲ್ಪದರವನ್ನು ಮತ್ತಷ್ಟು ರಾಜಕೀಯವಾಗಿ ಸಬಲೀಕರಿಸಿದೆ. ಆದರೆ ಅದೇ ಸಮಯದಲ್ಲಿ ಇದೇ ಪ್ರಕ್ರಿಯೆಯು ದಲಿತರನ್ನು ಮತ್ತಷ್ಟು ರಾಜಕೀಯವಾಗಿ ನಿತ್ರಾಣಗೊಳಿಸಿದೆ. ಈ ಹೊಸ ಶೂದ್ರ ಭೂಮಾಲೀಕ ಶಕ್ತಿಗಳ ದಮನಕ್ಕೆ ಗುರಿ ಮಾಡಿದೆ.





▸ ಶಿವಸುಂದರ್

ಗ್ರಾಮ ಪಂಚಾಯತಿ ಚುನಾವಣೆಗಳ ತಯಾರಿ ಎಲ್ಲಾ ಕಡೆ ರಭಸದಿಂದ ನಡೆಯುತ್ತಿದೆ. ಬೆಂಗಳೂರು ಬೃಹತ್ ಮಹಾನಗರ ಪಾಲಿಕೆಯ ಅನಿರೀಕ್ಷಿತ ಯಶಸ್ಸಿನ ಹುಮ್ಮಸ್ಸಿನಲ್ಲಿರುವ ಬಿಜೆಪಿ ಈಗಾಗಲೇ ಗ್ರಾಮರಾಜಕಾರಣದ ಕೇಸರೀಕರಣಕ್ಕೆ ಸಕಲ ಸಿದ್ಧತೆಗಳನ್ನೂ ನಡೆಸಿದೆ. ಯಥಾಪ್ರಕಾರ ಸೋತ ಸಂಕಟವಾಗಲೀ, ಗೆಲ್ಲುವ ಹುಮ್ಮಸ್ಸಾಗಲೀ ಇಲ್ಲದ ಜನತಾ ದಳ ಮತ್ತು ಕಾಂಗ್ರೆಸ್ಸುಗಳು ಇಡೀ ಕರ್ನಾಟಕವನ್ನು ಬಿಜೆಪಿಗೆ ಬರೆದುಕೊಟ್ಟಂತೆ ಸುಸ್ತಾಗಿ ಕುಳಿತಿವೆ. ಹೀಗಾಗಿ ಈಗಾಗಲೇ ಬಿಜೆಪಿ ಗೆದ್ದ ಉಮೇದಿನಲ್ಲಿದೆ.

ಅದೇನೇ ಇರಲಿ, ಈಗ ಕರ್ನಾಟಕದಲ್ಲಿ ನಡೆಯುತ್ತಿರುವ ಗ್ರಾಮ ಪಂಚಾಯತಿ ಚುನಾವಣೆಗಳು ಒಂದರ್ಥದಲ್ಲಿ ವಿಕೇಂದ್ರೀಕರಣದ ಇತಿಮಿತಿಗಳನ್ನಂತೂ ಸ್ಪಷ್ಟವಾಗಿ ತೋರಿಸುತ್ತಿವೆ. ರಾಜ್ಯಭಾರವನ್ನು ಗ್ರಾಮಮಟ್ಟಕ್ಕೆ ಸ್ಥಳಾಂತರಿಸುವ ಮತ್ತು ಗ್ರಾಮದ ಆಡಳಿತ ಮತ್ತು ಸಂಪನ್ಮೂಲ ನಿರ್ವಹಣೆಯಲ್ಲಿ ಸಾಮಾನ್ಯ ಜನರ ರಾಜಕೀಯ ಪಾಲುದಾರಿಕೆಯನ್ನು ಖಾತರಿಗೊಳಿಸುವುದು ಈ ಪಂಚಾಯತ್ ರಾಜ್‌ನ ಹಿಂದಿನ ಘನವಾದ ಆಶಯ. ಒಂದರ್ಥದಲ್ಲಿ ರಾಜಕೀಯ ಅಧಿಕಾರದ ವಿಕೇಂದ್ರೀಕರಣವೇ ಪಂಚಾಯತ್ ರಾಜ್ ವ್ಯವಸ್ಥೆಯ ಹಿಂದಿನ ಪರಿಕಲ್ಪನೆ. ನಮ್ಮ ಗ್ರಾಮಗಳಲ್ಲಿರುವ ಸ್ಥಾಪಿತ ಹಿತಾಸಕ್ತಿಗಳು ಪೋಷಿಸಿಕೊಂಡು ಬಂದಿರುವ ವರ್ಗ-ಜಾತಿ-ಲಿಂಗ ಅಸಮಾನತೆಗಳನ್ನು ಈ ವಿಕೇಂದ್ರೀಕೃತ ರಾಜಕೀಯ ಸಂಪೂರ್ಣವಾಗಿ ಬುಡಮೇಲು ಮಾಡುತ್ತದೆಂಬುದು ಸಂಸದೀಯ ಪ್ರಜಾತಂತ್ರದಲ್ಲಿ ಅಪಾರ ವಿಶ್ವಾಸವುಳ್ಳವರ -ಅದರಲ್ಲೂ ಸಮಾಜವಾದಿಗಳ ಹಾಗೂ ಸಂಸದೀಯ ಕಮ್ಯುನಿಸ್ಟರ - ನಿರೀಕ್ಷೆಯಾಗಿತ್ತು. ಗ್ರಾಮಾಡಳಿತವು ಜನರೇ ಆಯ್ಕೆ ಮಾಡಿದ ಜನರಿಂದ ನಡೆಯುವುದರಿಂದ ಮತ್ತು ಆ ಅಧಿಕಾರದಲ್ಲಿ ಎಲ್ಲಾ ಸಮುದಾಯಗಳ ಪ್ರಾತಿನಿಧ್ಯ ಇರುವುದರಿಂದ ಈ ಅಸಮಾನತೆಗಳು ನಿವಾರಣೆಯಾಗುವುದಕ್ಕೆ, ಭೂಮಿಕೆ ನಿರ್ಮಾಣವಾಗಬಹುದೆಂಬುದು ಅವರೆಲ್ಲರ ಅಂದಾಜಾಗಿತ್ತು!

ಆದರೆ ಕಳೆದ ಮೂರು ದಶಕಗಳ ಪಂಚಾಯತ್ ರಾಜ್ ವ್ಯವಸ್ಥೆಯ ಅನುಭವವನ್ನು ನೋಡಿದರೆ ಕೇವಲ ರಾಜಕೀಯ ವಿಕೇಂದ್ರೀಕರಣ ಒಂದೇ ಅಧಿಕಾರ ವಿಕೇಂದ್ರೀಕರಣವನ್ನಾಗಲೀ, ದುರ್ಬಲರ ಸಬಲೀಕರಣವನ್ನಾಗಲೀ ಮಾಡುವುದಿಲ್ಲವೆಂಬುದನ್ನು ರುಜುವಾತು ಮಾಡಿದೆ. ಈ ಗ್ರಾಮ ಪಂಚಾಯತಿಗಳು ಗ್ರಾಮದೊಳಗಿನ ವರ್ಗ-ಜಾತಿ-ಲಿಂಗ ಅಸಮಾನತೆಯನ್ನು ಅಲುಗಾಡಿಸುವುದಿರಲಿ ಅದನ್ನು ಮತ್ತಷ್ಟು ಗಟ್ಟಿಗೊಳಿಸುತ್ತಿದೆ. ಲಿಂಗ ಅಸಮಾನತೆ ಮತ್ತು ಮಹಿಳೆಯರ ಸಬಲೀಕರಣದಲ್ಲಿ ಅಲ್ಲಲ್ಲಿ ಕೆಲವು ಸಕಾರಾತ್ಮಕ ಉದಾಹರಣೆಗಳು ಕಂಡುಬರುತ್ತವಾದರೂ ಒಟ್ಟಾರೆಯಾಗಿ ಅದು ಜಾತಿ ಮತ್ತು ವರ್ಗ ವ್ಯವಸ್ಥೆಯನ್ನು ಮತ್ತಷ್ಟು ಸದೃಢೀಕರಿಸಿರುವುದೇ ವಿಕೇಂದ್ರೀಕರಣದ ವಿಪರ್ಯಾಸ!

ಈಗ ಕರ್ನಾಟಕದಲ್ಲಿ ನಡೆಯುತ್ತಿರುವ ಗ್ರಾಮ ಪಂಚಾಯತಿ ಚುನಾವಣಾ ಪ್ರಕ್ರಿಯೆಗಳು ಇದಕ್ಕೆ ಇನ್ನಷ್ಟು ಜ್ವಲಂತ ಹಾಗೂ ದಿಗ್ಭ್ರಾಂತಗೊಳಿಸುವಂತಹ ಉದಾಹರಣೆಗಳನ್ನು ಒದಗಿಸುತ್ತಿವೆ. ಈ ಗ್ರಾಮಪಂಚಾಯತಿ ಚುನಾವಣೆಗಳು ತತ್ವಶಃ ನೋಡುವುದಾದರೆ ಪಕ್ಷರಹಿತ ಚುನಾವಣೆಗಳಾಗಬೇಕು. ಆದರೆ ಎಲ್ಲಾ ಪಕ್ಷಗಳು ಗ್ರಾಮ ಪಂಚಾಯತಿ ಚುನಾವಣೆಗಳಲ್ಲಿ ನಾವೇ ಗೆಲ್ಲುತ್ತೇವೆ ಎಂದು ಹೇಳಿಕೊಳ್ಳುತ್ತಿವೆ. ಇದು ಗ್ರಾಮಪಂಚಾಯತಿ ಚುನಾವಣೆಗಳು ಹೇಗೆ "ಪಕ್ಷಪಾತಿ"ಯಾಗಿವೆ ಎಂಬುದನ್ನು ಎತ್ತಿ ತೋರಿಸುತ್ತದೆ. ಈ "ಪಕ್ಷಪಾತ"ವೇ ಈಗಾಗಲೇ ಹಿಂದೆಂದೂ ಇಲ್ಲದಂಥ ರಕ್ತಪಾತಕ್ಕೂ ಕಾರಣವಾಗುತ್ತಿದೆ.

ಇದು ಎಲ್ಲಾ ರಾಜ್ಯಗಳಲ್ಲೂ ನಡೆಯುತ್ತಿರುವ ಸಂಗತಿಯೇ ಆದರೂ ಕರ್ನಾಟಕದಲ್ಲಿ ಈ ಬಾರಿಯ ಗ್ರಾಮ ಪಂಚಾಯತಿ ಚುನಾವಣೆಗಳಲ್ಲಿ ಗ್ರಾಮಗಳಲ್ಲಿನ ಪಟ್ಟಭದ್ರ ಹಿತಾಸಕ್ತಿಗಳು ಜಾತಿ-ವರ್ಗ ವ್ಯವಸ್ಥೆಯನ್ನು ವಿಕೃತವಾಗಿ ಕೇಂದ್ರೀಕರಣಗೊಳಿಸುವ ಹೊಸ "ಕರ್ನಾಟಕ ಮಾದರಿ"ಯನ್ನು ತೋರಿಸಿಕೊಟ್ಟಿವೆ. ಈಗಾಗಲೇ ಎಲ್ಲೆಡೆಯಿಂದ ಬರುತ್ತಿರುವ ಸುದ್ದಿಗಳೇನೆಂದರೆ "ಗ್ರಾಮಸ್ಥರು" ತಮ್ಮ ಚುನಾವಣೆಗಳನ್ನು ಪಕ್ಷ ರಹಿತವನ್ನಾಗಿ ಮಾಡಲು ಒಂದೋ ಪಂಚಾಯ್ತಿ ಸ್ಥಾನವನ್ನು ಹರಾಜು ಹಾಕುತ್ತಿದ್ದಾರೆ. ಅಥವಾ "ಸರ್ವಸಮ್ಮತ" ಅಭ್ಯರ್ಥಿಯನ್ನು ಅವಿರೋಧವಾಗಿ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಚುನಾವಣೆಗೆ ಮುನ್ನವೇ ಕೇವಲ ತುಮಕೂರು ಜಿಲ್ಲೆಯೊಂದರಲ್ಲೇ 25 ಸ್ಥಾನಗಳು ಒಂದೋ ಬಿಕರಿಯಾಗಿವೆ ಅಥವಾ "ಅವಿರೋಧ"ವಾಗಿ ಆಯ್ಕೆಯಾಗಿದೆ. ಅವಿರೋಧವಾಗಿ ಆಯ್ಕೆಗೊಳ್ಳುತ್ತಿರುವ ಹಲವು ಗ್ರಾಮಗಳಲ್ಲಿ ಪಕ್ಷ ರಾಜಕಾರಣದ ಗಲೀಜು ತಮ್ಮ ಹಳ್ಳಿಯನ್ನು ಮಲಿನ ಮಾಡಬಾರದೆಂಬ ಪ್ರಾಮಾಣಿಕ ಕಾಳಜಿಯಿಂದ ಕೆಲವು ಉತ್ತಮರನ್ನೇ ಆಯ್ಕೆ ಮಾಡಿರಬಹುದು. ಆದರೆ ಅದು ಅಪವಾದವೇ ಹೊರತು ನಿತ್ಯ ಸಂಗತಿಯಲ್ಲ.

ಬದಲಿಗೆ ಈ "ಅವಿರೋಧ" ಆಯ್ಕೆ ಮತ್ತು "ಹರಾಜು"ಗಳಲ್ಲಿ ಸಾಮಾನ್ಯವಾಗಿ ನಡೆಯುತ್ತಿರುವುದು ಜಾತಿ-ವರ್ಗ ಮತ್ತು ಪುರುಷಾಧಿಪತ್ಯದ ವಿಜೃಂಭಣೆಯೇ ವಿನಃ ರಾಜಕೀಯ ವಿಕೇಂದ್ರೀಕರಣವಲ್ಲ. ಸಾಮಾನ್ಯವಾಗಿ ಈ ಪಂಚಾಯತಿ ಸ್ಥಾನಗಳ ಹರಾಜು ದೇವಸ್ಥಾನದ ಕಟ್ಟೆಗಳಲ್ಲಿ ನಡೆಯುತ್ತವೆ. ಯಾರು ಆ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಅಥವಾ ಅಭಿವೃದ್ಧಿಗೆ ಹೆಚ್ಚಿನ ಹಣವನ್ನು ಬಿಡ್ ಮಾಡುತ್ತಾರೋ ಅವರಿಗೆ ಅಥವಾ ಅವರು ಹೇಳಿದವರಿಗೆ ಪಂಚಾಯಿತಿ ಸ್ಥಾನಗಳು ಲಿಲಾವು ಆಗಿಬಿಡುತ್ತದೆ. ಮೈಸೂರು, ತುಮಕೂರು ಮತ್ತು ಚಾಮರಾಜನಗರದ ಹಲವಾರು ಹಳ್ಳಿಗಳಲ್ಲಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ 2-3 ಲಕ್ಷ ರೂಪಾಯಿ ಬಿಡ್ ಮಾಡಿದವರಿಗೆ ಸ್ಥಾನಗಳು ದಕ್ಕಿದವೆಂದು ವರದಿಗಳು ಹೇಳುತ್ತವೆ.

ಒಂದು ಹಳ್ಳಿಯಲ್ಲಿ ಒಂದು ಚುನಾವಣೆಗೆ ಮೂರು ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಬಲ್ಲ "ಪ್ರಜಾತಾಂತ್ರಿಕ" ಶಕ್ತಿ ಸಾಮರ್ಥ್ಯ ಇರುವುದು ಆ ಹಳ್ಳಿಯ ಭೂಮಾಲಿಕರಿಗೆ, ಬಡ್ಡಿ ವ್ಯಾಪಾರಿಗಳಿಗೆ, ಅಡಿಕೆ-ಕಬ್ಬಿನ ತೋಟದ ಮಾಲೀಕರಿಗೆ ವಿನಃ ಸಾಮಾನ್ಯ ಜನರಿಗಲ್ಲ. ಇನ್ನು ಆ ಹಳ್ಳಿಯ ಪಂಚಾಯತಿ ಸ್ಥಾನಗಳು ದಲಿತರಿಗೋ ಅಥವಾ ಮಹಿಳೆಯರಿಗೋ ಮೀಸಲಾಗಿದ್ದರೂ ಆ ಸ್ಥಾನಗಳು ಆಯಾ ಸಮುದಾಯಗಳಲ್ಲಿ ಬಿಡ್ ಮಾಡಿದವರು ಯಾರನ್ನು ಸೂಚಿಸುತ್ತಾರೋ ಅವರಿಗೆ ದಕ್ಕುತ್ತದೆಯೇ ವಿನಃ ಆ ಸಮುದಾಯಗಳು ಅಥವಾ ಆ ಗ್ರಾಮದವರು ಬಯಸಿದವರಿಗಲ್ಲ. ಅದೇ ರೀತಿ ಈ ದೇವಸ್ಥಾನಗಳ ಪಟ್ಟಿಯಲ್ಲಿ ದಲಿತರ ಕೇರಿಗಳಲ್ಲಿರುವ ದೈವಗಳ ಪಟ್ಟಿಯಿರುವುದಿಲ್ಲ. ಇನ್ನೂ ಕೆಲವು ಕಡೆ ಹೆಚ್ಚಿನ ಬಿಡ್ ಕೂಗಿದವರಿಗೆ ದಲಿತ ಕ್ಷೇತ್ರಗಳ ಸ್ಥಾನವನ್ನೂ ಮುಫತ್ತಾಗಿ ಕೊಡುತ್ತಿರುವುದೂ ನಡೆಯುತ್ತಿದೆ!



ಇದು "ವಿಕೇಂದ್ರೀಕರಣ" ರಾಜಕಾರಣದ ವಿಕೃತಿಗೆ ಕರ್ನಾಟಕದ ಕೊಡುಗೆ! ಆದರೆ ಈ ವಿಕೃತಿ ಹೊಸದೇನಲ್ಲ. ಇದಕ್ಕೂ ಹಿಂದಿನಿಂದಲೂ ಗ್ರಾಮಪಂಚಾಯತಿಗಳ ರಾಜಕಾರಣದಲ್ಲಿ ದಲಿತರ, ಹಿಂದುಳಿದ ಜಾತಿಗಳ ಮತ್ತು ಮಹಿಳೆಯರ ಪ್ರವೇಶವಾಗಿದೆ. ಆದರೆ ಅವು ನಿಜಕ್ಕೂ ಜನರ ಆದರಲ್ಲೂ ದಲಿತರ ಮತ್ತು ಮಹಿಳೆಯರ ಸಬಲೀಕರಣಕ್ಕೆ ದಾರಿ ಮಾಡಿಕೊಟ್ಟಿವೆಯೇ?

ಈಗಾಗಲೇ ಇದರ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಉತ್ತರ ಪ್ರದೇಶದಲ್ಲಿ ಗ್ರಾಮಪಂಚಾಯತಿಗಳು ನಿಜಕ್ಕೂ ಮಹಿಳೆಯರನ್ನು ಸಬಲೀಕರಿಸಿವೆಯೇ ಎಂಬ ಬಗ್ಗೆ ನಡೆದ ಅಧ್ಯಯನವು ಪುಸ್ತಕ ರೂಪದಲ್ಲಿ ಹೊರಬಂದಿದೆ. ಮಹಿಳೆಯರು ಗ್ರಾಮ ಪಂಚಾಯತಿ ಕೆಲಸ ಮಾಡುತ್ತಿದ್ದರೆ ಮನೆಗೆಲಸ ಮಾಡುವವರು ಯಾರು ಎಂಬುದೇ ಬಹುಪಾಲು ಮಹಿಳಾ ಗ್ರಾಮಪಂಚಾಯತಿ ಸದಸ್ಯರ ಗಂಡಂದಿರು ಕೇಳಿದ ಪ್ರಶ್ನೆ. ಅದರಲ್ಲೂ ಒಬ್ಬ ಗ್ರಾಮ ಪಂಚಾಯತಿ ಮಹಿಳಾ ಅಧ್ಯಕ್ಷಿಣಿಯ ಗಂಡ ಕೇಳಿದ ಪ್ರಶ್ನೆಯನ್ನೇ ಅವರು ತಮ್ಮ ಪುಸ್ತಕದ ಶೀರ್ಷಿಕೆಗೆ ಬಳಸಿಕೊಂಡಿದ್ದಾರೆ- 'And Who Will Make Chapatis'- "ಹಾಗಿದ್ದಲ್ಲಿ ಚಪಾತಿ ಮಾಡುವವರು ಯಾರು?"

ಹಸಿರು ಕ್ರಾಂತಿಯ ನಂತರದಲ್ಲಿ ದೇಶದೆಲ್ಲೆಡೆ ಗ್ರಾಮ ಪಂಚಾಯತಿಗಳನ್ನೂ ಒಳಗೊಂಡಂತೆ ಒಟ್ಟಾರೆ ಸಂಸದೀಯ ರಾಜಕಾರಣವು ಹಸಿರು ಕ್ರಾಂತಿ ಮತ್ತು ಭೂ ಸುಧಾರಣೆಗಳ ಪ್ರಧಾನ ಫಲಾನುಭವಿಗಳಾಗಿರುವ ಮತ್ತು ಸಂಖ್ಯಾತ್ಮಕವಾಗಿ ಹೆಚ್ಚಿರುವ ಹಿಂದುಳಿದ ಜಾತಿಗಳ ಮೇಲ್ಪದರವನ್ನು ಮತ್ತಷ್ಟು ರಾಜಕೀಯವಾಗಿ ಸಬಲೀಕರಿಸಿದೆ. ಆದರೆ ಅದೇ ಸಮಯದಲ್ಲಿ ಇದೇ ಪ್ರಕ್ರಿಯೆಯು ದಲಿತರನ್ನು ಮತ್ತಷ್ಟು ರಾಜಕೀಯವಾಗಿ ನಿತ್ರಾಣಗೊಳಿಸಿದೆ. ಈ ಹೊಸ ಶೂದ್ರ ಭೂಮಾಲೀಕ ಶಕ್ತಿಗಳ ದಮನಕ್ಕೆ ಗುರಿ ಮಾಡಿದೆ. 1967ರಿಂದ ಮೊದಲುಗೊಂಡು ಗ್ರಾಮಾಂತರದಲ್ಲಿ ದಲಿತರ ಮೇಲೆ ನಡೆಯುತ್ತಿರುವ ಪಾಶವೀ ಹತ್ಯಾಕಾಂಡಗಳಿಗೆ ಈ ಹೊಸ ರಾಜಕೀಯ ಆರ್ಥಿಕ ಸಮೀಕರಣವೇ ಕಾರಣ. ಹೀಗಾಗಿಯೇ ಪಂಚಾಯತಿ ಚುನಾವಣೆಗಳಲ್ಲಿ ಪಂಜಾಬಿನಿಂದ ಹಿಡಿದು ತಮಿಳುನಾಡಿನವರೆಗೆ ಹಲವಾರು ಕಡೆಗಳಲ್ಲಿ ಪ್ರಜಾತಾಂತ್ರಿಕವಾಗಿ ಆಯ್ಕೆಯಾದ ದಲಿತ ಪ್ರತಿನಿಧಿಗಳು ಅಧಿಕಾರವನ್ನು ಪಡೆಯುವಂತಾಗಿಲ್ಲ. ಈ ವಿಷಯದಲ್ಲಿ ಶೂದ್ರ ರಾಜಕಾರಣದ ತವರೂರಾದ ತಮಿಳುನಾಡಿಗೆ ಮೊದಲ ಸ್ಥಾನದಲ್ಲಿರುವ ಕುಖ್ಯಾತಿ ಇದೆ.

ಇದು ನಮ್ಮ ದೇಶದಲ್ಲಿ ವಿಕೇಂದ್ರೀಕರಣದ ರಾಜಕಾರಣದ ನಿಜವಾದ ಸ್ಥಿತಿ. ಲೋಹಿಯಾರವರು ತಮ್ಮ ಚತುಸ್ತಂಭ ರಾಷ್ಟ್ರ ಯೋಜನೆಯಲ್ಲಿ ಗ್ರಾಮ ಮತ್ತು ಜಿಲ್ಲಾ ಪಂಚಾಯತಿಗಳನ್ನು ಅಧಿಕಾರದ ವಿಕೇಂದ್ರೀಕರಣದ

▸▸ 13

ನೋ ಕಾಮೆಂಟ್ಸ್

"ದಲಿತರ ಸಂಘಟನೆಯಿಂದಾಗಿ ಕರ್ನಾಟಕದಲ್ಲಿ ಮೊದಲ ಬಾರಿಗೆ 1983ರಲ್ಲಿ ಕಾಂಗ್ರೆಸ್ಸೇತರ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಅಂತೆಯೇ ದಲಿತರ ವಿಘಟನೆಯಿಂದಾಗಿ ಪ್ರಸ್ತುತ ಬಿಜೆಪಿ ಸರ್ಕಾರ ಅಧಿಕಾರ ನಡೆಸುವಂತಾಗಿದೆ."

- ಪ್ರೊ. ಹೆಚ್. ಗೋವಿಂದಯ್ಯ

"ಇಂದು ಜಾತ್ಯತೀತ ಮುಸ್ಲಿಮರ ಧ್ವನಿ ಯಾರಿಗೂ ಕೇಳಿಸುತ್ತಿಲ್ಲ. ಮೂಲಭೂತವಾದ ಪ್ರತಿಪಾದಿಸುವವರಿಗೆ ಸಿಗುವ ಆತಿಥ್ಯ ಜಾತ್ಯತೀತ ಮುಸ್ಲಿಮರಿಗೆ ಸಿಗುತ್ತಿಲ್ಲ."

- ಜಾವೇದ್ ಅಖ್ತರ್

"70ರ ದಶಕದಲ್ಲಿ ಮಾನವೀಯತೆಯ ಬಗ್ಗೆ ಚರ್ಚೆ ನಡೆಯುತ್ತಿತ್ತು. 90ರ ದಶಕದಿಂದೀಚೆಗೆ ಮತೀಯತೆಯ ಕುರಿತು ಮಾತನಾಡುವ ಕಾಲ ಬಂತು. ಸೌಹಾರ್ದದ ಕಾಲ ಹೋಗಿ ಸಂಘರ್ಷದ ಕಾಲ ಬಂತು."

- ಬರಗೂರು ರಾಮಚಂದ್ರಪ್ಪ

"ಎಷ್ಟೋ ಹಳ್ಳಿಗಳಲ್ಲಿ ಪರಿಶಿಷ್ಟ ಜಾತಿಯವರಿಗೆ ಮನೆಯೂ ಇಲ್ಲ, ಸ್ಮಶಾನವೂ ಇಲ್ಲ."

- ಮೋಟಮ್ಮ

"ನನ್ನದಲ್ಲದ ತಪ್ಪಿಗೆ, ನಾನು 14 ವರ್ಷಗಳನ್ನು ಜೈಲಿನಲ್ಲಿ ಕಳೆದು ಬಂದಿರುವೆ. ಇದರಿಂದ ನನಗೆ ಸಿಟ್ಟೂ ಬರಬಾರದು ಎಂದರೆ ಹೇಗೆ? ನಾನು ಕಾಶ್ಮೀರದವನಾಗಿದ್ದು, 1996ರಲ್ಲಿ ದೆಹಲಿಗೆ ಬಂದಿದ್ದೇ ನನ್ನ ತಪ್ಪು. ಈಗ ನನಗೆ ಬಿಡುಗಡೆಯಾಗಿದ್ದರೂ ಸಣ್ಣ ಜೈಲಿನಿಂದ ದೊಡ್ಡ ಜೈಲಿಗೆ ಬಂದಂತೆ ಭಾಸವಾಗುತ್ತಿದೆ."

- ಸೈಯದ್ ಮಖ್ಬೂಲ್ ಷಾ, ಲಜಪತ್ ನಗರ್ ಸ್ಫೋಟ ಪ್ರಕರಣದಲ್ಲಿ 14 ವರ್ಷಗಳ ನಂತರ ನಿರ್ದೋಷಿ ಎಂದು ಬಿಡುಗಡೆಯಾದವ

"ಗ್ರಾಮಾಂತರ ಪ್ರದೇಶಗಳಲ್ಲಿ ಹಗಲು ವೇಳೆಯ ಮೂರು ಫೇಸುಗಳಲ್ಲಿ ಆರು ಗಂಟೆಗಿಂತ ಹೆಚ್ಚಿಗೆ ವಿದ್ಯುತ್ ಕೊಡಲು ಸಾಧ್ಯವಿಲ್ಲ."

- ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಹೈಕೋರ್ಟಿಗೆ ನೀಡಿದ ಹೇಳಿಕೆಯ

"ಶಾಂತಿ ಮತ್ತು ಸಹಬಾಳ್ವೆಯಿಂದ ನಮ್ಮನ್ನು ಬದುಕಲು ಬಿಡಿ. ನಮಗೆ ಪಕ್ಷ ರಾಜಕಾರಣದ ಚುನಾವಣೆ ಬೇಡ ಬೇಡ. ಅಭಿವೃದ್ಧಿ ಮತ್ತು ಶಾಂತಿ ಕಾಪಾಡುವ ಪ್ರತಿನಿಧಿಯ ಅವಿರೋಧವಾಗಿ ಆಯ್ಕೆ ಮಾಡುತ್ತೇವೆ."

- ತುಮಕೂರು ಜಿಲ್ಲೆ ಸೋಮೇನಹಳ್ಳಿ ಗ್ರಾಮಸ್ಥ

ನಂಬಿದ್ರೆನಂಬಿ ಬಿಟ್ರೆಬಿಡಿ

"ಹಾವೇರಿ ಗೋಲಿಬಾರ್ ತನಿಖೆಗೆಂದು ನೇಮಕವಾದ ನ್ಯಾಯಮೂರ್ತಿ ಜಗನ್ನಾಥ ಶೆಟ್ಟಿ ಆಯೋಗಕ್ಕೆ ಈವರೆಗೆ 90 ಲಕ್ಷ ರೂ. ವ್ಯಯ ಮಾಡಲಾಗಿದೆ."

- ವ

"ಪ್ರತಿವರ್ಷ ಸುಮಾರು 104 ರಾಷ್ಟ್ರಗಳಿಂದ 5 ಕೋಟಿ ಜನ ಈ ಮಹಾಕುಂಭ ಮೇಳದಲ್ಲಿ ಭಾಗವಹಿಸುತ್ತಾ ಆದ್ದರಿಂದ ಈ ಬಾರಿಯ ನೊಬೆಲ್ ಶಾಂತಿ ಪ್ರಶಸ್ತಿಯ ಕುಂಭಮೇಳಕ್ಕೆ ನೀಡಬೇಕೆಂದು ಆಗ್ರಹಿಸಬೇಕೆಂದು ಕೇ ಸರ್ಕಾರದ ಮೇಲೆ ಒತ್ತಡ ತರಲಾಗುವುದು."

- ಬಿಷನ್ ಸಿಂಗ್ ಚುಪಾ ಉತ್ತರ್‌ಖಂಡ್‌ನ ಬಿಜೆಪಿ ಮುಖ

"ನಕ್ಸಲರು ಭಯೋತ್ಪಾದಕರಲ್ಲ. ಈ ದೇಶದ ಅಸಮ ವ್ಯವಸ್ಥೆ ನಕ್ಸಲರ ಹುಟ್ಟಿಗೆ ಕಾರಣವಾಗಿದೆ. ಪ್ರಭುತ್ವದ ವರ್ಷಗಳ ವೈಫಲ್ಯವೇ ನಕ್ಸಲ್ ಚಳವಳಿಯ ಬೆಳವಣಿ ಕಾರಣವಾದ್ದರಿಂದ ಅದನ್ನು ಪೊಲೀಸ್ ಬಲದಿಂದ ದಮ ಮಾಡುವುದು ಸಾಧ್ಯವಿಲ್ಲ."

- ಗೋವಿಂದಾಚಾರ್ಯ, ಬಿಜೆಪಿ ಮಾಜಿ ನಾ

"ವೀರಶೈವ-ಲಿಂಗಾಯತ ಸಾದರ ಜನಾಂಗವನ್ನು 2 ಪ್ರವರ್ಗಕ್ಕೆ ಸೇರಿಸಿ ಹೊರಡಿಸಿದ ಸರ್ಕಾರಿ ಆದೇಶ ಗಮನಕ್ಕೆ ಬಂದಿಲ್ಲ. ಮಾಧ್ಯಮಗಳು ಮಾಡಿದ ವರದಿ ಮೂಲಕ ಅದು ನನ್ನ ಗಮನಕ್ಕೆ ಬಂತು. ಈ ಕು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚಿಸಿ ಮು ತೀರ್ಮಾನ ತೆಗೆದುಕೊಳ್ಳುವೆ."

- ಯಡಿಯೂ

ಒತಿಕ್ಯಾತಕ್ಕೆ ಬೇಲಿ ಸಾಕ್ಷಿ!

"ಸನ್ಯಾಸಿ ಎಂದು ಹೇಳಿಕೊಂಡು ಧ್ಯಾನಪೀಠ ಆಶ್ರಮ ನಿತ್ಯಾನಂದ ಸ್ವಾಮಿ 'ತಾಂತ್ರಿಕ್ ಸೆಕ್ಸ್'ನಲ್ಲಿ ತೊಡ ಸರಿಯಲ್ಲ. ಅದನ್ನು ಸಂಸಾರಸ್ಥರು ಮಾಡಬಹು ಸನ್ಯಾಸಿಗಳಲ್ಲ."

-ರವಿಶಂಕರ್ ಸ್ವಾ

ತ್ಯಾಪೆ ಕೆಲಸವಾಗಬಾರದಷ್ಟೆ!

"ದಲಿತ ಸಂಘರ್ಷ ಸಮಿತಿ ಮತ್ತು ಅದರ ಮುಖ ಹರಿದ ಬಟ್ಟೆಯಂತಾಗಿದ್ದು ಅದನ್ನು ಹೊಲಿದು ಮಾಡಲು ದೇವನೂರು ಮಹಾದೇವ ಮತ್ತು ಸಿದ್ಧಲಿಂ ಸೂಜಿ ಹಾಗೂ ದಾರವಾಗಬೇಕು."

- ಲಕ್ಷ್ಮೀನಾರಾಯಣ ನಾ

...ಯಡ್ಡಿ ಎಂಬ ರಾಜನೂ ಆತನ ರಾಜ್ಯ'ಭಾರ'ವೂ....



ಕಂಡಹಾಗೆ

ಗೌರಿ ಲಂಕೇಶ್


...ಮುಖ್ಯಮಂತ್ರಿ ಯಡಿಯೂರಪ್ಪನಿಗೆ ತಲೆಕೆಟ್ಟಿದೆಯೋ, ...ರದ ಅಮಲು ನೆತ್ತಿಗೇರಿದೆಯೋ ಅಥವಾ ಇವೆರಡೂ ...ಗೊಂಡು ಆತನನ್ನು ಐಲುಪೈಲು ಆಗಿಸಿದೆಯೋ ... ಎಲ್ಲರೂ ಚಿಂತಿಸುವಂತಾಗಿದೆ. ಇತ್ತೀಚೆಗೆ ಈ ...ಯೂರಪ್ಪ "ಯಾವ ಗ್ರಾಮ ಪಂಚಾಯತಿಯಲ್ಲಿ ...ು ಅವಿರೋಧವಾಗಿ ಆಯ್ಕೆಯಾಗುತ್ತಾರೋ ಆ ... ಪಂಚಾಯತಿಗೆ ಸರ್ಕಾರ ಹದಿನೈದು ಲಕ್ಷ ರೂಪಾಯಿ ... ಅನುದಾನ ಕೊಡುತ್ತದೆ" ಎಂದು ಘೋಷಿಸಿದ್ದಾರೆ. ...ಂದೆಡೆ ಹಲವು ಗ್ರಾಮಗಳಲ್ಲಿ ದೇಗುಲದ ...ರ್ಣೋದ್ಧಾರಕ್ಕೆಂದು ಪಂಚಾಯತ್ ಸ್ಥಾನಗಳು ...ಾಗುತ್ತಿದ್ದರೆ (ಇದನ್ನು ಕುರಿತು ಈ ಸಂಚಿಕೆಯಲ್ಲಿ ...ಂದರ್ ಅವರು ತಮ್ಮ ಚಾರ್ವಾಕ ಅಂಕಣದಲ್ಲಿ ...ದ್ದಾರೆ), ಇನ್ನೊಂದೆಡೆ ಅಂತಹ ಹರಾಜುಗಳಿಗೆ ...ಜ್ಯದ ಮುಖ್ಯಮಂತ್ರಿಯೇ ಪ್ರೇರಣೆ ನೀಡುತ್ತಿದ್ದಾರೆ. ...ಂದು ಪ್ರಜಾಪ್ರಭುತ್ವದಲ್ಲಿ ಚುನಾವಣೆ ಎಂಬುದು ...ುಖ್ಯ ಪ್ರಕ್ರಿಯೆ. ಆದರೆ ಜನ ಆ ಪ್ರಕ್ರಿಯೆಯನ್ನೇ ...ಟ್ಟು ತಮ್ಮನ್ನು ಪ್ರತಿನಿಧಿಸುವವರ ಸ್ಥಾನಗಳನ್ನೇ ...ಗಿಟ್ಟರೆ, ಹಾಗೆ ಮಾಡುವಂತೆ ಓರ್ವ ...್ಯಮಂತ್ರಿ ಆಮಿಷಗಳನ್ನು ಒಡ್ಡಿದರೆ, ...ಪ್ರಭುತ್ವದ ಅರ್ಥವಾದರೂ ಉಳಿಯುತ್ತದೆಯೇ? ...ವತ್ತು ಗ್ರಾಮ ಪಂಚಾಯತಿ ಸ್ಥಾನಗಳು ...ಾಗುತ್ತಿರುವ, ನಾಳೆ ಶಾಸಕ ಸ್ಥಾನಗಳು, ನಾಡಿದ್ದು ... ಸ್ಥಾನಗಳು, ಆದರಾಚೆಯ ದಿನ ಮುಖ್ಯಮಂತ್ರಿ, ... ಪ್ರಧಾನಿ ಎಲ್ಲ ಸ್ಥಾನಗಳೂ ಹರಾಜಾಗುವುದಿಲ್ಲ ... ಗ್ಯಾರಂಟಿ ಏನು? (ಈಗಾಗಲೇ ಇಂತಹ ...ಗಳು ನಡೆಯುತ್ತಿವೆ ಎಂಬುದೂ ಎಲ್ಲರಿಗೆ ಗೊತ್ತಿರುವ ... ಅದು ಬೇರೆ.)

...ಅವಿರೋಧವಾಗಿ ಆಯ್ಕೆ ಮಾಡಿದರೆ 15 ಲಕ್ಷ ...ತ್ತೇನೆ" ಎಂದಿರುವ ಯಡಿಯೂರಪ್ಪ ತನ್ನ ಸ್ಥಾನದಿಂದ ..., ಆ ಸ್ಥಾನಕ್ಕೆ ಬಳ್ಳಾರಿಯ ರೆಡ್ಡಿ ಗ್ಯಾಂಗ್ ತನ್ನ ...ಬಲ ಉಪಯೋಗಿಸಿ ಯಾರನ್ನಾದರೂ ...ರೋಧ'ವಾಗಿ ಆಯ್ಕೆ ಮಾಡಿದರೆ ಏನಾಗುತ್ತದೆ?

...ಯಡಿಯೂರಪ್ಪ ತಾನು ಹೇಳಿದ "ಅವಿರೋಧದ ...ಯ ಅರ್ಥ "ಸರ್ವಸಮ್ಮತಿ" ಎಂದು ತಿಪ್ಪೆ ಸಾರಿಸಲು ...ಬಹುದು. ಆದರೆ ಅದು ಅಷ್ಟು ಸರಳವಲ್ಲ. ...ಯೂರಪ್ಪನ ಇಡೀ ಚಿಂತನಾಕ್ರಮದ ಹಿಂದೆ ಇರುವುದು ...ನ ಫ್ಯಾಸಿಸ್ಟ್ ಧೋರಣೆ. ಆ ಫ್ಯಾಸಿಸ್ಟ್ ಧೋರಣೆಯಲ್ಲಿ ...ರೋಧ"ವೆಂದರೆ ಅ-ವಿರೋಧ ಎಂಬುದೇ ಹೊರತು ...ಸಮ್ಮತಿ" ಅಲ್ಲವೇ ಅಲ್ಲ.

ಆರೆಸ್ಸೆಸ್‌ನ ಅಂಗವಾಗಿರುವ ಬಿಜೆಪಿಯ ಪ್ರಜಾತಂತ್ರದ ತಿಳಿವಳಿಕೆಯಲ್ಲಿ ವಿರೋಧ, ಭಿನ್ನಮತ ಇರಬಾರದೆಂಬ ನಿಲುವು, ಮತ್ತು ಸರ್ವಾಧಿಕಾರಿ ನೀತಿ ಇರುವುದು ಸ್ಪಷ್ಟವಾಗಿದೆ. ಉದಾಹರಣೆಗೆ ಧರ್ಮ ಮತ್ತು ದೇಗುಲದ ಆಧಾರದ ಮೇಲೆ ತನ್ನ ಇಡೀ ರಾಜಕೀಯ ಸಿದ್ಧಾಂತವನ್ನು ಸ್ಥಾಪಿಸಿರುವ ಆರೆಸ್ಸೆಸ್ ಮತ್ತು ಬಿಜೆಪಿ ತನ್ನ ವಿರೋಧಿಗಳನ್ನು, ಭಿನ್ನಮತೀಯರನ್ನು ಧರ್ಮದ್ರೋಹಿಗಳು ಅಥವಾ ದೇಶದ್ರೋಹಿಗಳು ಎಂದು ಸುಲಭವಾಗಿ ಲೇಬಲ್ ಮಾಡುವ ಮೂಲಕ ತನ್ನ ಫ್ಯಾಸಿಸ್ಟ್ ನಿಲುವನ್ನು ಸಾಬೀತುಪಡಿಸುತ್ತದೆ.

ವಾಸ್ತವವಾಗಿ ಯಡಿಯೂರಪ್ಪನ ಈ 'ಅ-ವಿರೋಧ'



ಘೋಷಣೆಯ ಹಿಂದೆ ನಮ್ಮ ಸಂವಿಧಾನಕ್ಕೆ ಬಗೆದ ದ್ರೋಹ ಅಡಗಿದೆ. ಯಾಕೆಂದರೆ ನಮ್ಮ ಸಂವಿಧಾನದ ಪ್ರಕಾರ ನಮ್ಮ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಚುನಾವಣೆಗಳು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ವಿರೋಧ ಪಕ್ಷಗಳು ಕೂಡ. ಈ ಇಡೀ ವ್ಯವಸ್ಥೆ ನಿಂತಿರುವುದು ಕೇವಲ ಅಧಿಕಾರದಲ್ಲಿರುವ ಪಕ್ಷ ಎಂಬ ಒಂದು ಗಾಲಿಯ ಮೇಲಲ್ಲ, ಬದಲಾಗಿ, ಅಧಿಕಾರದಲ್ಲಿರುವ ಪಕ್ಷ ಮತ್ತು ವಿರೋಧ ಸ್ಥಾನದಲ್ಲಿರುವ ಪಕ್ಷ/ಪಕ್ಷಗಳು ಎಂಬ ಎರಡು ಗಾಲಿಗಳ ಮೇಲೆ. ಇದಕ್ಕೆ ಕಾರಣವೂ ಇದೆ. ಅದು ವ್ಯವಸ್ಥೆಗೆ **check and balance** ಕೊಡುವ ಉದ್ದೇಶ.

ಆದರೆ ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ಇಡೀ ರಾಜ್ಯವೇ ಬಿಜೆಪಿಯ ಸ್ವತ್ತಂತೆ, ರಾಜ್ಯದ ಬೊಕ್ಕಸ ತನ್ನ ವೈಯಕ್ತಿಕ ಆಸ್ತಿಯೆಂಬಂತೆ ಯಡಿಯೂರಪ್ಪ ವರ್ತಿಸುತ್ತಿದ್ದಾರೆ. ಒಂದೆಡೆ ರಾಜ್ಯದ ಜನರ ಹಣವನ್ನು ಮಠ-ಗುಡಿ-ಗೋಪುರ ಎಂದೆಲ್ಲ ನೀಡಿದ ಯಡಿಯೂರಪ್ಪ ಇನ್ನೊಂದೆಡೆ ತನ್ನ ಪಕ್ಷದವರು ಅಕ್ರಮವಾಗಿ ದುಡಿದ ಹಣದಿಂದ ವಿರೋಧ ಪಕ್ಷಗಳ ಶಾಸಕರನ್ನೇ ಕೊಂಡುಕೊಳ್ಳುವ ಮೂಲಕ ತಾನೆಷ್ಟು ಪ್ರಜಾತಂತ್ರ ವಿರೋಧಿ ಎಂಬುದನ್ನು ತೋರಿಸಿಕೊಟ್ಟರು.

ಹಣಕ್ಕಾಗಿ, ಅಧಿಕಾರಕ್ಕಾಗಿ ತಮ್ಮನ್ನು ಮಾರಿಕೊಂಡ ಶಾಸಕರೆಲ್ಲ ತಮ್ಮ ಈ ಕೃತ್ಯವನ್ನು ಸಮರ್ಥಿಸಿಕೊಂಡಿದ್ದು ಹೇಗೆ ಎಂಬುದು ನೆನಪಿದೆಯೇ? ಅವರೆಲ್ಲರೂ "ಆಳುವ ಪಕ್ಷದಲ್ಲಿದ್ದರೆ ಕೆಲಸ (ಅವರದ್ದೋ ಅಥವಾ ಅವರ ಕ್ಷೇತ್ರದ್ದೋ?!) ಆಗುತ್ತೆ, ವಿರೋಧ ಪಕ್ಷದಲ್ಲಿದ್ದರೆ ಆಗಲ್ಲ" ಎಂದೇ ಹೇಳಿದ್ದರು.

ಆದರೆ ಈ ನಿಲುವು ಪ್ರಜಾತಂತ್ರಕ್ಕೆ ಅಪಾಯಕಾರಿ. ಏಕೆಂದರೆ ಓರ್ವ ಶಾಸಕ ಯಾವುದೇ ಪಕ್ಷದಿಂದ ಗೆದ್ದಿದ್ದರೂ ಆತ ಪ್ರಮಾಣವಚನ ಸ್ವೀಕರಿಸಿದ ನಂತರ ಆತ ತನ್ನ ಕ್ಷೇತ್ರದ ಎಲ್ಲಾ ಜನರ ಪ್ರತಿನಿಧಿ ಆಗುತ್ತಾನೆ. ಆತ ಆಳುವ ಪಕ್ಷದ ಸದಸ್ಯನಾಗಿದ್ದರೂ, ಅಥವಾ ವಿರೋಧ ಪಕ್ಷದ ಸದಸ್ಯನಾಗಿದ್ದರೂ ಸರ್ಕಾರಕ್ಕೆ ಅದು ಮುಖ್ಯವಾಗದೆ, ಆತನನ್ನು ಮತ್ತು ಆತ ಪ್ರತಿನಿಧಿಸುವ ಕ್ಷೇತ್ರದ ಜನರನ್ನು ಸಮಾನವಾಗಿ ನೋಡಬೇಕು. ಹಾಗೆ ನೋಡದೆ ತಾರತಮ್ಯ ಮಾಡಿದರೆ ಅದು ಸಂವಿಧಾನಬಾಹಿರ ಕೃತ್ಯವಾಗುತ್ತದೆ.

ಆದರೆ ಸಂವಿಧಾನ, ಪ್ರಜಾತಂತ್ರ, ಭಿನ್ನಮತ ಇದ್ಯಾವುದೂ ಬೇಡವಾಗಿರುವ ಯಡಿಯೂರಪ್ಪ ಮತ್ತು ಆತನ ಸಂಘ ಪರಿವಾರಕ್ಕೆ ಈ ಸೂಕ್ಷ್ಮತೆಗಳೂ ನಗಣ್ಯವಾಗಿದೆ. ಈ ನೀತಿಯ ಹಿನ್ನೆಲೆಯಲ್ಲಿಯೇ ಯಡಿಯೂರಪ್ಪ "ಅವಿರೋಧ" ಆಯ್ಕೆ ಮಾಡಿದರೆ 15 ಲಕ್ಷ ರೂಪಾಯಿಗಳ ಆಮಿಷವನ್ನು ಜನರಿಗೆ ಒಡ್ಡಿರುವುದು. ಅಕಸ್ಮಾತ್ ಯಡಿಯೂರಪ್ಪನ ಆಮಿಷಕ್ಕೆ ಬಲಿಯಾಗಿ ಗ್ರಾಮ ಪಂಚಾಯತಿಗಳಿಗೆ ಜನ "ಅವಿರೋಧ"ವಾಗಿ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿದರೆ ಎಂತಹವರು ಅಧಿಕಾರಕ್ಕೆ ಬರಬಹುದು? ಉತ್ತರ ಸುಲಭ. ಒಂದೋ ಬಿಜೆಪಿಯ ಪರವಾಗಿರುವವರು, ಅಥವಾ ಮೇಲುಜಾತಿ ಮತ್ತು ವರ್ಗದವರು ಅಥವಾ ಮೀಸಲಾತಿ ಎಂಬ ಅಡಚಣೆಯಿಂದಾಗಿ ಈ ಬಿಜೆಪಿ ಪರ ಮತ್ತು ಮೇಲುಜಾತಿ/ವರ್ಗದವರು ಸೂಚಿಸುವ ಕೈಗೊಂಬೆಗಳು. ಆಗ ಪಂಚಾಯತ್ ರಾಜ್ ವ್ಯವಸ್ಥೆ ಅಡಿ ಅಧಿಕಾರದ ವಿಕೇಂದ್ರೀಕರಣಕ್ಕೆ ಅರ್ಥ ಉಳಿಯುತ್ತದೆಯೇ?

ಇನ್ನೊಂದು ಮುಖ್ಯ ಅಂಶ ಯಾವುದೆಂದರೆ ಅ-ವಿರೋಧ ಆಯ್ಕೆಯ ಆಮಿಷವನ್ನೊಡ್ಡುವ ಮೂಲಕ ಯಡಿಯೂರಪ್ಪ ಮತದಾನದ ಹಕ್ಕನ್ನೇ ಜನರಿಂದ ಕಸಿದು ಕೊಳ್ಳುತ್ತಿದ್ದಾರೆ. ಇದು ಸಂವಿಧಾನಬಾಹಿರ ಕೃತ್ಯ ಮಾತ್ರವಲ್ಲದೆ ಶಿಕ್ಷಾರ್ಹ ಕೂಡ ಆಗಿದೆ. ಆದರೆ ಯಡಿಯೂರಪ್ಪನಿಗೆ ಕಾನೂನ ಬಗೆಗಿನ ಹೆದರಿಕೆಯಾಗಲಿ, ಗೌರವವಾಗಲಿ ಇಲ್ಲವೇ ಇಲ್ಲ.

ಯಡಿಯೂರಪ್ಪ ಮತ್ತು ಆತನ ಹಿಂದೂತ್ವವಾದಿ-ಫ್ಯಾಸಿಸ್ಟ್ ಸಂಘ ಪರಿವಾರದ ದೃಷ್ಟಿಯಲ್ಲಿ ಜನ ಅಂದರೆ ಹಕ್ಕುಗಳನ್ನುಳ್ಳ ನಾಗರಿಕರಲ್ಲ, ಬದಲಾಗಿ ಹಿಂದಿನ ರಾಜರ ಕಾಲದಲ್ಲಿ ಪ್ರಜೆಗಳಿದ್ದರಲ್ಲ ಅಂತಹ ಯಾವುದೇ ಹಕ್ಕಿಲ್ಲದ ಪ್ರಜೆಗಳು. ಹೇಗಿದ್ದರೂ ಸಂಘಪರಿವಾರಿಗಳು ತಮ್ಮ ಸಂವಿಧಾನ ಎಂದೇ ಭಾವಿಸಿರುವ ಮನುಶಾಸ್ತ್ರ ಕೂಡ. "ರಾಜ ಪ್ರತ್ಯಕ್ಷ ದೇವರು" ಎಂದಿರುವುದರಿಂದ ಯಡಿಯೂರಪ್ಪ ಭಾವನೆಯಲ್ಲಿ ತಾನು 'ರಾಜ', ಈ ರಾಜ್ಯದ ಜನ ಆತನ 'ಪ್ರಜೆಗಳು'. ಹೀಗಾಗಿಯೇ ಯಡಿಯೂರಪ್ಪ ಹಳೇಕಾಲದ ರಾಜರಂತೆ ಮಠ-ಮಂದಿರಗಳಿಗೆ ಬೊಕ್ಕಸದ ಹಣ ನೀಡುತ್ತಾರೆ, ಅವಿರೋಧವಾಗಿ ನಿಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಎಂದು ಜನರಿಗೆ ಆಮಿಷ ಒಡ್ಡುತ್ತಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರೇ ಪ್ರಭುಗಳು ಎಂದೂ, ಜನಪ್ರತಿನಿಧಿಗಳು ಜನಸೇವಕರು ಎಂದೂ ಭಾವಿಸಲಾಗಿದ್ದರೆ ಯಡಿಯೂರಪ್ಪನ ಕಲ್ಪನೆಯಲ್ಲಿ ಮನುವಿನ ರಾಜ-ಪ್ರಜೆ ಸಂಬಂಧ ಗಾಢವಾಗಿದ್ದು ಅಲ್ಲಿ ಜನರಿಗೆ ಮತದಾನದ ಹಕ್ಕೇ ಇಲ್ಲ.

ಇಂತಹ ಮನುಷ್ಯ ಮತ್ತಾತನ ಪಕ್ಷಕ್ಕೆ ನಮ್ಮ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನರೇ ಪ್ರಭುಗಳು ಎಂದು ಮುಂದಿನ ಬಾರಿ ಪಾಠ ಕಲಿಸುವ ಜವಾಬ್ದಾರಿ ಈ ರಾಜ್ಯದ ಜನರ ಮೇಲಿದೆ.

...ಂಗಳೂರು SEZ ಗೂಂಡಾಗಿರಿ ...ೀದಿಗೆ ಬಿದ್ದ ರೈತ

...ಳೆದ 20 ವರ್ಷಗಳಿಂದ ತಮ್ಮ ಮನೆ, ತೋಟ ... ಭೂಸ್ವಾಧೀನವಾಗದಂತೆ ಹೋರಾಡಿಕೊಂಡು ...ದ್ದ ರೈತ ಗ್ರೆಗೊರಿ ಪತ್ರಾವೊ ಅವರ 350 ವರ್ಷಗಳ ...ತೋಟಗಳನ್ನೆಲ್ಲ ಮೊನ್ನೆ ಏಪ್ರಿಲ್ 28 ರಂದು ...ೂರು SEZ ನ ಗೂಂಡಾಗಳು, ಪೊಲೀಸರು, ... ಅಧಿಕಾರಿಗಳೆಲ್ಲ ಧ್ವಂಸ ಮಾಡಿದ್ದಾರೆ. ಕೋರ್ಟಿನ ...ವನ್ನು ತೋರಿಸದ ಈ ರಾಕ್ಷಸರು ಪತ್ರಾವೊ ಅವರ ...ವನ್ನು ಏಕಾಏಕಿ ಬೀದಿಗೆ ತಳ್ಳಿದ್ದಾರೆ. ಪ್ರಭುತ್ವದಿಂದ ...ಪತ್ರಾವೊ ಒಬ್ಬರಿಗಾದ ಅನ್ಯಾಯವಲ್ಲ, ಮಂಗಳೂರು ... ವಲಯಕ್ಕಾಗಿ ಸಾವಿರಾರು ಕುಟುಂಬಗಳು ಹೀಗೆ ... ಮನೆ, ಜಮೀನುಗಳಿಂದ ಬಲಾತ್ಕಾರದಿಂದ ...ಹಾಕಲ್ಪಟ್ಟಿವೆ. ಇಲ್ಲಿ ನೀಡಿರುವ ಪತ್ರಾವೊರ ಕತೆ ...ರ ಕತೆಯೂ ಆಗಿದೆ.

...ಂಗಳೂರು ತಾಲ್ಲೂಕಿನ ಕಳವಾರ ಗ್ರಾಮದ ಗ್ರೆಗೊರಿ ... ಅವರ ಹದಿನಾರು ಎಕರೆ ಜಮೀನು ಮತ್ತು ...ಮನೆಯನ್ನು ವಶಪಡಿಸಿಕೊಳ್ಳಲು ಮಂಗಳೂರು ... ಅಧಿಕಾರಿಗಳು ಹರಸಾಹಸ ಮಾಡಿದ್ದರೂ ...ವರೆಗೆ ಆಗಿರಲಿಲ್ಲ. ಈಗಾಗಲೇ ಇಲ್ಲಿ ಎರಡು ... ಎಕರೆಯಷ್ಟು ಭೂಮಿಯನ್ನು ರೈತರಿಂದ ...ಂಡು ಎಂಆರ್‌ಪಿಎಲ್-ಒಎನ್‌ಜಿಸಿ ಕಂಪನಿಗೆ ...ರೆ. ಗ್ರೆಗೊರಿ ಪತ್ರಾವೊ ಮಾತ್ರ ನ್ಯಾಯಾಂಗ ...ಟ ನಡೆಸುತ್ತ ತಮ್ಮ ಜಮೀನನ್ನು ರಕ್ಷಿಸಿಕೊಂಡು ...ರು. ಹಾಗೆ ನೋಡಿದರೆ ಭೂಸ್ವಾಧೀನಕ್ಕೆಂದು ...ಬ ಮೊದಲಿಗೆ ಗುರುತಿಸಿರುವ ಭೂಪ್ರಾಸ್ತಿಯಲ್ಲಿ ಪತ್ರಾವೊ ಅವರ ಭೂಮಿ ಬರುವುದಿಲ್ಲ. ಆದರೆ ಎಂಆರ್‌ಪಿಎಲ್- ಒಎನ್‌ಜಿಸಿಗಳಿಗೆ ತಮ್ಮ ಸಾಮ್ರಾಜ್ಯದ ಪಕ್ಕ ರೈತರ ಕುಟುಂಬವೊಂದು ಬದುಕುವುದು ಇಷ್ಟವಿಲ್ಲ. ಏಕೆಂದರೆ ಈ ಭೂಮಿಯನ್ನು ವಶಪಡಿಸಿಕೊಂಡರೆ ಮುಂದೆ ಇನ್ನೂ ನೂರಾರು ಎಕರೆ ಭೂಮಿಯವರೆಗೆ ತಮ್ಮ ಸಾಮ್ರಾಜ್ಯ ವಿಸ್ತರಿಸಬಹುದು ಎಂಬುದು ಈ ಕಂಪನಿಗಳ ಕುತಂತ್ರ.

ಅವಿರತ ಹೋರಾಟದ ನಂತರ ಕೋರ್ಟಿನಲ್ಲಿ ಪತ್ರಾವೊ ಅವರಿಗೆ ಹಿನ್ನಡೆ ಆಗುವಂತೆ ಈ ಕಂಪನಿಗಳು ಸಂಚು ಮಾಡಿ ಯಶಸ್ವಿಯಾದವು. ಆದರೆ ಪತ್ರಾವೊ ಅವರಿಗೆ ಇನ್ನೂ ಭೂಸ್ವಾಧೀನ ಕುರಿತ ಕೋರ್ಟ್ ಆದೇಶ ತಲುಪಿಲ್ಲ. ಹಾಗೆಯೇ ಮೊನ್ನೆ ಏಕಾಏಕಿ ನುಗ್ಗಿ ದೌರ್ಜನ್ಯ ನಡೆಸಿದ ಎಸ್‌ಇಜೆಡ್ ಗೂಂಡಾಗಳು, ಪೊಲೀಸರ ಬಳಿಯೂ ಕೋರ್ಟ್ ಆದೇಶವಿರಲಿಲ್ಲ. ಗ್ರೆಗೊರಿ ಪತ್ರಾವೊ, ಅವರ 80 ವರ್ಷದ ತಾಯಿ ಮೇರಿ ಪತ್ರಾವೊ ಅವರು ಮಾಡಿದ ಮನವಿ, ಬೇಡಿಕೆಗಳನ್ನು ಲೆಕ್ಕಿಸದ ಸರ್ಕಾರಿ ಧೂರ್ತರು ಪಕ್ಕಾ ರೌಡಿಗಳಂತೆಯೇ ವರ್ತಿಸಿದ್ದಾರೆ. ಈ ದೌರ್ಜನ್ಯ ನಡೆಸಲು ಡಿವೈಎಸ್‌ಪಿ ಗಿರೀಶ್, ಸರ್ಕಲ್ ಇನ್ಸ್‌ಪೆಕ್ಟರುಗಳಾದ ನಾಗರಾಜ್, ವಿನ್ಸೆಂಟ್ ಡಿಸೋಜಾ, ಶಿವಪ್ರಕಾಶ್, ತಹಶೀಲ್ದಾರ್ ಮಂಜುನಾಥ್ ಮತ್ತು ಕಂದಾಯ ಇನ್ಸ್‌ಪೆಕ್ಟರ್ ಬಾಲಕೃಷ್ಣ ರೈ ಇವರೆಲ್ಲ 50 ಪೊಲೀಸರು, ನೂರಾರು ಎಸ್‌ಇಜೆಡ್ ಗೂಂಡಾಗಳನ್ನು ಹಿಂದಿಟ್ಟುಕೊಂಡು ಬಂದಿದ್ದರು. ನ್ಯಾಯಯುತವಾಗಿಯೇ ಭೂಸ್ವಾಧೀನ ಮಾಡುವದಿದ್ದರೆ, ಪತ್ರಾವೊ ಎಂಬ ಅಸಹಾಯಕ ರೈತನನ್ನು ಎದುರಿಸಲು ಇಷ್ಟೊಂದು ದೊಡ್ಡ ಫೋರ್ಸ್ ಬೇಕಿತ್ತಾ?

ಅಂದು (ಏಪ್ರಿಲ್ 28) ಮುಂಜಾನೆ ಎಂದಿನಂತೆ ನೀರು ಹಾಯಿಸಿ, ಜಾನುವಾರುಗಳಿಗೆ ಮೇವು ಹಾಕಿ ತಿಂಡಿ ತಿನ್ನುತ್ತಿದ್ದ ಪತ್ರಾವೊರ ಮನೆ ಎದುರು ಮೇಲಿನ ದುಷ್ಟಪಡೆ ಪ್ರತ್ಯಕ್ಷವಾಗಿದೆ. ಬಂದಿದ್ದೇ ತಡ, ಪತ್ರಾವೊ ಅವರ ಮನೆಯೊಳಗಿನ ಭತ್ತ ಅಡಿಕೆ ಚೀಲಗಳನ್ನೆಲ್ಲ ಹೊರಗೆ ಎತ್ತಿ ಹಾಕಿದ್ದಾರೆ. ಪತ್ರಾವೋ ಮತ್ತು ಅವರ ಮನೆಯವರು ಎಷ್ಟು ಗೋಗರೆದರೂ ಈ ಸರ್ಕಾರಿ ಗೂಂಡಾಗಳು ಕೇಳಿಸಿಕೊಂಡಿಲ್ಲ. ಪತ್ರಾವೊ ಅವರ ಮನೆಯಲ್ಲಿನ ಪಾತ್ರೆ,



ಧ್ವಂಸಗೊಂಡ ರೈತ ಪತ್ರಾವೊ ಮನೆ

ಪೀಠೋಪಕರಣ, ಬೆಳ್ಳಿ, ಬಂಗಾರದ ವಸ್ತುಗಳನ್ನೆಲ್ಲ ಸರಿಯಾಗಿ 'ಮಹಜರ್' ನಡೆಸದೇ ಹೊತ್ತೊಯ್ದಿದ್ದಾರೆ ತಹಶೀಲ್ದಾರ್, ಕಂದಾಯ ಅಧಿಕಾರಿಗಳು. (ಈಗ ಅದರಲ್ಲಿ ಹಲವಾರು ದುಬಾರಿ ಪಾತ್ರೆಗಳು ಮತ್ತು 400 ಗ್ರಾಂ. ಬಂಗಾರ ಮಾಯವಾಗಿವೆ!)

ಹೀಗೆ ಪತ್ರಾವೋ ಅವರನ್ನು ಮನೆಯಿಂದ ಹೊರಹಾಕಿದ ಎಸ್‌ಇಜೆಡ್ ಪಡೆ ಬುಲ್ಡೋಜರ್ ಹರಿಸಿ ಸುಮಾರು 350 ವರ್ಷಗಳ ಐತಿಹಾಸಿಕ ಮಹತ್ವವಿರುವ ಮನೆಯನ್ನು ಒಡೆದುಹಾಕಿದೆ. ಜಮೀನಿನಲ್ಲಿದ್ದ ದನಗಳ ಕೊಟ್ಟಿಗೆಯನ್ನು ಕೆಡವಿಹಾಕಿದೆ. ಅರ್ಧ ಗಂಟೆಯೊಳಗೆ ಪತ್ರಾವೊ ಕುಟುಂಬ ಬೀದಿಪಾಲಾಗಿದೆ.

ಕಳೆದ ವರ್ಷ ನವೆಂಬರ್ 8, 2009ರಂದು ಬಜ್ಪೆಯಲ್ಲಿ ಜನ ಅದಾಲತ್ ನಡೆದಾಗ ಪತ್ರಾವೊರಂತಹ ಸಾವಿರಾರು ರೈತರು ತಮ್ಮ ಸಂಕಟಗಳನ್ನು ತೋಡಿಕೊಂಡಿದ್ದರು. ಅವತ್ತು ಇದಕ್ಕೆ ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ (EPW)ಯ ರಾಮಮೋಹನ ರೆಡ್ಡಿ, ಚಿಂತಕ ಜಿ.ರಾಜಶೇಖರ, ಲೇಖಕಿ ವೈದೇಹಿ ಮುಂತಾದವರೆಲ್ಲ ಸಾಕ್ಷಿಯಾಗಿದ್ದರು. ಮುಂದೆ ಇದು ಚಳವಳಿ ರೂಪ ಪಡೆಯಿತಾದರೂ, ಭೂಸ್ವಾಧೀನ ಮಾತ್ರ ನಿಲ್ಲಲೇ ಇಲ್ಲ. ಪತ್ರಾವೋ ಪರವಾಗಿ ಎಂಆರ್ ಪಿಎಲ್-ಒಎನ್‌ಜಿಸಿ ಎಂ.ಡಿ.ಗೆ EPWನ ಸಂಪಾದಕ ರಾಮಮೋಹನ ರೆಡ್ಡಿ ಮತ್ತು ಲೇಖಕಿ ವೈದೇಹಿಯವರು ಪ್ರತ್ಯೇಕವಾಗಿ ಬರೆದ ಪತ್ರಗಳಿಗೆ ನೀರಸ ಪ್ರತಿಕ್ರಿಯೆಯಷ್ಟೇ ಬಂತು. ಕೊಬ್ಬಿದ ಪ್ರಭುತ್ವಕ್ಕೆ ಕಣ್ಣು, ಕಿವಿ, ಸ್ಪರ್ಶ ಯಾವುದೂ ಇರುವುದಿಲ್ಲ ಅಲ್ಲವೇ?

ಪತ್ರಾವೊರಿಗೆ ಪರಿಹಾರ, ಕೆಲಸ ಕೊಡುವುದಾಗಿ ಕಂಪನಿ ಬೊಗಳುತ್ತಿದೆ. ಸ್ವಾಭಿಮಾನಿ ರೈತನಾಗಿ ತನ್ನ ಜಮೀನಿನೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದ ಗ್ರೆಗೊರಿ ಪತ್ರಾವೊ ಕಾರಕೂನಿಕೆ ಕೆಲಸ ಮಾಡಲು ಸಾಧ್ಯವೇ? ಕೃಷಿ ಹೊರತಾಗಿ ಏನೂ ಗೊತ್ತಿಲ್ಲದ ಅವರ ಬದುಕುವ ಸ್ವಾತಂತ್ರ್ಯವನ್ನು ಕಿತ್ತುಕೊಂಡ ಈ ವ್ಯವಸ್ಥೆಗೆ ನಮ್ಮ ಧಿಕ್ಕಾರವಿರಲಿ. ಮತ್ತಷ್ಟು ಪತ್ರಾವೊಗಳಿಗೆ ಹೀಗಾಗಬಾರದೆಂದರೆ ಇಲ್ಲೊಂದು ದೊಡ್ಡ ಪ್ರತಿರೋಧದ ಚಳವಳಿಯೇ ನಡೆಯಬೇಕು.

• ಮಲ್ಲನಗೌಡರ್

"ಭೂತದ ಬಾಯಲ್ಲಿ ಭಗ್ವತ್ ಗೀತೆ" ಎಂದು ಇಂಥ ಸೋಗಲಾಡಿ ವಟುಗಳನ್ನು ಕಂಡೇ ಬಲ್ಲವರು ಹೇಳಿರಬೇಕು. "ಕಾಡು ಉಳಿಸಿ ಪರಿಸರ ಸಂರಕ್ಷಿಸಿ" ಎಂದು ಗಂಟಲು ಹರಿವಂತೆ ಬೊಬ್ಬೆ ಹೊಡೆಯುವ ಅನಂತ್ ಹೆಗಡೆ ಆಶೀಸರ ಎಂಬ ಹೆಸರಾಂತ ಪರಿಸರವ್ಯಾಧಿ ಪಶ್ಚಿಮ ಘಟ್ಟದ ಸಮೃದ್ಧ ಎಕರೆಗಟ್ಟಲೆ ಅರಣ್ಯ ಅತಿಕ್ರಮಿಸಿ ಅಡಿಕೆ ತೋಟ ಮಾಡಿಕೊಂಡಿದ್ದಾನೆ! ಈ ಸಾಧನೆ-ಸಾಹಸಕ್ಕಾಗಿ ಯಡ್ಡಿ ಸರ್ಕಾರ ಸದ್ದಿ ಚೆಡ್ಡಿ ವಿಪ್ರೋತ್ತಮನಿಗೆ ಪಶ್ಚಿಮ ಘಟ್ಟ ಕಾರ್ಯಪಡೆ ರಚಿಸಿ ಅದರ ಅಧ್ಯಕ್ಷತೆ-ಗೂಟದ ಕಾರು-ಮಂತ್ರಿಗಿರಿ ಕಾರುಬಾರು ಇನಾಮಾಗಿ ನೀಡಿದೆ!!

"ಚಿಪ್ಕೋ" ನೇತಾರ ಸುಂದರ್‌ಲಾಲ್ ಬಹುಗುಣರ ಅಪರಾವತಾರ ತಾನೆಂಬ ಗೆಟಪ್ಪಿನಲ್ಲಿ ಅಂಡಲೆವ ಈ ಆಶೀಸರ ಮಾಣಿ ಪರಿಸರ ಬಂಡವಾಳ ಮಾಡಿಕೊಂಡಿರುವುದರ ಹಿಂದೆ ಎಂಪಿ-ಎಮ್ಮೆಲ್ಲೆ ಆಗುವ ಹಪಾಹಪಿಯ ಹಿಡನ್ ಅಜೆಂಡಾ ಅಡಗಿರುವುದು ಬಹಿರಂಗ ರಹಸ್ಯ. ಅರಣ್ಯ-ಪ್ರಕೃತಿಯ ಹಸಿರಿಗೆ ಕಾವಿ ತೊಡಿಸಿ "ಧರ್ಮಕಾರಣ" ಮಾಡಲು ಕಳೆದ ಕಾಲು ಶತಕದಿಂದ ಈ ಅನಾಹುತಕಾರಿ ಸಂಘ ಪರಿವಾರಿ ಬಗೆಬಗೆಯ ಪರಿಸರ ಫೇನ್ಸಿ ಡ್ರೆಸ್ ತೊಡುತ್ತಲೇ ಬಂದಿದ್ದಾನೆ. ಕಳೆದ ಅಸೆಂಬ್ಲಿ-ಪಾರ್ಲಿಮೆಂಟ್ ಇಲೆಕ್ಷನ್ ಹೊತ್ತಲ್ಲಿ ಈ ಹೈಗರ ಮಾಣಿ ಬಿಜೆಪಿ ಟಿಕೆಟ್ ಪಡೆಯಲು ಒಳಗೊಳಗೇ ತುಂಡುಗುಪ್ಪಳ ಹೊಡೆದು ಸುಸ್ತಾಗಿದ್ದ, ಪಾಪ!

ಆಶೀಸರ ಮಾಣಿ ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಮಂತ್ರಿ ಕಾಗೇರಿ ಮಾಣಿಯ ಖಾಸಾ ಬಂಟ. ಸಮಯ ಸಿಕ್ಕಾಗೆಲ್ಲ ಸ್ವಜಾತಿ ಎದುರಾಳಿ ಸಂಸದ ಅನಂತ್ಮಾಣಿಯ ವಿರುದ್ಧ ಕಾಗೇರಿ ಈ ಆಶೀಸರನನ್ನು ಛೂ ಬಿಡುವುದು ವಾಡಿಕೆ! ಕಳೆದ ಲೋಕಸಭೆ ಚುನಾವಣೆ ಹೊತ್ತಲ್ಲಿ ಅಧಿಕ ಪ್ರಸಂಗಿ ಅನಂತ್ಮಾಣಿಗೆ ಟಿಕೆಟ್ ಕೊಡುವುದು ಬಿಜೆಪಿಯಲ್ಲಿ ಬಹುತೇಕರಿಗ್ಗೆ ಮನಸ್ಸಿರಲಿಲ್ಲ. ಆಗ ಆಶೀಸರನೇ ಹೈಗರ ಟೀಮಿನ ಪರ್ಯಾಯ ಅಭ್ಯರ್ಥಿಯೆಂದು ಬಿಂಬಿಸಲಾಗಿತ್ತು. ಹಾಗೇ ಆಶೀಸರನ ಹೆಸರು ತೇಲಿಬಿಟ್ಟದ್ದೇ ಕಾಗೇರಿಯಾಗಿತ್ತು. ಆದರೆ ಅನಂತ್ಮಾಣಿಯ ಖತರ್‌ನಾಕ್ ಹಿಂದೂತ್ವದ ಇಮೇಜಿನೆದುರು ಆಶೀಸರನ ಚೆಡ್ಡಿ ಲಾಬಿ ಪ್ರಯತ್ನ ವರ್ಕ್‌ಔಟ್ ಆಗಲೇ ಇಲ್ಲ.


ಕಾಗೇರಿ ಮಾಣಿ ಎಬಿವಿಪಿ ರಾಜಕಾರಣ ಶುರು ಹಚ್ಚಿಕೊಂಡಿದ್ದು ಮತ್ತು ಆಶೀಸರ ಮಾಣಿ ಪರಿಸರ ಪಾಲಿಟಿಕ್ಸ್ ಪ್ರಾರಂಭಿಸಿದ್ದು ಹೆಚ್ಚು-ಕಮ್ಮಿ ಒಂದೇ ಅವಧಿಯಲ್ಲಿ. ಸುಮಾರು 25 ವರ್ಷದ ಹಿಂದೆ ಈ ಠಕ್ಕ-ಠಿಕ್ಕರು ಸಂಘ ಪರಿವಾರದ ಎರಡು ವಿಂಗ್‌ನಿಂದ ಅಧಿಕಾರ ರಾಜಕಾರಣದ ಬೆನ್ನುಹತ್ತಿ ಜನರಿಗೆ ಮಂಕುಬೂದಿ ಎರಚಲಾರಂಭಿಸಿದ್ದರು ಕಾಗೇರಿ ಮಂತ್ರಿಯಾಗುತ್ತಲೇ ಈ ಸ್ವಜಾತಿ ಸಹಚರನಿಗೆ ಹಿಂದೂತ್ವದ ಫಲಾನುಭವಿ ಮಾಡಲು ಸ್ಕೆಚ್ ಹಾಕಿಕೊಂಡಿದ್ದರು. ಕಾಗೇರಿ ಮತ್ತು ಕೇಶವ ಶಿಲ್ಪದ ಪವರ್ ಬ್ರೋಕರ್‌ಗಳು ಯಡ್ಡಿ ಕಿವಿಯೂದಿ "ಪಶ್ಚಿಮ ಘಟ್ಟ ಕಾರ್ಯಪಡೆ" ಎಂಬ ಬೋಗಸ್ ಮಂಡಳಿಯೊಂದನ್ನು ಹೊಸದಾಗಿ ಹುಟ್ಟುಹಾಕಿಸಿದರು.

ಇಪ್ಪತ್ತೈದು ವರ್ಷದಿಂದ "ವೃಕ್ಷಲಕ್ಷ" ಎಂಬ ಅಮೋಘ ಪರಿಸರ ಆಂದೋಲನ ಮಾಡುತ್ತಿರುವ ಆಶೀಸರನಷ್ಟು ಪಶ್ಚಿಮ ಘಟ್ಟ ಪರಿಸರದ ಕಾಳಜಿ ಜಗತ್ತಿನಲ್ಲೇ ಇನ್ನಾರಿಗೂ ಇರಲು ಸಾಧ್ಯವಿಲ್ಲ ಎಂಬ 'ಮೆರಿಟ್' ಪರಿಗಣಿಸಿ ಆತನಿಗೇ ಈ ಪರಿಸರ ಕಮಾಯಿ ಪಡೆಯ ಯಜಮಾನಿಕೆಯನ್ನು ಸಿಎಂ ಯಡ್ಡಿ ಮತ್ತು ಚೆಡ್ಡಿ ಪಠಾಲಂ ವಹಿಸಿತು. ಈ ಪರಿಸರ ಸೇವೆಗೆಂದು ಆಶೀಸರನಿಗೆ ಮಂತ್ರಿಗಿರಿ ಸೌಲತ್ತು-ಗೂಟದ ಕಾರು ಕರುಣಿಸಲಾಯ್ತು.

ತಮಾಷೆಯೆಂದರೆ ಈ ಕಾರ್ಯ ಪಡೆಯದು ಬಜೆಟ್ ಇಲ್ಲದ ಬಡಿವಾರ. ಪರಿಸರ ನಿರಾಶ್ರಿತ ಆಶೀಸರ್‌ಗೆ ಬಿಜೆಪಿ ಸರ್ಕಾರ ಮಾಡಿರುವ ಪುನರ್ವಸತಿಗೆ ಅರಣ್ಯ ಇಲಾಖೆಯೇ ಹಣ ತೆರಬೇಕು. ಮೊದಲೇ ಅನುದಾನ ಕೊರತೆಯಿಂದ ಒದ್ದಾಡುತ್ತಿರುವ ಅರಣ್ಯ ಇಲಾಖೆ ಆಶೀಸರನ ದೌಲು-ದರ್ಬಾರಿಗೆಲ್ಲ ಕಾಸು ಕೊಡಬೇಕು.

ಪರಿಸರ ವ್ಯಾಧಿ ಆಶೀಸರ ಮಾಣಿಯ ಅರಣ್ಯ ಸ್ವಾಹಾ ಸ್ಟೋರಿ

ಆಶೀಸರ ಮಾಣಿ ಪರಿಸರವಾದಿಯಲ್ಲ; ಪಕ್ಕಾ ಪರಿಸರ ವೈರಿ. ಈ ನಕಲಿ ಪರಿಸರವಾದಿ ತನ್ನೂರು ಶಿರಸಿ ತಾಲ್ಲೂಕಿನ ಆಶೀಸರ ಎಂಬಲ್ಲಿ ಘೋರ ಪರಿಸರ ವಿರೋಧಿ ಪಾತಕ ಮಾಡಿದ್ದಾನೆ. ಜೀವ ವೈವಿಧ್ಯತೆಯ ಪಶ್ಚಿಮ ಘಟ್ಟದ ಅಪಾರ ಬೆಲೆಬಾಳುವ ಹತ್ತು ಎಕರೆಯಷ್ಟು ಅರಣ್ಯ ಕಬ್ಜಾ ಮಾಡಿಕೊಂಡು ಭರ್ಜರಿ ಅಡಿಕೆ ತೋಟವನ್ನು ಅನಂತ್ ಹೆಗಡೆ ಆಶೀಸರ ತಯಾರು ಮಾಡಿದ್ದಾನೆ; ಅರ್ಧ ಕೋಟಿ ರೂ.ಗಳ ಮರ-ಗಿಡ ಅಪೋಷನ ಪಡೆದಿದ್ದಾನೆ.


ಆಶೀಸರನ ತೋಟ...

ಕಾರಿಗೆ ಇಂಧನ ತುಂಬಿಸಬೇಕು. ಕ್ಯಾಬಿನೆಟ್ ಮಿನಿಸ್ಟರ್ ಲೆವಲ್‌ನ ಕಾರ್ಯಪಡೆ ಅಧ್ಯಕ್ಷರಿಗೆ ಲಕ್ಷಾಂತರ ವ್ಯಯಿಸಿ ಪ್ರೋಟೋಕಾಲ್ ಪರಿಪಾಲಿಸಬೇಕು. ಒಟ್ಟಿನಲ್ಲಿ ಈ ಬಿಳಿ ಆನೆ ಸಾಕುವುದು ಅರಣ್ಯ ಇಲಾಖೆಗೆ ಸಾಕುಸಾಕಾಗಿ ಹೋಗಿದೆ!

ಕಾರ್ಯಪಡೆ ಕಿಂಗ್ ಆಗುವ ಮೊದಲು ವೃಕ್ಷಲಕ್ಷ ಆಂದೋಲನ, ಅಪ್ಪಿಕೋ ಚಳವಳಿ, ಬೇಡ್ತಿ-ಅಘನಾಶಿನಿ-ಕೈಗಾ ಹೋರಾಟವೆಂದಲ್ಲ 'ಪರಿಸರ ನಾಟಕ' ಮಾಡುತ್ತಿದ್ದ ಆಶೀಸರ ಗೂಟದ ಕಾರು ಸಿಗುತ್ತಲೇ ಪಕ್ಕಾ ಫುಲ್‌ಟೈಮ್ ಪುಢಾರಿಯಂತಾಗಿ ಹೋದ! ವೃಕ್ಷ ಲಕ್ಷ ಮರೆತೇಹೋಯ್ತು, ಆ ಸಂಘಟನೆ ಸತ್ತು ಹೋಯ್ತು. ಆಶೀಸರನ ಕಣ್ಣೆದುರೇ ಶಿರಸಿ-ಮುಂಡಗೋಡ-ಯಲ್ಲಾಪುರದಲ್ಲೇ ಹಾಡುಹಗಲೇ ಕಾಡು ಕಡಿದು ಕಳ್ಳ ಸಾಗಾಣಿಕೆ ಮಾಡುತ್ತಿದ್ದರೂ ಆತನಿಗದು 'ಈಶ್ಯೂ' ಎನಿಸಲೇ ಇಲ್ಲ.


ಆಶೀಸರ

ಕಾರವಾರದ ಹಣಕೋಣದಲ್ಲಿ ಥರ್ಮಲ್ ವಿದ್ಯುತ್ ಪ್ರಾಜೆಕ್ಟ್‌ನಿಂದ ಪರಿಸರ ಹಾಳಾಗುವುದು ಆಶೀಸರ್‌ಗೆ ಅರ್ಥವಾಗಲಿಲ್ಲ. ಬಿಜೆಪಿ ಸರ್ಕಾರ ವೆಂಕಯ್ಯ ನಾಯ್ಡು ಅಳಿಯನ ಕಂಪನಿಗೆ ಈ ಪ್ರಾಜೆಕ್ಟ್‌ಗೆ ಅನುಮತಿ ನೀಡಿದಾಗ ಜನ ದಂಗೆಯೆದ್ದು ದೊಡ್ಡ ಪ್ರತಿಭಟನೆಯೇ ಮಾಡಿದರೂ ಆಶೀಸರನೆಂಬ ಪರಿಸರ ಕಾರ್ಯಪಡೆ ಪರಾಕ್ರಮಿ ಮಾತ್ರ ತುಟಿಪಿಟಿಕ್ ಮಾಡಲಿಲ್ಲ! ದಟ್ಟ ಅರಣ್ಯ ಪ್ರದೇಶಗಳಲ್ಲಿ ಭಂಡ ಬಿಜೆಪಿ ಸರ್ಕಾರ ಗಣಿಗಾರಿಕೆಗೆ ಪರವಾನಗಿ ಕೊಟ್ಟು ಪರಿಸರಕ್ಕೆ ನೇಣು ಬಿಗಿದು ಲೂಟಿಗಿಳಿದಾಗಲೂ ಆಶೀಸರ್ ಆರಾಮಾಗೇ ಇದ್ದ! ಕೆಂಪು ದೀಪದ ಕಾರಿನ ವ್ಯಾಮೋಹದಿಂದ ಆತ ಪರಿಸರ ಕಾಳಜಿಗೆ ಎಳ್ಳುನೀರು ಬಿಟ್ಟು ಅದ್ಯಾವುದೋ ಕಾಲವಾಗಿ ಹೋಗಿತ್ತು. ಅಲ್ಲಿಗೆ ಆಶೀಸರನ ಪರಿಸರ ಪರಾಕ್ರಮದ ಅಸಲಿಯತ್ತು ಇಡೀ ನಾಡಿಗೇ ಅರ್ಥವಾಗಿ ಹೋಯ್ತು!

ಖೋಟಾ ಪರಿಸರ ಪುಢಾರಿ

ಅನಂತ ಆಶೀಸರ ಅದೆಂಥ ನಕಲಿ ಪರಿಸರವಾದಿ ಎಂಬುದನ್ನು ಆತನ ಕಾಲು ಶತಮಾನದ ಪರಿಸರ ಹಾರಾಟ ಚರಿತ್ರೆಯಲ್ಲಿರುವ ದೃಷ್ಟಿಬೊಟ್ಟುಗಳೇ ಸಾರಿ ಹೇಳುತ್ತವೆ. "ಸೊಪ್ಪಿನ ಬೆಟ್ಟ"ದ ಪ್ರಕರಣ ಒಂದನ್ನೇ ಗಮನಿಸಿದರೆ ಸಾಕು, ಪರಿಸರ ಹೋರಾಟವನ್ನು ಆಶೀಸರ ಮಾಣಿಯ ಚೆಡ್ಡಿ ಹೈಗರ ಕೃಪಾಪೋಷಿತ ಪರಿಸರ ಸಂಘಟನೆಗಳು ಹೇಗ್ಹೇಗೆ ತಮ್ಮ ಸ್ವಾರ್ಥಕ್ಕೆ ತಕ್ಕಂತೆ ಬಳಸಿಕೊಂಡಿವೆ ಎಂಬುದನ್ನು ಸಾಬೀತಾಗುತ್ತದೆ. ಉತ್ತರ ಕನ್ನಡದ ಘಟ್ಟದ ಮೇಲಿನ ಅಡಿಕೆ ತೋಟಿಗರಲ್ಲಿ ಬಹುತೇಕರು ಬ್ರಾಹ್ಮಣರು. ಇವರೆಲ್ಲ ತಮ್ಮ ಅಡಿಕೆ ತೋಟಗಾರಿಕೆ ಅನುಕೂಲಕ್ಕೇ ಬ್ರಿಟಿಷರು ಕೊಟ್ಟ ಸೊಪ್ಪಿನ ಬೆಟ್ಟವನ್ನು ಹಾಗೇ ಅನಾಮತ್ತು ನುಂಗಿಬಿಟ್ಟಿದ್ದಾರೆ.


ಕಾಗೇರಿ

ಅರಣ್ಯ ಇಲಾಖೆಯ ಸರ್ವೆಗಳೇ ಹೇಳುವಂತೆ ಪ್ರತಿ ಒಂದು ಎಕರೆ ತೋಟಕ್ಕೆ ಒಂಭತ್ತು ಎಕರೆ ಅರಣ್ಯ ಸ್ವಾಹಾ ಆಗಿದೆ. ತೋಟಿಗರು ಮಾಡಿರುವ ಅರಣ್ಯ ಅತಿಕ್ರಮಣ, ಸೊಪ್ಪಿನ ಬೆಟ್ಟ ಕಬಳಿಕೆಯಿಂದ ಶಿರಸಿ-ಸಿದ್ಧಾಪುರ-ಯಲ್ಲಾಪುರದ ಹೈಗರ ಸೀಮೆಯಲ್ಲಿ 28,000 ಎಕರೆ ಅರಣ್ಯ ಸರ್ಕಾರದ ಕೈತಪ್ಪಿ ಹೋಗಿದೆ. ಈ ಅರಣ್ಯದ ಸ್ವಾಮಿತ್ವ ಸರ್ಕಾರಕ್ಕೆ ಒಪ್ಪಿಸಿಯೆಂದರೆ, "ಪರಿಸರ ಹೋರಾಟ ಬಾಂಬ್'' ತೋರಿಸಲಾಗುತ್ತಿದೆ. ಈ ಭಯೋತ್ಪಾದನೆ-ಕಾನೂನುಬಾಹಿರ ಲಫಡಾದ ಹಿಂದೆ ಆಶೀಸರನಂಥ ಪ್ರಚಂಡ ಪರಿಸರ ಪ್ರೇಮಿಗಳಿದ್ದಾರೆ.

ಉತ್ತರ ಕನ್ನಡದ ಅಭಿವೃದ್ಧಿಗೆ ಅನಿವಾರ್ಯವಾಗಿರುವ ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ. ಆಶೀಸರನ ಸ್ವಯಂಘೋಷಿತ ಪರಿಸರ ಹೋರಾಟಗಾರ ಗ್ಯಾಂಗು ಯಲ್ಲಾಪುರದಲ್ಲೇ ತಡೆದು ನಿಲ್ಲಿಸಿದೆ. ಇದಕ್ಕವರು ಕೊಡುವ ಕಾರಣವನ್ನು ಕಾಡು-ಪ್ರಾಣಿ-ಪರಿಸರ ನಾಶ. ವಾಸ್ತವ ಬೇರೆಯೇ ಇದೆ. ಯಲ್ಲಾಪುರದಾಚೆ ಈ ರೈಲುಹಳಿ ಹೈಗರ ತೋಟ ನುಂಗುತ್ತದೆಂಬ "ವೈದಿಕ ಪರಿಸರ ಪ್ರಜ್ಞೆ" ಈ ರೈಲು ವಿರೋಧಿ ಬೊಬ್ಬೆಯ ಹಿಂದಡಗಿದೆ!

ಆಶೀಸರ ಮಾಣಿ ಪರಿಸರವಾದಿಯಲ್ಲ; ಪಕ್ಕಾ ಪರಿಸರ ವೈರಿ ಎಂಬುದನ್ನು ಆತನ ಚಹರೆ ಗಮನಿಸಿದರೆ ಎಂಥ ಗಾಂಪನಿಗೂ ಗೊತ್ತಾಗುತ್ತದೆ. ಸದಾ ಪರಿಸರ ಮಂತ್ರ ಪಠಿಸುವ ಆಶೀಸರ ಹೊರಜಗತ್ತಿಗೊಬ್ಬ ಸಾಚಾ ಪರಿಸಪ್ರೇಮಿಯಂತೆ ಭಾಸವಾಗುತ್ತಾನೆ. ಆದರೆ ಈ ನಕಲಿ ಪರಿಸರವಾದಿ ತನ್ನೂರು ಶಿರಸಿ ತಾಲ್ಲೂಕಿನ ಆಶೀಸರ ಎಂಬಲ್ಲಿ ಘೋರ ಪರಿಸರ ವಿರೋಧಿ ಪಾತಕ ಮಾಡಿದ್ದಾನೆ. ಜೀವ ವೈವಿಧ್ಯತೆಯ ಪಶ್ಚಿಮ ಘಟ್ಟದ ಅಪಾರ ಬೆಲೆಬಾಳುವ ಹತ್ತು ಎಕರೆ ಯಷ್ಟು ಅರಣ್ಯ ಕಬ್ಜಾ ಮಾಡಿ ಕೊಂಡು ಭರ್ಜರಿ ಅಡಿಕೆ ತೋಟವನ್ನು ಅನಂತ್ ಹೆಗಡೆ ಆಶೀಸರ ತಯಾರು ಮಾಡಿದ್ದಾನೆ; ಅರ್ಧ ಕೋಟಿ ರೂ.ಗಳ ಮರ-ಗಿಡ ಅಪೋಷನ ಪಡೆದಿದ್ದಾನೆ.

ಒಂದು ಗುಂಟೆಗೆ ಕಡಿಮೆಯೆಂದರೂ 10 ಮರ ಕಡಿಯಲಾಗಿದೆ ಆಶೀಸರನ ತೋಟದ ತೆವಲಿಗೆ. ಅಂದರೆ ಎಕರೆಗೆ 400 ಮರ ಉರುಳಿಸಲಾಗಿದೆ! ಹತ್ತು ಎಕರೆಗೆ 4000 ಮರಗಳ ಮಾರಣಹೋಮ ಮಾಡಲಾಗಿದೆ. ಆಶೀಸರನ ಪರಿಸರ ಪೌರೋಹಿತ್ಯದಲ್ಲಿ!! ಇದರ ಬೆಲೆ ಕಡಿಮೆಯೆಂದರೂ 50 ಲಕ್ಷ!! ಇವತ್ತಿಗೂ ಅಪಾರ ಬೆಲೆಯ ಮತ್ತಿ ಮರಗಳು ಆಶೀಸರನ ತೋಟದ ನಡುನಡುವೆ ಕಾಣಿಸುತ್ತವೆ. ಅತಿಕ್ರಮಿತ ಅರಣ್ಯ ಭೂಮಿಯನ್ನು ಖುಲ್ಲಾಪಡಿಸುವಂತೆ ಫಾರೆಸ್ಟ್‌ನವರು ಆಶೀಸರ ಮಾಣಿಗೆ ಹಿಂದೆಲ್ಲ ನೋಟೀಸು ಕೊಟ್ಟಿದ್ದರು. ಆದರೆ ಅದ್ಯಾವುದನ್ನೂ ಈ ಪರಿಸರ ಪಾಲಿಟಿಕ್ಸ್ ಪುಢಾರಿ ಲೆಕ್ಕಕ್ಕೇ ತೆಗೆದುಕೊಂಡಿಲ್ಲ. ಅರಣ್ಯ ಇಲಾಖೆಯಲ್ಲಿ ತನಗಿರುವ "ಪರಿಸರ ತಜ್ಞ" ಇಮೇಜಿಂದ ಅತಿಕ್ರಮಣ ದಕ್ಕಿಸಿಕೊಂಡು ಹಾಯಾಗಿದ್ದಾನೆ!

"ಗ್ರೀನ್ ಸೋಲ್ಜರ್" ಎಂಬ ಟ್ರಂಪ್ ಕಾರ್ಡ್ ಎಸೆದೇ ಅರಣ್ಯಾಧಿಕಾರಿಗಳನ್ನು ಕಂಗಾಲಾಗಿಸುತ್ತಿದ್ದ ಆಶೀಸರ ಈಗ ಮಂತ್ರಿ ಗ್ರೇಡಿನ ಪರಿಸರ ಕಾರ್ಯಪಡೆಯೆಂಬ ಸರ್ಕಾರಿ ಪಡೆಯ ಅಧ್ಯಕ್ಷ ಬೇರೆ. ಜಿಲ್ಲಾ ಮಂತ್ರಿಗಳ ಆಪ್ತ ಆದ್ಮಿ; ಸರ್ಕಾರ ನಿಯಂತ್ರಿಸುವ ಆರೆಸೆಸ್ ಬಳಗದ ಪರಿಚಾರಕ. ಇಂತಿಪ್ಪ ಆಶೀಸರನ ಅಕ್ರಮ. ಅತಿಕ್ರಮಣಕ್ಕೆ ಸರ್ಕಾರಿ ಹಿಕ್ಮತ್ತು ಸಿಕ್ಕಂತಾಗಿದೆ. ಆತನ ಮೇಲೆ ಅರಣ್ಯ ಆಕ್ಟ್‌ಗಳ ಹಾಕಿ ಕೋಳ ತೊಡಿಸುವ ತಾಕತ್ತು ಅದ್ಯಾವ ಅಧಿಕಾರಿಗಿದೆ? ಶಿರಸಿಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಆಫೀಸಿನಲ್ಲಿ ಆಶೀಸರನ ಅತಿಕ್ರಮಣ ಅಪರಾಧದ ಫೈಲಿಗೆ ಕಂಟುಕಟ್ಟಿ ಮೂಲೆಗೆಸೆಯಲಾಗಿದೆ. "ಆಶೀಸರ ಅತಿಕ್ರಮಣ ಮಾಡಿದ್ದಾನಾ....?" ಎಂದು ಅರಣ್ಯಾಧಿಕಾರಿಗಳಿಗೆ ಕೇಳಿದರೆ "..... ಗುದ್ದ ಕಡಿದು ನಾವ್ಯಾಕೆ ಮೈಮೇಲೆ ಹಾಕಿಕೊಳ್ಳಬೇಕು ಸ್ವಾಮಿ...." ಎಂಬ ನಿಗೂಢ ಉತ್ತರ ಬರುತ್ತದೆ.

ಕಾನೂನುನಿಷ್ಠ, ಪರಿಸರ ಕಾಳಜಿಯ ಅಧಿಕಾರ ಎಂಬ ಪ್ರತೀತಿಯ ಡಿಸಿಎಫ್ ಮನೋಜ್‌ಕುಮಾರ್ ಅದ್ಯಾಕೋ ನರ್ವಸ್ ಆದಂತಿದ್ದಾರೆ. ಅತಿಕ್ರಮಣ ಕಂಡೂ ಕಾಣದಂತಿದ್ದಾರೆ. ಇದಕ್ಕೇನಿರಬಹುದು ಕಾರಣ? ಮಂತ್ರಿ ಕಾಗೇರಿಯ ಒತ್ತಡವಾ? ಆಶೀಸರನ ಪರಿಸರ ಪಾಶುಪತಾಸ್ತ್ರದ ಭಯವಾ? ಒಟ್ಟಿನಲ್ಲಿ "ಆಶೀಸರನ ಅತಿಕ್ರಮಣ ಪ್ರಕರಣ" ದೇಶಭಕ್ತ ಕಾಗೇರಿ-ಆಶೀಸರರ ನಕಲಿ ಪರಿಸರ ಪರಾಕ್ರಮದ ಅಸಲಿತನ ಅನಾವರಣ ಆದಂತಾಗಿದೆ!

• ನಹುಷ

ಕರ್ಮಗೇಡಿ ಕಾರ್ಯಪಡೆ


ಸಂಘಪರಿವಾರದ ಸೋಗಲಾಡಿ ಅನಂತ ಹೆಗಡೆ ಆಶೀಸರನಿಗೆ "ಆಶ್ರಯ" ಕೊಡುವ ಏಕೈಕ ಉದ್ದೇಶದಿಂದ ಯಡ್ಡಿ ಸರ್ಕಾರ ಸ್ಥಾಪಿಸಿರುವ "ಪಶ್ಚಿಮ ಘಟ್ಟ ಕಾರ್ಯಪಡೆ" ಎಂಬ ಬೋಗಸ್ ಏಜೆನ್ಸಿಯಿಂದ ಪರಿಸರಕ್ಕೆ, ಜನರಿಗೆ ಉಪಕಾರವಾಗುವುದಿರಲಿ, ಅಪಕಾರವೇ ಹೆಚ್ಚಾಗುತ್ತಿದೆ. ಪರಿಸರ ಕಾಳಜಿ, ಪರಿಸರ ಜ್ಞಾನ ಯಾವುದೂ ಇಲ್ಲದ ಪ್ರಚಾರಪ್ರಿಯ ಷೋಮ್ಯಾನ್ ಆಶೀಸರನಿಗೆ ಮಂತ್ರಿಗಿರಿಯ ಸುಖ-ಸೌಭಾಗ್ಯ ಒದಗಿಸಲು ಅರಣ್ಯ ಇಲಾಖೆಯ ಬೊಕ್ಕಸಕ್ಕೆ ಕನ್ನ ಹಾಕಲಾಗುತ್ತಿದೆ. ಅಷ್ಟಕ್ಕೂ ಈ ಪರಿಸರ ವಿರೋಧಿಯ ಬಾಸ್‌ಗಿರಿಯ ಪರಿಸರ ಕಾರ್ಯಪಡೆಯ ಅವಶ್ಯಕತೆಯೇ ಇಲ್ಲ!

ಎಂಥ ವಿರೋಧಾಭಾಸದ ದುರಂತ ನೋಡಿ! ಆಶೀಸರನದು ಪರಿಸರ ಸಂರಕ್ಷಿಸುವ ಸರ್ಕಾರಿ ಏಜೆನ್ಸಿ; ಈತ ಮಾಡುತ್ತಿರುವುದು ಪರಿಸರ ವಿರೋಧಿ ಕರ್ಮಕಾಂಡ!! ಆಶೀಸರನ ಕಾರ್ಯಪಡೆಗೆ ಸ್ಪಷ್ಟ ದಿಕ್ಕು-ದಿಸೆಗಳಿಲ್ಲ; ಮೂಲಭೂತ ಸೌಕರ್ಯ-ತಂತ್ರಜ್ಞತೆ ಇಲ್ಲ, ಹಾಗಾಗಿ ಇದೊಂದು ವೇಸ್ಟ್ ಬಾಡಿ; ವೇಸ್ಟ್ ಅಧ್ಯಕ್ಷ. ಆದರೆ ಪಶ್ಚಿಮ ಘಟ್ಟ ಸಂರಕ್ಷಣೆಯ ಉದ್ದೇಶದಿಂದ ಕೇಂದ್ರ ಅರಣ್ಯ-ಪರಿಸರ ಮಂತ್ರಿ ಜೈರಾಮ್ ರಮೇಶ್ ಕಳೆದ ಫೆಬ್ರವರಿಯಲ್ಲಿ ಪರಿಸರ ತಜ್ಞ ಡಾ. ಮಾಧವ ಗಾಡ್ಗೀಳ್ ನೇತೃತ್ವದ 14 ಜನ ಪರಿಸರ ಪರಿಣತರ ಸಮಿತಿ ರಚಿಸಿದ್ದಾರೆ. ಇದರಲ್ಲಿ ಕರ್ನಾಟಕದವರೇ ಐವರಿದ್ದಾರೆ.

ಈ ಸಮಿತಿಯ ಕಾರ್ಯವ್ಯಾಪ್ತಿಗೆ ಶೇ. 60 ಅರಣ್ಯ ಹೊಂದಿರುವ ಕರ್ನಾಟಕದ ಪಶ್ಚಿಮ ಘಟ್ಟದ ರಕ್ಷಣೆಯೂ ಬರುತ್ತದೆ. ಹಾಗಿರುವಾಗ ಆಶೀಸರನ ಈ ಬಂಡಲ್ ಕಾರ್ಯಪಡೆಯ ಅವಶ್ಯಕತೆ ಇದೆಯಾ? ಸಿಎಂ ಯಡ್ಡಿ-ಮಂತ್ರಿ ಕಾಗೇರಿಗೆ ಏನಾದರೂ ಮಾನ-ಮರ್ಯಾದೆ-ಹೊಣೆಗಾರಿಕೆಯೆಂಬುದು ಇದ್ದರೆ, ತಕ್ಷಣ ಆಶೀಸರನ ವ್ಯರ್ಥ-ಅನರ್ಥ ಕಾರ್ಯಪಡೆಯನ್ನು ವಿಸರ್ಜಿಸಬೇಕು. ಅದಕ್ಕೂ ಮೊದಲೇ ಹತ್ತು ಎಕರೆಯಷ್ಟು ಅರಣ್ಯ ಕಬಳಿಸಿ ಕ್ರಿಮಿನಲ್ ಅಪರಾಧ ಮಾಡಿರುವ ಆಶೀಸರ ತನಗೆ ಪರಿಸರ ರಕ್ಷಣೆಯ ಕಾರ್ಯಪಡೆಯ ಅಧ್ಯಕ್ಷನಾಗಲು ನೈತಿಕತೆ ಇಲ್ಲವೆಂಬ ವಾಸ್ತವ ಅರಿತು ರಾಜೀನಾಮೆ ಬೀಸಾಕಿ ಮನೆಗೆ ಹೋಗಬೇಕಿದೆ.

ಇಂಥ ನೈತಿಕ ಪ್ರಜ್ಞೆ-ಪ್ರಾಮಾಣಿಕತೆ-ಲಜ್ಜೆ ಯಡ್ಡಿ ಮತ್ತವರ ಸಂಘ ಪರಿವಾರಕ್ಕೆ ಇಲ್ಲದಿರುವುದರಿಂದ ನಾಡಿನ ನಿಜ ಪರಿಸರವಾದಿಗಳು-ಜನಪರ ಹೋರಾಟಗಾರರು ಇತ್ತ ಗಮನ ಹಾರಿಸಬೇಕಿದೆ. ಕಳೆದೊಂದು ವರ್ಷದಿಂದ ಲಾಭಕ್ಕಿಂತ ಹಾನಿಯೇ ಹೆಚ್ಚು ಮಾಡಿರುವ ಆಶೀಸರನ ಬೋಗಸ್ ಪರಿಸರ ಕಾರ್ಯಪಡೆಯನ್ನು ಬರ್ಖಾಸ್ತು ಮಾಡಿಸಬೇಕಿದೆ. •

ಮತ್ತೊಂದು ಹೆಣ ಉರುಳಿಸಿದ ವಿಜಯ ಸಾರಥಿ!



ವಿಜಯ ಸಾರಥಿ

ಅನಿಲ್‌ನನ್ನು ಫಿನಿಷ್ ಮಾಡುವು ದಕ್ಕೆ ಕೋದಂಡ, ತಾಂಡು, ವಿಜಯ ಸಾರಥಿ ಸಂಚು ರೂಪಿಸುತ್ತಿರುವುದು ತ್ಯಾಗರಾಜನಗರ ಠಾಣೆಯ ಇನ್ಸ್‌ಪೆಕ್ಟರ್ ನವೀನ್ ಕುಲಕರ್ಣಿಗೆ ಗೊತ್ತಿರದ ವಿಚಾರವೇನಾಗಿರಲಿಲ್ಲ. ಸ್ವಲ್ಪ ಮುಂಚೆಯೇ ಪೊಲೀಸರು ಎಚ್ಚೆತ್ತುಕೊಂಡಿದ್ದರೆ ಇವತ್ತು ಅನಿಲನ ಹೆಣ ಬೀಳುತ್ತಿರಲಿಲ್ಲ. ಈ ಎಲ್ಲ ಕಾರಣಗಳಿಗಾಗಿ ಈ ಕೊಲೆಗೆ ವಿಜಯ ಸಾರಥಿ, ಕೋದಂಡ, ತಾಂಡು ಎಷ್ಟು ಹೊಣೆಗಾರರೋ ತ್ಯಾಗರಾಜನಗರ ಪೊಲೀಸರೂ ಅಷ್ಟೇ ಹೊಣೆಗಾರರಾಗಿದ್ದಾರೆ.

ಬೆಂಗಳೂರಿನ ಶಾಸ್ತ್ರಿನಗರದಲ್ಲಿ ಮತ್ತೊಂದು ಹೆಣ ...ರುಳಿದೆ. ಬೆಂಗಳೂರಿನ ನಟೋರಿಯಸ್ ಕ್ರಿಮಿನಲ್ಲುಗಳಾದ ...ಡ್ಡಿ ಸೋಮ, ಬಸವ, ಚಂದು, ರಾಜಶೇಖರ, ಬಿಡ್ಡರ ...ಂಗಿಗೆ ಸೇರಿದ ವಿಜಯ ಸಾರಥಿಯೇ ಈ ಕೊಲೆಯ ...ಂದಿನ ರೂವಾರಿ. ಬೆಂಗಳೂರಿನಲ್ಲಿ ...ತ್ತೊಂದು ಹೆಣ ಉರುಳುವುದಕ್ಕೆ ಮೂಲ ...ರಣಕರ್ತನಾಗಿರುವ ವಿಜಯ ಸಾರಥಿಯೇ ... ಪಾತಕ ಕೆಲಸಕ್ಕೆ ಸಾರಥ್ಯ ವಹಿಸಿದರೆ ...ದಕ್ಕೆ ಬೆಂಗಾವಲಾಗಿ ನಿಂತವರು ತ್ಯಾಗರಾಜ ...ನಗರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ...ವೀನ್ ಕುಲಕರ್ಣಿ ಎಂದರೆ ತಪ್ಪಾಗಲಾರದು. ...ಕೆಂದರೆ, ಪಾತಕ ಕೃತ್ಯಕ್ಕೆ ಕುಖ್ಯಾತಿಯಾಗಿರುವ ...ಜಯ ಸಾರಥಿಯ ಗ್ಯಾಂಗು ಇಂತಹ ...ನ್ನೊಂದು ಕೊಲೆಗೆ ಸಂಚು ರೂಪಿಸಿ ಕಾರ್ಯಾ...ಚರಣೆಗಿಳಿದಿದ್ದು ಗೊತ್ತಾದ ತಕ್ಷಣವೇ ಸ್ಥಳೀಯರು ನವೀನ್ ...ಕುಲಕರ್ಣಿಯನ್ನು ಸಂಪರ್ಕಿಸಿ ಮಾಹಿತಿಕೊಟ್ಟರೂ ಅವರು ...ವನ್ನು ತಡೆಯುವ ಗೋಜಿಗೆ ಹೋಗಲಿಲ್ಲ, ಇನ್ನೂ ...ಷ್ಟವಾಗಿ ಹೇಳಬೇಕೆಂದರೆ ಈ ಪಾತಕ ಕೃತ್ಯ ನಡೆಯಲಿ ...ಎಂದೇ ಸುಮ್ಮನಿದ್ದರು. ಪರಿಣಾಮವಾಗಿ ಶಾಸ್ತ್ರಿ ನಗರದ ...ಸ್ವಸ್ಥ ಕುಟುಂಬದ ಡಿಪ್ಲಾಮೋ ಹೋಲ್ಡರ್ ಅನಿಲ್ ...ನ್ನು) ಮೊನ್ನೆ ಏಪ್ರಿಲ್ 24ರಂದು ಹೆಣವಾಗಿ ಬಿದ್ದರು.



ನವೀನ್

... ವಿಜಯ ಸಾರಥಿಯ ಮನೆಯ ಎದುರುಗಡೆಯೇ ...ಅನಿಲ್‌ನ ಮನೆಯಿದೆ. ಮೊನ್ನೆ ಏಪ್ರಿಲ್ ...ರಂದು ಅನಿಲ್ ತಮ್ಮ ಮನೆಯ ಹತ್ತಿರದ ... ಅಂಗಡಿಯಲ್ಲಿ ರಾತ್ರಿ 8.30ರ ಸುಮಾರಿಗೆ ...ಟೀ ಕುಡಿಯುತ್ತಾ ನಿಂತಿದ್ದಾಗ ಎರಡು ...ವಾಹನಗಳಲ್ಲಿ ದಾಂಗುಡಿಯಿಟ್ಟ ವಿಜಯ ...ಸಾರಥಿಯ ಗ್ಯಾಂಗು ಅನಿಲ್‌ನನ್ನು ಮಚ್ಚು ...ಲಾಂಗುಗಳಿಂದ ಕೊಚ್ಚಿ ಕೊಂದು ಹಾಕಿತು. ...ಮೊದಲನೆಯ ಕೆಂಪು ಗಾಡಿಯಿಂದಿಳಿದ ...ಕೋದಂಡ, ಸಾಗರ್ ಮತ್ತು ಮುಖಕ್ಕೆ ...ಮುಸುಕು ಹಾಕಿಕೊಂಡಿದ್ದ ಇಬ್ಬರು ಅನಿಲ್ ...ನ್ನು ಕೊಚ್ಚಿ ಹಾಕಿದರೆ ಅನಿಲ್ ತಪ್ಪಿಸಿಕೊಳ್ಳದಂತೆ ಘೇರಾವ್ ...ಹಾಕಿದ್ದು ಇನ್ನೊಂದು ಬಿಳಿಯ ಗಾಡಿಯಲ್ಲಿದ್ದ ವಿಜಯ ...ಸಾರಥಿ, ತಾಂಡು, ಕಡ್ಡಿ ನವೀನ ಮತ್ತು ಅಜಯ್.



ಕೋದಂಡ

...ಹಾಗೆ ನೋಡಿದರೆ ಬರ್ಬರವಾಗಿ ಕೊಲೆಯಾದ ಅನಿಲ್ ...ನೂ ಆ ಕೊಲೆಗೆ ಸಾರಥ್ಯ ವಹಿಸಿದ ವಿಜಯ ಸಾರಥಿ ...ಯಾಸ್ ಕುರುಡ ಅಲಿಯಾಸ್ ಆಲ್‌ಕಾಟಿ ಇಬ್ಬರೂ ...ಎದುರುಬದುರಿನ ಮನೆಯವರು. ಒಂದು ಕಾಲದಲ್ಲಿ ...ಲ್, ನವೀನ್, ಶಂಕರ್ ಅಲಿಯಾಸ್ ತಾಂಡು ಹಾಗೂ ...ಕೋದಂಡ ಎಲ್ಲರೂ ಜೊತೆಗೇ ಇದ್ದವರು. ಇವರಲ್ಲಿ ...ಜಯ್ ಸಾರಥಿ ಮತ್ತು ಶಂಕರ್ ಸೀನಿಯರ್‌ಗಳಾಗಿದ್ದು ...ಉಳಿದವರೆಲ್ಲರೂ ತಮಗೆ ತಗ್ಗಿ ಬಗ್ಗಿ ನಡೆಯಬೇಕೆಂದು ...ಬಯಸುತ್ತಿದ್ದರು. ಇವರ ವಿಚಿತ್ರ ವರ್ತನೆಗೆ ಬೇಸತ್ತ ನವೀನ್ ...ಮತ್ತು ಅನಿಲ್ ಅವರಿಂದ ದೂರವಾದರೆ ಕೋದಂಡ, ...ತಾಂಡು ತಗ್ಗಿಬಗ್ಗಿ ನಡೆಯುವುದನ್ನೇ ಅಭ್ಯಾಸ ಮಾಡಿಕೊಂಡು ...ವಿಜಯಸಾರಥಿಯ ಶಿಷ್ಯರಾಗಿಹೋದರು. ಅನಿಲ್ ಮತ್ತು ...ನವೀನ್ ತಮ್ಮ ಅಂಕೆಗೆ ಬಾರದೇ ಹೋಗಿದ್ದು ವಿಜಯ್ ...ಸಾರಥಿ ಕ್ರೋಧಗೊಳ್ಳುವಂತೆ ಮಾಡಿದ್ದು ಮಾತ್ರವಲ್ಲ ...ಎಂದೊಂದು ದಿನ ಏರಿಯಾದಲ್ಲಿ ತನಗಿಂತ ಬಲಿಷ್ಠರಾಗ...ಬಹುದೆಂಬ ಭಯವೂ ಮನೆಮಾಡಿತು. ಹಾಗಾಗಿ ಅವರನ್ನು ...ಮುಗಿಸಿಹಾಕುವುದಕ್ಕೆ ಸಾರಥಿ ಮೊದಲಿನಿಂದಲೂ ಪ್ರಯತ್ನಿಸು...ತ್ತಿದ್ದ. ಅದಕ್ಕೆ ಆತ ಮೊದಲು ಆಯ್ಕೆ ಮಾಡಿಕೊಂಡದ್ದು ...ನವೀನನನ್ನು. ತನ್ನನ್ನು ಕೊಲ್ಲುವುದಕ್ಕೆ ನವೀನ್ ಸ್ಕೆಚ್ ಹಾಕು...ತ್ತಿದ್ದಾನೆಂಬಂತೆ ಕೋದಂಡನಲ್ಲಿ ಭೀತಿ ಮೂಡಿಸಿದ ಸಾರಥಿ ..., ಮೊದಲು ನವೀನನ್ನೇ ಫಿನಿಷ್ ಮಾಡುವಂತೆ ...ಸೂಚಿಸಿದ. ಅಂತೆಯೇ ಕಳೆದ ವರ್ಷ ಫೆಬ್ರುವರಿ ಹದಿ...ನೆಂದು ಜಯನಗರದ ನಂದಿನಿ ಹೋಟೆಲ್ ಎದುರು ...ನ್ನ ನವೀನ್‌ನನ್ನು ವಿಜಯ ಸಾರಥಿ, ಕೋದಂಡ, ...ರ್, ಕಡ್ಡಿ ನವೀನ, ಬಾಕ್ಸರ್ ಮಂಜ, ರಾಜು, ಗುರುಮೂರ್ತಿ, ರಾಘವೇಂದ್ರ ಮತ್ತು ರಘು ಸೇರಿಕೊಂಡು ಕೊಚ್ಚಿಹಾಕಿದರು.

ಆದರೆ, ಐವತ್ತು ಸಾವಿರ ದುಡ್ಡು ನುಂಗಿದ ಇನ್ಸ್‌ಪೆಕ್ಟರ್ ಲೋಕೇಶ್ ಮತ್ತು ಎಸಿಪಿ ರಾಮೇಶ್‌ಚಂದ್ರ ಕಾಟಾಚಾರಕ್ಕೊಂದು ಎಫ್‌ಐಆರ್ ಬರೆದು ಕೊಲೆಗಡುಕರ ರಕ್ಷಣೆಗೆ ನಿಂತರು. ಇದು ಜಂಟಿ ಪೊಲೀಸ್ ಆಯುಕ್ತ ಅಲೋಕ್ ಕುಮಾರ್‌ಗೆ ಗೊತ್ತಾಗಿ ಇನ್ಸ್‌ಪೆಕ್ಟರ್ ಲೋಕೇಶ್‌ನನ್ನು ಸಸ್ಪೆಂಡ್ ಮಾಡಿದ್ದೂ ಆಯಿತು. ಆದರೆ, ಪೊಲೀಸರೇ ತಮ್ಮ ಬೆಂಬಲಕ್ಕೆ ನಿಂತಿದ್ದು ಮಾತ್ರ ವಿಜಯ ಸಾರಥಿಯ ಗ್ಯಾಂಗಿನ ಪಾತಕ ಕೃತ್ಯಗಳಿಗೆ ಪ್ರೇರಣೆ ನೀಡಿತು. ಅದೇ ಇಂದು ಅನಿಲ್ ಕೊಲೆಗೆ ಕಾರಣವೂ ಆಯಿತು.

ಯಾವಾಗ ನವೀನನ ಹೆಣ ಬಿತ್ತೋ ಅನಿಲ್ ಕೂಡ ಎಚ್ಚೆತ್ತುಕೊಂಡಿದ್ದ. ಅವರ ಮುಂದಿನ ಟಾರ್ಗೆಟ್ ತಾನೆ ಎಂಬುದು ಆತನಿಗೂ ಚೆನ್ನಾಗಿ ಗೊತ್ತಾಗಿತ್ತು. ಈಗ್ಗೆ ಒಂದು ತಿಂಗಳ ಹಿಂದೆಯಷ್ಟೇ ಆತನ ತಾಯಿ ಮದುವೆ ಮಾಡಿಕೊಳ್ಳುವಂತೆ ಈತನನ್ನು ಒತ್ತಾಯಿಸಿದಾಗ "ಯಾಕೆ ನನ್ನ ಹೆಂಡತಿಯನ್ನು ಒಂದೇ ವರ್ಷದಲ್ಲಿ ಮುಂಡೆ ಮಾಡಬೇಕು ಅಂದುಕೊಂಡಿದ್ದೀಯಾ?" ಎಂದು ಉತ್ತರಿಸಿದ್ದ. ತನ್ನ ಭವಿಷ್ಯ ಇನ್ನು ಒಂದು ವರ್ಷವೂ ಇಲ್ಲ ಎಂಬುದು ಮಾತ್ರ ಅವನಿಗೆ ಗೊತ್ತಿರಲಿಲ್ಲ.


ಎಲ್ಲೋ ಒಂದುಕಡೆ ವಿಜಯ ಸಾರಥಿ ಮತ್ತು ಕೋದಂಡರ ತಂಟೆಗೆ ಹೋಗದೇ ಇದ್ದರೆ ಅವರೂ ಸುಮ್ಮನಾಗುತ್ತಾರೆ ಎಂಬ ಭಾವನೆಯೂ ಅನಿಲ್‌ನಲ್ಲಿ ಮನೆಮಾಡಿತ್ತು. ಈ ಕಾರಣಕ್ಕಾಗಿಯೇ ಆತ ಎಲ್ಲೂ ಕಾಣಿಸಿಕೊಳ್ಳದೇ ತನ್ನ ಪಾಡಿಗೆ ತಾನಿದ್ದ. ಆದರೆ, ವಿಜಯ ಸಾರಥಿ ಮತ್ತು ಕೋದಂಡರಿಗೆ ಅನಿಲ್‌ನ ಭಯ ದಿನೇ ದಿನೇ ಜಾಸ್ತಿಯಾಗುತ್ತಿತ್ತು. ತನ್ನ ಆತ್ಮೀಯ ಸ್ನೇಹಿತ ನವೀನನ ಕೊಲೆಯ ಸೇಡನ್ನು ಆತ ಇಂದಲ್ಲಾ ನಾಳೆ ತೀರಿಸಿಕೊಂಡೇ ತೀರುತ್ತಾನೆಂಬ ಆತಂಕ ಅವರಲ್ಲಿದ್ದೇ ಇತ್ತು. ಅದಕ್ಕೆ ಆಸ್ಪದ ಕೊಡಬಾರದೆಂದೇ ಮೊನ್ನೆ ಅವನನ್ನು ಕೊಂದು ಹಾಕಿದ್ದಾರೆ.

ಅಸಲಿಗೆ ಒಂದು ವರ್ಷದ ಹಿಂದೆಯೇ ನಡೆದ ನವೀನನ ಕೊಲೆ ಕೇಸಿನಲ್ಲಿ ಕೋದಂಡ ಪೊಲೀಸರಿಗೆ ಬೇಕಾದ ವ್ಯಕ್ತಿ. ಆತನ ಮೇಲೆ ಅರೆಸ್ಟ್ ವಾರೆಂಟ್ ಕೂಡ ಇದೆ. ಆದರೆ, ತ್ಯಾಗರಾಜನಗರ ಪೊಲೀಸರಿಗೂ ಕೋದಂಡನಿಗೂ ಅದೇನು ಅನ್ಯೋನ್ಯ ಸಂಬಂಧವೋ ಏನೋ ಅಂತೂ ಆತ ಆರಾಮಾಗಿ ಓಡಾಡಿಕೊಂಡಿದ್ದರೂ ಆತನನ್ನು ಬಂಧಿಸುವ ತಾಪತ್ರಯ ತೆಗೆದುಕೊಂಡಿಲ್ಲ. ಮೂಲತಃ ಮೀಟರ್ ಬಡ್ಡಿ ವ್ಯವಹಾರ ಮಾಡುತ್ತಿರುವ ಕೋದಂಡ, ತಾಂಡು ಮತ್ತು ವಿಜಯ ಸಾರಥಿಗಳಿಗೆ ದುಡ್ಡಿಗೇನೂ ಕೊರತೆಯಿಲ್ಲ. 'ಕಾಫಿ ಡೆ' ಅಡ್ಡೆಗಳಲ್ಲಿ ಕಾಲ ಕಳೆಯುವ ಸಿರಿವಂತ ಪಡ್ಡೆ ಹುಡುಗರಿಗೆ ಸಾಲಕೊಟ್ಟು ವಾರಕ್ಕೆ ಶೇ.10ರಷ್ಟು ಬಡ್ಡಿ ಪೀಕುವ ಈ ಒಬ್ಬೊಬ್ಬ ಮಹಾಶಯನೂ ಏನಿಲ್ಲವೆಂದರೂ ಇಪ್ಪತ್ತು ಕೋಟಿ ಮೌಲ್ಯದ ಆಸ್ತಿ ಮಾಡಿಟ್ಟುಕೊಂಡಿದ್ದಾರೆ. ನಿಮಗೆ ಆಶ್ಚರ್ಯವಾಗಬಹುದು. ಈಗ್ಗೆ ನಾಲ್ಕೈದು ವರ್ಷಗಳ ಹಿಂದೆಯಷ್ಟೇ ಕೋದಂಡ ಮತ್ತು ತಾಂಡು ದಿನಕ್ಕೆ ಎಪ್ಪತ್ತು ರೂಪಾಯಿ ಕೂಲಿಗಾಗಿ ಗಾರೆ ಕೆಲಸ ಮಾಡಿಕೊಡ್ತಿದ್ದವರು. ಯಾವಾಗ ನಾಗವೇಣಿ ಎಂಬ ಬ್ಲೂಫಿಲ್ಮ್ ಆರ್ಟಿಸ್ಟ್ ತಿಂಗಳಿಗೆ ಮೂರು ರೂಪಾಯಿ ಬಡ್ಡಿಯಂತೆ ಐವತ್ತು ಲಕ್ಷಗಳನ್ನು ಇವರ ಕೈಗಿಟ್ಟಳೋ ಅವತ್ತೇ ಅವರು ಬದಲಾಗಿ ಹೋದರು. ಆ ದುಡ್ಡನ್ನು ವಾರಕ್ಕೆ ಹತ್ತು ರೂಪಾಯಿ ಬಡ್ಡಿಯಂತೆ ಬಿಟ್ಟು ಗಂಟು ಮಾಡತೊಡಗಿದರು. ಅಂತೆಯೇ ವಿಜಯ ಸಾರಥಿಯೊಂದಿಗೆ ಸೇರಿಕೊಂಡು ಪಾತಕ ಲೋಕಕ್ಕೂ ಪ್ರವೇಶಿಸಿದರು. ಅದೆಲ್ಲದರ ಪರಿಣಾಮವಾಗಿ ಇಪ್ಪತ್ತು ಕೋಟಿಯಷ್ಟು ದುಡ್ಡು ಮಾಡಿರುವ ಇವರು ಇವತ್ತು ತ್ಯಾಗರಾಜನಗರ ಪೊಲೀಸರನ್ನೂ ಕೊಂಡುಕೊಳ್ಳುವ ಮಟ್ಟಕ್ಕೆ ಬೆಳೆದು ನಿಂತಿದ್ದಾರೆ. ಈ ನಡುವೆ ಕೋದಂಡ ಹಿಂದೂ ಧರ್ಮದ ಸ್ವಘೋಷಿತ ರಕ್ಷಕ ಶ್ರೀರಾಮ ಸೇನೆ ಎಂಬ ಮಂಗಗಳ ಸೈನ್ಯದ ಪ್ರಮೋದ್ ಮುತಾಲಿಕ್‌ನೊಂದಿಗೂ ಕೈಮಿಲಾಯಿಸಿ ಆಶ್ರಯ ಪಡೆದುಕೊಂಡ. ಈ ಸೇನೆಯ ಬೆಂಗಳೂರು ಘಟಕದ ಕಾರ್ಯದರ್ಶಿ ಸಿದ್ಧಾಪುರದ ದಡಿಯ ವಸಂತ ಈತ ಇಬ್ಬರೂ ಒಂದೇ ಬೆಡ್ಡಿನಲ್ಲಿ ಮಲಗುವಷ್ಟು ದೋಸ್ತ್‌ಗಳಾಗಿ ತನ್ನ ಪಾತಕ ಕೃತ್ಯಗಳಿಗೆ ಹಿಂದೂ ಧರ್ಮ ರಕ್ಷಣೆಯ ಕವಚ ತೊಡಿಸುವ ಕೆಲಸವನ್ನೂ ಮಾಡಿದ.



ಅನಿಲ್

ಅಸಲಿಗೆ ಅನಿಲ್‌ನನ್ನು ಫಿನಿಷ್ ಮಾಡುವುದಕ್ಕೆ ಕೋದಂಡ, ತಾಂಡು, ವಿಜಯ ಸಾರಥಿ ಸಂಚು ರೂಪಿಸುತ್ತಿರುವುದು ತ್ಯಾಗರಾಜನಗರ ಠಾಣೆಯ ಇನ್ಸ್‌ಪೆಕ್ಟರ್ ನವೀನ್ ಕುಲಕರ್ಣಿಗೆ ಗೊತ್ತಿರದ ವಿಚಾರವೇನಾಗಿರಲಿಲ್ಲ. ನವೀನ್ ಕೊಲೆ ಕೇಸಿನಲ್ಲಿ ತಲೆಮರೆಸಿಕೊಂಡಿರುವ ಕೋದಂಡ ಏರಿಯಾದಲ್ಲಿ ಕಾಣಿಸಿಕೊಂಡಾಗಲೆಲ್ಲಾ ಸ್ಥಳೀಯರು ಠಾಣೆಗೆ ಫೋನಾಯಿಸಿ ವಿಷಯ ಮುಟ್ಟಿಸಿದ್ದಾರೆ. ಈಗ್ಗೆ ಹದಿನೈದು ದಿನಗಳ ಹಿಂದಷ್ಟೇ ವಿಜಯ ಸಾರಥಿಯ ಮನೆಯಲ್ಲಿ ಕೋದಂಡ, ತಾಂಡು, ಕಡ್ಡಿ ನವೀನ ರಹಸ್ಯ ಮೀಟಿಂಗ್ ನಡೆಸುತ್ತಿರುವ ವಿಚಾರವನ್ನೂ ಪೊಲೀಸರ ಗಮನಕ್ಕೆ ತರಲಾಗಿತ್ತು. ಕೊಲೆ ನಡೆಯುವ ಕೆಲವೇ ದಿನಗಳ ಮುಂಚೆ ಅದೇ ಏರಿಯಾದ ಆತ್ಮಶ್ರೀ ವಿದ್ಯಾಸಂಸ್ಥೆಯ ಎದುರಿಗಿರುವ ಮೈದಾನದಲ್ಲಿ ಕೋದಂಡ ವಾಲಿಬಾಲ್ ಆಡುತ್ತಿದ್ದ. ಆಗಲೂ ಜನ ಅಲ್ಲೇ ನಿಂತಿದ್ದ ಹೊಯ್ಸಳ ಪೊಲೀಸರಿಗೆ ತಿಳಿಸಿದ್ದರು. ಪ್ರಾಯಶಃ ಪೊಲೀಸರು ಕೋದಂಡನ ರಕ್ಷಣೆಗೆ ನಿಂತಿದ್ದರೋ ಏನೋ ಅವನನ್ನು ಬಂಧಿಸುವ ಗೋಜಿಗೆ ಹೋಗಲಿಲ್ಲ. ಸ್ವಲ್ಪ ಮುಂಚೆಯೇ ಪೊಲೀಸರು ಎಚ್ಚೆತ್ತುಕೊಂಡಿದ್ದರೆ ಇವತ್ತು ಅನಿಲನ ಹೆಣ ಬೀಳುತ್ತಿರಲಿಲ್ಲ. ಈ ಎಲ್ಲ ಕಾರಣಗಳಿಗಾಗಿ ಈ ಕೊಲೆಗೆ ವಿಜಯ ಸಾರಥಿ, ಕೋದಂಡ, ತಾಂಡು ಎಷ್ಟು ಹೊಣೆಗಾರರೋ ತ್ಯಾಗರಾಜನಗರ ಪೊಲೀಸರೂ ಅಷ್ಟೇ ಹೊಣೆಗಾರರಾಗಿದ್ದಾರೆ.



ಶಂಕರ್

ಒಂದು ವರ್ಷದ ಹಿಂದೆ ನಡೆದ ನವೀನನ ಮರ್ಡರ್ ಕೇಸಿನಲ್ಲಿ ಈ ಕೊಲೆಗಡುಕರನ್ನು ಬಚಾವು ಮಾಡಿದ ರಮೇಶ್‌ಚಂದ್ರರೇ ಈಗಲೂ ಎಸಿಪಿಯಾಗಿದ್ದಾರೆ. ಪೊಲೀಸರು ವರ್ತಿಸುತ್ತಿರುವ ರೀತಿಯನ್ನು ನೋಡಿದರೆ ನವೀನ್ ಮರ್ಡರ್ ಕೇಸಿಗೆ ಬಂದಿರುವ ಗತಿಯೇ ಈಗ ಅನಿಲ್ ಮರ್ಡರ್ ಕೇಸಿಗೂ ಬರುವಂತೆ ಕಾಣುತ್ತಿದೆ. ಇಲ್ಲೂ ಕೂಡ ಕಾಟಾಚಾರಕ್ಕೊಂದು ಎಫ್‌ಐಆರ್ ದಾಖಲಿಸಲಾಗಿದೆ. ವಿಜಯ ಸಾರಥಿ ಮತ್ತು ಕಡ್ಡಿ ನವೀನನನ್ನು ಬಂಧಿಸಿ ಪೊಲೀಸ್ ಠಾಣೆಯಲ್ಲಿ ರಾಜಾತಿಥ್ಯ ನೀಡಲಾಗುತ್ತಿದೆ. ದಿನಕ್ಕೆ ಕನಿಷ್ಠ ನೂರೈವತ್ತು ಮಾಣಿಕ್‌ಚಂದ್ ಗುಟ್ಕಾ ನುಂಗುವ ವಿಜಯ ಸಾರಥಿಗೆ ಅದನ್ನು ಸಪ್ಲೈ ಮಾಡುವ ಕರ್ತವ್ಯವನ್ನು ಪೊಲೀಸರೇ ಹೊತ್ತುಕೊಂಡಿದ್ದಾರೆ. ಪೊಲೀಸ್ ಗುಪ್ತಚರ ವಿಭಾಗದಲ್ಲಿರುವ ಶಿವಾಜಿರಾವ್ ವಿಜಯ ಸಾರಥಿಗೆ ಮಾಹಿತಿ ಕೊಡುವ ಕೆಲಸ ಮಾಡುತ್ತಿದ್ದಾನೆ. ಪದ್ಮನಾಭನಗರದ ಕಾಂಗ್ರೆಸ್ ಲೀಡರ್ ಬಾಲು ಆತನ ಬೆನ್ನಿಗೆ ನಿಂತಿರುವುದು, ಕೇಳಿದಷ್ಟು ದುಡ್ಡು ಚೆಲ್ಲಲು ಸಾರಥಿ ಸಿದ್ಧವಿರುವುದು - ಪೊಲೀಸರು ಇನ್ನೇನು ಮಾಡಲು ಸಾಧ್ಯ?

ಇನ್ನು ಕೋದಂಡ ಎಂದಿನಂತೆ 'ತಲೆಮರೆಸಿಕೊಂಡಿದ್ದಾನೆ'. ಕೋದಂಡನನ್ನು ಬಂಧಿಸುವಂತೆ ಒತ್ತಾಯಿಸಿ ಶಾಸ್ತ್ರಿನಗರದ ಜನ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕುವುದಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಎಸಿಪಿ ರಮೇಶ್‌ಚಂದ್ರ, ಇನ್ಸ್‌ಪೆಕ್ಟರ್ ನವೀನ್ ಕುಲಕರ್ಣಿ ಜನರ ಒತ್ತಡಕ್ಕೆ ಮತ್ತು ಕಾನೂನಿಗೆ ತಲೆಬಾಗುತ್ತಾರೋ ಅಥವ ಕೊಲೆಗಡುಕರ ದುಡ್ಡಿಗೆ ನಾಲಿಗೆ ಚಾಚುತ್ತಾರೋ ಎಂಬುದನ್ನು ಭವಿಷ್ಯ ಮಾತ್ರವೇ ಹೇಳಬಲ್ಲದು.


• ವರದಿಗಾರ

ಯಾರು ಮೊದಲು ನೆಲಕ್ಕುರುಳುತ್ತಾರೆ?
ಸೈಕಲ್ ರವಿಯೋ ಅಥವಾ ವಿಜಯ ಸಾರಥಿಯೋ?

ಸೈಕಲ್ ರವಿಗೆ ಎಷ್ಟರಮಟ್ಟಿಗೆ ಇದರ ಅರಿವಿದೆಯೋ ಗೊತ್ತಿಲ್ಲ, ಆತ ಸ್ವಲ್ಪ ಮೈ ಮರೆತರೆ ವಿಜಯ ಸಾರಥಿ, ಕೋದಂಡ, ಕಡ್ಡಿ ನವೀನ ಮತ್ತು ತಾಂಡು ಸೇರಿಕೊಂಡು ಆತನ ಹೆಣ ಉರುಳಿಸುವ ದಿನ ದೂರ ಇಲ್ಲ ಎಂಬುದಂತೂ ನಿಜ.

ಅಸಲಿಗೆ ರೌಡಿ ಪರಂಧಾಮ ಮತ್ತು ಸೈಕಲ್ ರವಿ ಸೇರಿಕೊಂಡು ಸಾರಥಿ ಮತ್ತು ಕೋದಂಡನನ್ನು ಎತ್ತಲು ಬಹಳ ಹಿಂದೆಯೇ ಸ್ಕೆಚ್ ಹಾಕಿದ್ದರು. ಆದರೆ, ಪರಂಧಾಮ ಪೊಲೀಸ್ ಎನ್‌ಕೌಂಟರ್‌ನಲ್ಲಿ ನೆಲಕ್ಕುರುಳುವುದರೊಂದಿಗೆ ಅವರ ಸ್ಕೆಚ್ ವಿಫಲವಾಯಿತು. ಅಲ್ಲಿಂದಾಚೆಗೆ ಪೊಲೀಸರು ತನ್ನನ್ನೂ ಎತ್ತಬಹುದೆಂಬ ಭಯ ಸೈಕಲ್ ರವಿಗೆ ಬಂದು ಆತ ಹುಷಾರಾಗಿಬಿಟ್ಟ. ಆದೇ ವೇಳೆಯಲ್ಲಿ ಲಿಂಗನ ಗ್ಯಾಂಗು ಕೂಡ ತನ್ನನ್ನು ಫಿನಿಷ್ ಮಾಡಲು ಹೊಂಚು ಹಾಕುತ್ತಿರುವ ಸತ್ಯವೂ ಸೈಕಲ್ ರವಿಗೆ ಗೊತ್ತಾಗಿ ಭಾರಿ ಮುಂಜಾಗ್ರತೆ ವಹಿಸತೊಡಗಿದ. ಹೀಗಾಗಿ ವಿಜಯ ಸಾರಥಿ ಮತ್ತು ಕೋದಂಡರನ್ನು ಮುಗಿಸುವ ಸೈಕಲ್ ರವಿಯ ಯೋಜನೆ ಅನಿರ್ದಿಷ್ಟಾವಧಿಗೆ ಮುಂದೂಡಲ್ಪಟ್ಟಿತು.

ಸೈಕಲ್ ರವಿ ತಮ್ಮ ಮೇಲೆ ಕಣ್ಣಿಟ್ಟಿರುವ ಸುದ್ದಿ ವಿಜಯ ಸಾರಥಿಯ ಗ್ಯಾಂಗಿಗೆ ಗೊತ್ತಿರದ ವಿಚಾರವೇನಾಗಿರಲಿಲ್ಲ. ಹಾಗಾಗಿ ಆತನಿಂದ ತಪ್ಪಿಸಿಕೊಂಡಿರುವುದು ಮಾತ್ರವಲ್ಲ ಆತ ಆ ಕೆಲಸ ಮಾಡುವ ಮೊದಲೇ ಆತನನ್ನೇ ಎತ್ತುವ ಪ್ರತಿ ಯೋಜನೆಯನ್ನೂ ವಿಜಯ ಸಾರಥಿಯ ಗ್ಯಾಂಗು ಮಾಡತೊಡಗಿದೆ. ಅಸಲಿಗೆ ವಿಜಯ ಸಾರಥಿ ಮತ್ತವನ ಗ್ಯಾಂಗು ನೆಲಕ್ಕುರುಳುತ್ತೋ ಅಥವಾ ಸೈಕಲ್ ರವಿ ನೆಲಕ್ಕುರುಳುತ್ತಾನೋ ಎಂಬುದು ಅವರವರ ಚಾಣಾಕ್ಷತೆ ಮೇಲೆ ಮಾತ್ರವಲ್ಲ, ಈ ನಿಟ್ಟಿನಲ್ಲಿ ಪೊಲೀಸರು ಏನು ಮಾಡುತ್ತಾರೆ ಎಂಬುದರ ಮೇಲೂ ನಿಂತಿದೆ. ಒಟ್ಟಿನಲ್ಲಿ ಅವರಿಬ್ಬರಲ್ಲಿ ಒಬ್ಬರು ಹೆಣವಾಗುವುದು ಸತ್ಯ. ಆದಾದ ಮೇಲೆ ಅದಕ್ಕೆ ಸೇಡಿನ ಕೊಲೆ. ಇದು ನಿಲ್ಲುವ ವಿಚಾರವಲ್ಲ. ಯಾರು ಮೊದಲು ನೆಲಕ್ಕುರುಳುತ್ತಾರೆಂಬುದಷ್ಟೇ ವಿಚಾರ. ಪೊಲೀಸರು ಈಗಲೇ ಎಚ್ಚೆತ್ತುಕೊಂಡರೆ ಮತ್ತೊಂದು ಸೀರಿಯಲ್ ಮರ್ಡರ್‌ಗಳನ್ನು ತಪ್ಪಿಸಬಹುದೇನೋ?



ಅಂತಾರಾಷ್ಟ್ರೀಯ ಸ್ಪಿರಿಚುಯಲ್ ಮಾರುಕಟ್ಟೆಯ ಜಿದ್ದಾಜಿದ್ದಿ

ಸೆಕ್ಸಾನಂದ V/s ರವಿಶಂಕರ್



ಆರ್ಟ್ ಆಫ್ ಲೀವಿಂಗ್‌ನ ರವಿಶಂಕರ್ ಮರ್ಜಿಗೆ ಬಿದ್ದೇ ಬಿಜೆಪಿ ಸರ್ಕಾರ ಧ್ಯಾನಪೀಠದ ನಿತ್ಯಾನಂದನನ್ನು ಬಲಿಹಾಕುತ್ತಿದೆಯೆ? ಸೆಕ್ಸ್ ಸಿಡಿಯನ್ನು ನೆಪ ಮಾಡಿಕೊಂಡು ತನ್ನ ಆರೆಸ್ಸೆಸ್ ಲಿಂಕ್ ಬಳಸಿ ನಿತ್ಯಾನಂದನನ್ನು ಇನ್ನಿಲ್ಲದಂತೆ ಮುಗಿಸುವುದು ರವಿಶಂಕರ್ ಉದ್ದೇಶವೆ?

ಯಾವ ಹುತ್ತದಲ್ಲಿ ಯಾವ ಹಾವಿದೆಯೋ ಗೊತ್ತಿಲ್ಲ. ಆದರೆ ನಿತ್ಯಾನಂದನ ಆಪ್ತವಲಯದಲ್ಲಿ ಈ ಥರದ ಅಳುಕಂತೂ ದಿನೇದಿನೇ ಹೆಪ್ಪುಗಟ್ಟುತ್ತಲೇ ಇದೆ. ತನ್ನನ್ನು ಮತ್ತೆ ತಲೆ ಎತ್ತದ ಹಾಗೆ ಹೊಸಕಿ ಹಾಕಲು ಆರೆಸ್ಸೆಸ್ ಹೇಗೆ ಕತ್ತಿ ಮಸೆಯುತ್ತಿದೆಯೋ ಹಾಗೇ ಆರೆಸ್ಸೆಸ್ಸನ್ನು ತನ್ನ ವಿರುದ್ಧ ರವಿಶಂಕರನೇ ಛೂಬಿಟ್ಟಿದ್ದಾನೆಂಬ ಗುಮಾನಿ ನಿತ್ಯಾನಂದನಿಗೆ ಶುರುವಾಗಿದೆ. ತನ್ನ ವಕೀಲರ ಬಳಿ, ಬಿಡದಿಯ ಶಿಷ್ಯ ನಿತ್ಯ ಸಚ್ಚಿದಾನಂದನ ತಲೆಗೆ ಮತ್ತು ತನ್ನ ಪರಮಾಪ್ತ ಬೆಂಬಲಿಗ ಉದ್ಯಮಿಗಳ ಬಳಿ ಇಂಥದೊಂದು ಆರೆಸ್ಸೆಸ್ ಗುಮ್ಮನ ಹುಳಬಿಟ್ಟಿರುವ ನಿತ್ಯಾನಂದನ ತರ್ಕದ ಸಾರಾಂಶವಿಷ್ಟು.

ಸದ್ಯ ಅಂತರರಾಷ್ಟ್ರೀಯ ಸ್ಪಿರಿಚುಯಲ್ ಮಾರುಕಟ್ಟೆಯಲ್ಲಿ ಆರ್ಟ್ ಆಫ್ ಲೀವಿಂಗ್ ಮತ್ತು ರವಿಶಂಕರ್‌ಗೆ ತೀವ್ರ ಪೈಪೋಟಿ ಅಂತ ಇದ್ದದ್ದು ತನ್ನಿಂದ ಮಾತ್ರ. ಕಳೆದ ಹತ್ತು ವರ್ಷಗಳಿಂದ ರವಿಶಂಕರ್ ಸಾಧಿಸಲಾಗದಷ್ಟು ಜನಪ್ರಿಯತೆ ಮತ್ತು ಹಣ ಬೆಂಬಲವನ್ನು ಕೇವಲ ಐದೇ ವರ್ಷದಲ್ಲಿ ಸಾಧಿಸಿದ್ದು ತಾನೊಬ್ಬನೆ. ಆಸ್ಟ್ರೇಲಿಯಾ, ಕೆನಡಾ, ಜರ್ಮನಿ, ಅಮೆರಿಕ, ಮಲೇಷಿಯಾ, ಸಿಂಗಾಪೂರ್, ಬ್ರಿಟನ್ ಇತ್ಯಾದಿ ದೇಶಗಳಲ್ಲಿ ಆರ್ಟ್ ಆಫ್ ಲೀವಿಂಗ್‌ಗಿಂತಲೂ ವೇಗವಾಗಿ ಬೆಳೆದದ್ದು ಧ್ಯಾನಪೀಠ. ಇಂಟರ್‌ನ್ಯಾಷನಲ್ಲಾಗಿ ನಾನೆಲ್ಲಿ ಆತನನ್ನು ಹಿಂದಕ್ಕೆ ಹಾಕುತ್ತೇನೋ ಎಂಬ ಹೊಟ್ಟೆಕಿಚ್ಚು ರವಿಶಂಕರ್‌ಗಿದೆ. ಅದಕ್ಕೆ ಆರೆಸ್ಸೆಸ್ ನಾಯಕರನ್ನು ಛೂಬಿಟ್ಟು ಬಿಜೆಪಿ ಸರ್ಕಾರದ ಮೂಲಕ ತನ್ನನ್ನು ಮುಗಿಸುವುದು ರವಿಶಂಕರ್ ಹುನ್ನಾರ.....!

ಹೀಗೆಂದು ತನ್ನ ಪರಮಾಪ್ತರ ವಲಯದಲ್ಲಿ ಪುಕಾರೆಬ್ಬಿಸುತ್ತಿರುವ ಲಂಪಟ ಸ್ವಾಮಿ ನಿತ್ಯಾನಂದನ ಆತಂಕಕ್ಕೂ ಕಾರಣವಿದೆ. ಆತನ ವಿರುದ್ಧ ತಮಿಳುನಾಡು ಪೊಲೀಸರು ದಾಖಲಿಸಿರುವ ಕೇಸುಗಳಾಗಲಿ, ಇದನ್ನೇ ಆಧರಿಸಿ ಬಿಡದಿ ಪೊಲೀಸರು ಹೂಡಿರುವ ಮೊಕದ್ದಮೆಗಳಾಗಲಿ ಅಂಥ ಅಕ್ಷಮ್ಯ ಪ್ರಕರಣಗಳೇನಲ್ಲ. ಅತ್ಯಾಚಾರದ ಕೇಸನ್ನು ಹಾಕಿ ಅದನ್ನು ಬಿಡದಿ ಪೊಲೀಸರಿಗೆ ವರ್ಗಾಯಿಸಿರುವ ತಮಿಳುನಾಡು ಪೊಲೀಸರು ಇದೆಲ್ಲಕ್ಕೂ ಆಧಾರವಾಗಿಟ್ಟುಕೊಂಡಿರುವುದು ನಿತ್ಯಾನಂದನ ಕಾರಿನ ಡ್ರೈವರ್ ಲೆನಿನ್ ಕರುಪ್ಪನ್ ಕೊಟ್ಟ ದೂರನ್ನು.

ಯಾರೋ ಯಾರನ್ನೋ ಅತ್ಯಾಚಾರ ಮಾಡಿದ್ದಾರೆಂದು ಇನ್ನಾರೋ ದೂರು ಕೊಡಲು ಸಾಧ್ಯವಿಲ್ಲ. ಅತ್ಯಾಚಾರಕ್ಕೀಡಾದ ಮಹಿಳೆಯೇ ಬಂದು ದೂರು ಕೊಟ್ಟಿದ್ದರೆ ಅದು ಬೇರೆಯದೇ ಲೆಕ್ಕವಾಗುತ್ತಿತ್ತು. ನಿತ್ಯಾನಂದನ ಜೊತೆ ಟೀವಿ ಕ್ಯಾಮೆರಾಕ್ಕೆ ಸಿಕ್ಕಿಬಿದ್ದ ನಟಿ ರಂಜಿತಾ ದೂರು ಕೊಟ್ಟಿದ್ದರೆ ಆ ಮಾತು ಬೇರೆ. ಆದರೆ ದೂರು ಕೊಟ್ಟಿದ್ದು ಕಾರ್ ಚಾಲಕ ಲೆನಿನ್ ಕರುಪ್ಪನ್. ಇದನ್ನೇ ಆದರಿಸಿ ಅತ್ಯಾಚಾರ ಮತ್ತು ಅಸಹಜ ಲೈಂಗಿಕ ಕ್ರಿಯೆಯ ಕೇಸನ್ನು ಬಿಡದಿ ಪೊಲೀಸರು ಹಾಕಿದ್ದಾರೆ. ಇದಲ್ಲದೇ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಮತ್ತು ವಂಚನೆ ಕೇಸನ್ನೂ ಬಿಡದಿ ಪೊಲೀಸರು ದಾಖಲಿಸಿದ್ದಾರೆ. ಸ್ವಾಮೀಜಿಯಾಗಿ ವ್ಯಭಿಚಾರ ಮಾಡಿದ್ದು, ನಂಬಿ ಬಂದ ಭಕ್ತರನ್ನು ಕಾಮಲಾಲಸೆಗೆ ದೂಡಿ ಬಳಸಿಕೊಂಡಿದ್ದು ವಂಚನೆಯೇ. ಇದಕ್ಕೂ ಕೂಡ ವಂಚನೆಗೀಡಾದ ವ್ಯಕ್ತಿ ದೂರು ಕೊಡಬೇಕಾಗುತ್ತದೆ.

ಎತ್ತಿಂದೆತ್ತ ನೋಡಿದರೂ ನಿತ್ಯಾನಂದನ ವಿರುದ್ಧ ಬಿಡದಿ ಪೊಲೀಸರು ದಾಖಲಿಸಿದ ಕೇಸುಗಳ್ಯಾವುದೂ ಗಂಭೀರವಾದ ಅಕ್ಷಮ್ಯ ಸ್ವರೂಪದ ಪ್ರಕರಣಗಳೇನಲ್ಲ. ಟಿವಿಗಳು ಬಿತ್ತರಿಸಿದ ಕಾಮಕೇಳಿಯ ದೃಶ್ಯ ಬಿಟ್ಟರೆ ನಿತ್ಯಾನಂದನ ವಿರುದ್ಧ ನಿಖರ ಸಾಕ್ಷ್ಯಾಧಾರಗಳಿಲ್ಲ. ಬಿಡದಿಯ ಧ್ಯಾನಪೀಠದಲ್ಲಿ ದೊರೆತ ಶ್ರೀಗಂಧದ ತುಂಡುಗಳ ವಿರುದ್ಧ ಅರಣ್ಯ ಇಲಾಖೆ ಹೂಡಿರುವ ಕೇಸೊಂದೇ ಅಷ್ಟಿಷ್ಟು ಗಟ್ಟಿ ಕೇಸೆಂಬುದನ್ನು ಬಿಟ್ಟರೆ ನಿತ್ಯಾನಂದನ ವಿರುದ್ಧದ ಮಿಕ್ಕಾವ ಪ್ರಕರಣಕ್ಕೂ ನಿಖರ ಸಾಕ್ಷಿ, ಲಿಖಿತ ದಾಖಲೆಗಳಿಲ್ಲ.

ಹೀಗಿದ್ದೂ ಸಿಬಿಐ ಪೊಲೀಸರು ತನ್ನನ್ನು ಹಿಮಾಚಲದ ತನಕ ಬೆನ್ನಟ್ಟಿ ಬಂದು ಹಿಡಿದದ್ದು, ಮೊದಮೊದಲು ಕೇವಲ ಸುದ್ದಿ ಮತ್ತು ಕುತೂಹಲದ ಮಟ್ಟಿಗಷ್ಟೇ ಸೀಮಿತಗೊಂಡಿದ್ದ ಪೊಲೀಸ್ ಕಾರ್ಯಾಚರಣೆ ರಾತ್ರೋರಾತ್ರಿ ವಿಪರೀತ ಗಂಭೀರಕ್ಕೆಡೆ ಮಾಡಿಕೊಟ್ಟಿದ್ದು, ಪ್ರಕರಣದಲ್ಲಿ ಹುರುಳಿಲ್ಲದೇ ಹೋದರೂ ರಾಮನಗರ ಕೋರ್ಟಿನಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್ ಜಾಮೀನು ಕೊಡದಂತೆ ವಾದ ಮಂಡಿಸಿದ್ದು, ಮತ್ತು ಹೈಕೋರ್ಟ್‌ನಲ್ಲೂ ಇದೇ ಪುನರಾವರ್ತನೆಗೊಂಡು ತನ್ನ ಜಾಮೀನು ಅರ್ಜಿ ತಿರಸ್ಕೃತವಾಗಿದ್ದು ನಿತ್ಯಾನಂದನ ಅನುಮಾನಕ್ಕೆ ಮೂಲ ಕಾರಣ. ಈ ಹಿಂದೆಯೇ ಆದಿಚುಂಚನಗಿರಿ ಬಾಲಗಂಗಾದರನಾಥರನ್ನು ತನ್ನ ಬಿಡದಿ ಆಶ್ರಮಕ್ಕೆ ಕರೆಸಿಕೊಂಡಿದ್ದ ನಿತ್ಯಾನಂದನಿಗೆ ಕೈಲಾಶ ಶ್ರಮದ ಶಿವಪುರಿ ಸ್ವಾಮಿಯ ಜೊತೆ ಸಲುಗೆಯಿತ್ತು. ಸ್ಥಳೀಯವಾಗಿ ಬೇರಾವುದೇ ಸ್ವಾಮಿ, ಮಠಾಧಿಪತಿಯ ಜೊತೆ ನಿತ್ಯಾನಂದ ಪೈಪೋಟಿಗಿಳಿಯುವ ಅಗತ್ಯವೇ ಇರಲಿಲ್ಲ. ಏಕೆಂದರೆ ನಿತ್ಯಾನಂದನ ಗುರಿಯಿದ್ದದ್ದು ಅಂತರರಾಷ್ಟ್ರೀಯ ಸ್ಪಿರಿಚುಯಲ್ ಮಾರ್ಕೆಟ್ಟಿನ ಮೇಲೆ.

ಈಗಾಗಲೇ ರಜನೀಶ್, ಮಹೇಶ್ ಯೋಗಿ, ಗುರು ವಾಸ್ವಾನಿ ಮುಂತಾದವರನ್ನು ಕಂಡಿದ್ದ ವಿದೇಶಿಯರಿಗೆ ಆ ದಾರಿಯಲ್ಲಿ ಇತ್ತೀಚೆಗೆ ಸಿಕ್ಕವನು ಆರ್ಟ್ ಆಫ್ ಲೀವಿಂಗ್‌ನ ರವಿಶಂಕರ್ ಮಾತ್ರ. ರಜನೀಶ್, ಬುದ್ಧ, ಪತಂಜಲಿಯ ಯೋಗ ಇತ್ಯಾದಿಗಳನ್ನೆಲ್ಲ ಕಾಪಿ ಹೊಡೆದು ಆರ್ಟ್ ಆಫ್ ಲೀವಿಂಗ್ ಮತ್ತು ಸುದರ್ಶನ ಕ್ರಿಯಾ ಯೋಗ ಎಂದು ಪೇಟೆಂಟ್ ಮಾಡಿಸಿಕೊಂಡು ರೊಕ್ಕ ಬಾಚುತ್ತಿದ್ದವನು ರವಿಶಂಕರ್. ಒಂದು ಹಂತದಲ್ಲಿ ರವಿಶಂಕರ್ ಬಗ್ಗೆ ವಿದೇಶಿಯರಲ್ಲಿ ವಿಚಿತ್ರ ಕುತೂಹಲವಿತ್ತು. ಮೊದಮೊದಲು ಆರ್ಟ್ ಆಫ್ ಲೀವಿಂಗ್ ಎಂದೇ ಶುರುಹಚ್ಚಿಕೊಂಡ ರವಿಶಂಕರ್ ಕ್ರಮೇಣ ಸ್ಪಿರಿಚ್ಯುಯಲ್‌ನ ಮಧ್ಯೆ ಹಿಂದೂತ್ವವನ್ನು ಬೆರೆಸಲಾರಂಭಿಸಿದ. ಸುದರ್ಶನ ಕ್ರಿಯಾ ಯೋಗದ ಜೊತೆಗೇ ಸಂಸ ತ, ಗಣಪತಿ ಸ್ತೋತ್ರ, ಇತ್ಯಾದಿ ರಿಲಿಜಿಯಸ್ ತಂತ್ರಗಳನ್ನು ಬೆರೆಸಲಾರಂಭಿಸಿದ. ಜೊತೆಗೆ ನೊಬೆಲ್ ಪ್ರಶಸ್ತಿಗಾಗಿ ಕ್ಷುಲ್ಲಕ ಲಾಬಿಯನ್ನೂ ಶುರು ಹಚ್ಚಿಕೊಂಡ. ಬರುಬರುತ್ತ ರವಿಶಂಕರ್‌ನ ಯೋಗಕ್ಕಿಂತಲೂ ಗುರು ರಾಮದೇವ್ ಹೇಳಿಕೊಡುತ್ತಿದ್ದ ಪತಂಜಲಿ ಯೋಗವೇ ಹೆಚ್ಚು ಪರಿಣಾಮಕಾರಿಯೆಂಬುದು ಅಂತರರಾಷ್ಟ್ರೀಯವಾಗಿ ಸಾಬೀತುಗೊಂಡಿತು. ಅಸಲಿಗೆ ರವಿಶಂಕರ್ ನೆಟ್ಟಗೆ ಯೋಗವನ್ನೇ ಕಲಿತಿರಲಿಲ್ಲ. ಬಸ್ತಿಕ ಪ್ರಾಣಾಯಾಮ ಕಪಾಲಬಾತಿ, ಬ್ರಮರಿ ಇತ್ಯಾದಿ ಯೋಗಗಳನ್ನೆಲ್ಲ ರವಿಶಂಕರ್ ತಪ್ಪುತಪ್ಪಾಗಿ ಹೇಳಿಕೊಡುತ್ತಿದ್ದಾನೆಂದು ಸ್ವತ ರಾಮದೇವ್ ರವಿಶಂಕರ್ ವಿರುದ್ಧ ಕಿಡಿ ಕಾರುತ್ತಿದ್ದದ್ದು ಆರ್ಟ್ ಆಫ್ ಲೀವಿಂಗ್ ಪಾಲಿಗೆ ದೊಡ್ಡ ಹಿನ್ನಡೆಯಾಯ್ತು.


ಈ ಹಂತದಲ್ಲೇ ಚಿಗುರಿಕೊಂಡವನು ನಿತ್ಯಾನಂ ಧ್ಯಾನಪೀಠದ ಹೆಸರಲ್ಲಿ ತನ್ನದೇ ವಿಚಿ ಸ್ಪಿರಿಚುಯಾಲಿಟಿಯನ್ನು ರವಿಶಂಕರ್‌ಗಿಂತಲೂ ಆಕರ್ಷಕವ ಹೇಳುತ್ತಿದ್ದವನು ನಿತ್ಯಾನಂದ. ದೇಶವಿದೇಶಗಳಲ್ಲಿನ ಆಟ ಆಫ್ ಲೀವಿಂಗ್‌ಗೆ ಪ್ರತಿಸ್ಪರ್ಧಿಯಾಗಿ ಆತ ಅದೆಷ್ಟು ಬೆ ಬೆಳೆದನೆಂದರೆ; ರವಿಶಂಕರ್ ಹತ್ತೋ ಹದಿನೈದ ವರ್ಷಗಳಲ್ಲಿ ಸಾಧಿಸಲಾಗದಷ್ಟು ಶ್ರೀಮಂತಿಕೆಯನ್ನು ಐ ವರ್ಷದಲ್ಲಿ ನಿತ್ಯಾನಂದ ಗಳಿಸಿಬಿಟ್ಟ. ಜರ್ಮನಿ, ಆಸ್ಟ್ರೇಲಿಯಾ ಕೆನಡಾ, ಅಮೆರಿಕಾ, ಮಲೇಷಿಯಾ ಇತ್ಯಾದಿ ವಿದೇಶಗ ಸೇರಿದಂತೆ ಪ್ರಪಂಚದ ವಿವಿಧೆಡೆಗಳಲ್ಲಿ ಒಟ್ಟು ಅರವತ್ತಾ ಜಂಟಿ ಬ್ಯಾಂಕ್ ಖಾತೆಗಳನ್ನು ತೆರೆದು ಒಟ್ಟು ಎರ ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ನಿತ್ಯಾನ ಶೇಖರಿಸಿಟ್ಟಿದ್ದ. ಈತನಕ ರವಿಶಂಕರ್ ಸಂಗ್ರಹಿಸಲಾ ಮೊತ್ತವಿದು. ನಿಜಕ್ಕೂ ಇದು ನಿತ್ಯಾನಂದ ತನ್ನ ಭಕ್ತಾದಿಗಳಿ ಸಂಗ್ರಹಿಸಿದ ದುಡ್ಡಾ ಅಥವಾ ಅಂತರರಾಷ್ಟ್ರೀಯವ ಎಲ್ಟಿಟಿಇಯನ್ನು ನಿಷೇಧಿಸಿದ ನಂತರ ತಮಿಳು ಉಗ ಈ ರೂಪದಲ್ಲಿ ಬಚ್ಚಿಟ್ಟ ದುಡ್ಡಾ ಗೊತ್ತಿಲ್ಲ.

ಇದೆಲ್ಲದರ ಫಲವೆಂಬಂತೆ ರಾತ್ರೋರಾತ್ರಿ ನಿತ್ಯಾನ ರವಿಶಂಕರ್‌ಗೆ ಪ್ರತಿಸ್ಪರ್ಧಿಯೆಂಬಂತೆ ಬೆಳೆದುಬಿಟ್ಟ. ಭಾ ಮತ್ತು ಕರ್ನಾಟಕದ ಮಟ್ಟಿಗೆ ರವಿಶಂಕರ್ ಪ್ರಭಾವಿಯಾದ ಅಂತರರಾಷ್ಟ್ರೀಯವಾಗಿ ನಿತ್ಯಾನಂದನ 'ವಿಚಿತ್ರ' ವೇದಾಂ ಮಾರ್ಕೆಟ್ ಸೃಷ್ಟಿಯಾಗಿತ್ತು. ಜರ್ಮನಿ ಮ ಕೆನಡಾಗಳಲ್ಲಂತೂ ಆರ್ಟ್ ಆಫ್ ಲೀವಿಂಗ್ ಬ ಬಂದವರೆಲ್ಲ ನಿತ್ಯಾನಂದನ ಧ್ಯಾನಪೀಠ ಆಕರ್ಷಿತರಾಗುತ್ತಿದ್ದರು.

ಇದು ಒಂದು ವಿದ್ಯಮಾನವಾದರೆ ಇತ್ತ ರವಿಶಂ ಬರುಬರುತ್ತ ಆರೆಸ್ಸೆಸ್‌ಗೆ ಆಪ್ತನಾಗಲಾರಂಭಿಸಿದ. ಕಂ



ಯುದ್ಧಕ್ಕೆಳಿಯುವ ಮುನ್ನ ಜೊತೆಜೊತೆಯಲಿ...



ಚೆಡ್ಡಿಗಳೊಂದಿಗೆ ರವಿಶಂಕರ



ಪೊಲೀಸರೊಂದಿಗೆ ನಿತ್ಯಾನಂದ

ಗುರುಗಳ ಕಾರ್ಪೋರೇಟ್ ಯುದ್ಧ

ಅಂತರರಾಷ್ಟ್ರೀಯ ಸ್ಪಿರಿಚುಯೆಲ್ ಮಾರುಕಟ್ಟೆಯಲ್ಲಿ ನಿತ್ಯಾನಂದ ವೇಗವಾಗಿ ಬೆಳೆದದ್ದು ಆರ್ಟ್ ಆಫ್ ಲಿವಿಂಗ್‌ನ ರವಿಶಂಕರನಲ್ಲಿ ಮೊದಲಿನಿಂದಲೂ ಹೊಟ್ಟೆ ಉರಿಗೆ ಕಾರಣವಾಗಿತ್ತು.

ವೈಯ್ಯಾರಿ ರವಿಶಂಕರನ ಮಾಜಿ ಅನುಯಾಯಿಯೊಬ್ಬರು `confessions of a guruholic' ಎಂಬ ವೆಬ್‌ಸೈಟಿನಲ್ಲಿ ಈ ಹೊಟ್ಟೆ ಉರಿ ಪ್ರಾರಂಭವಾಗಿದ್ದು ಹೇಗೆ ಎಂದು ವಿವರಿಸಿದ್ದಾರೆ. ಅವರು ಹೇಳುವ ಪ್ರಕಾರ:

ಒಮ್ಮೆ ಯಾವುದೋ ಊರಿನಲ್ಲಿ ರವಿಶಂಕರನ ಸತ್ಸಂಗ್ ನಡೆಯುತ್ತಿತ್ತಂತೆ. ಆಗ ಅಲ್ಲಿಗೆ ಬಂದ ನಿತ್ಯಾನಂದನ ಶಿಷ್ಯನೊಬ್ಬ ಧ್ಯಾನಪೀಠವು ಮಾಡುತ್ತಿರುವ ಸಾಧನೆಗಳ ಬಗ್ಗೆ ಒಂದು ಬ್ರೋಷರ್ ಅನ್ನು ರವಿಶಂಕರನ ಕೈಗೆ ಕೊಟ್ಟನಂತೆ. ಅದನ್ನು ನೋಡುನೋಡುತ್ತಲೇ ರವಿಶಂಕರನ ಕೋಪ ನೆತ್ತಿಗೇರಿದೆ. ಸಿಂಡರ ಮೂತಿ ಹಾಕಿಕೊಂಡೇ ಸತ್‌ಸಂಗವನ್ನು ರವಿಶಂಕರ ಮುಗಿಸಿದ್ದಾನೆ.

ಅಲ್ಲಿಂದ ತನ್ನ ಕೊಠಡಿಗೆ ಓಡಿಹೋದ ರವಿಶಂಕರ ತನ್ನ ಆಪ್ತರನ್ನು ಕರೆದು "ನಾಳೆಯೇ ಎಲ್ಲಾ ಶಿಷ್ಯರ ಸಭೆ ಕರೆಯಿರಿ. ಎಲ್ಲರನ್ನೂ ಯೋಗ ಟೀಚರ್‌ಗಳನ್ನಾಗಿ ಮಾಡೋಣ. ನಾವು ಹೀಗೆ ನಿಧಾನಗತಿಯಲ್ಲಿ ಸಾಗಿದರೆ ಇವನ (ನಿತ್ಯಾನಂದನ) ಗುಂಪು ನಮ್ಮನ್ನು ಓವರ್‌ಟೇಕ್ ಮಾಡಿಬಿಡುತ್ತದೆ" ಎಂದೆಲ್ಲಾ ಬಡಬಡಾಯಿಸಿದ್ದಾನೆ.

ಇಂತಹ ಹೊಟ್ಟೆಕಿಚ್ಚಿನ ರವಿಶಂಕರನಿಗೆ ನಿತ್ಯಾನಂದ ಸೆಕ್ಸ್ ಸ್ಕ್ಯಾಂಡಲ್‌ನಲ್ಲಿ ಸಿಕ್ಕಿಹಾಕಿಕೊಂಡಿದ್ದು ರೊಟ್ಟಿ ತುಪ್ಪದಲ್ಲಿ ಜಾರಿಬಿದ್ದಂತಾಗಿದೆ. ಈ ರವಿಶಂಕರ್ ಎಂತಹ ಕ್ರಿಮಿನಲ್ ಅಂದರೆ ಇತ್ತೀಚೆಗೆ ಈತ ಅಮೆರಿಕಕ್ಕೆ ಭೇಟಿ ನೀಡಿದಾಗ ಬೇಕೆಂತಲೇ ಲಾಸ್ ಏಜಲೀಸ್‌ನಲ್ಲಿರುವ ನಿತ್ಯಾನಂದರ ವೇದಿಕ್ ಟೆಂಪಲ್‌ಗೆ ಭೇಟಿ ನೀಡಿದ್ದಾನೆ. ಆತನ ಪಿಆರ್‌ಓ ಪ್ರಕಾರ ಆ ಟೆಂಪಲ್‌ನಲ್ಲಿದ್ದ ನಿತ್ಯಾನಂದನ ಅನುಯಾಯಿಗಳಿಗೆ ಸಾಂತ್ವನ ಹೇಳಲು ರವಿಶಂಕರ ಹೋಗಿದ್ದನಂತೆ.


ಆದರೆ ವಾಸ್ತವವಾಗಿ ನಿತ್ಯಾನಂದ ಸಿಕ್ಕಿಬಿದ್ದ ನಂತರ ಲಾಸ್ ಏಜಲೀಸ್ ಮತ್ತು ಸಿಯಾಟಲ್ ಎಂಬ ಮತ್ತೊಂದು ನಗರದಲ್ಲಿರುವ ಧ್ಯಾನಪೀಠದ ಆಸ್ತಿಗಳ ಸುತ್ತ ಎರಡು ಗುಂಪುಗಳ ನಡುವೆ ವಿವಾದವೆದ್ದಿವೆ. ಇದನ್ನೇ ನೆಪಮಾಡಿಕೊಂಡು ಅಪಾರ ಮೌಲ್ಯದ ಈ ಎರಡೂ ಆಸ್ತಿಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳುವುದು ರವಿಶಂಕರನ ಅಸಲಿ ಹುನ್ನಾರ.

ನಿತ್ಯಾನಂದನ ಮಾಜಿ ಅನುಯಾಯಿ ಪ್ರಕಾರ "ಕೆಲವರ್ಷಗಳ ಹಿಂದೆ ಹಲವಾರು ಜನ ರವಿಶಂಕರನನ್ನು ತೊರೆದು ನಿತ್ಯಾನಂದನ ಭಕ್ತರಾಗಿದ್ದರು. ಈಗ ನಿತ್ಯಾನಂದನ ವಿರುದ್ಧ ರವಿಶಂಕರನ ಸೇಡು ತೀರಿಸಿಕೊಳ್ಳಲು ನೋಡುತ್ತಿದ್ದಾನೆ. ಹಾಗೆಯೇ ನಿತ್ಯಾನಂದನ ಮಾಜಿ ಬೆಂಬಲಿಗರಿಂದಲೂ ಹಣ ಎತ್ತಲು ನೋಡುತ್ತಿದ್ದಾನೆ."

ಇದು ಒಂದು ಕಾರ್ಪೊರೇಟ್ ಕಂಪನಿ ಇನ್ನೊಂದು ಕಾರ್ಪೊರೇಟ್ ಕಂಪನಿಯನ್ನು ಸ್ವಾಹಾ ಮಾಡಿದಂತೆ."

ಇದರಿಂದ ಈ ರವಿಶಂಕರ, ನಿತ್ಯಾನಂದ ಇತ್ಯಾದಿ 'ಗುರು"ಜೀಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪಿರಿಚುಯೆಲ್ ಕೆಲಸವನ್ನಲ್ಲ, ಬದಲಾಗಿ ನೆಮ್ಮದಿ ನೀಡುವ ಹೆಸರಲ್ಲಿ ಹಗಲುಗಳ್ಳತನ ಎಂಬುದು ಸ್ಪಷ್ಟವಾಗುತ್ತವಲ್ಲವೇ?!

ಆದಿಚುಂಚನಗಿರಿ
...ಕ್ಕೆಗೆ ಧ್ಯಾನಪೀಠ?



ನಿತ್ಯಾನಂದನ ಧ್ಯಾನಪೀಠ ಯಾರ ಪಾಲು?

...ನಿತ್ಯಾನಂದನ ಬಿಡದಿ ಆಶ್ರಮವನ್ನು ...ಚುಂಚನಗಿರಿ ಮಠ ವಹಿಸಿಕೊಳ್ಳುತ್ತಾ? ಅಥವಾ ...ರವೇ ಧ್ಯಾನಪೀಠವನ್ನು ನಿತ್ಯಾನಂದನಿಂದ ಕಿತ್ತು ...ಚುಂಚನಗಿರಿ ಬಾಲಗಂಗಾಧರನಾಥರಿಗೆ ...ುತ್ತಾ?

...ಗೊಂದು ವದಂತಿ ಸದ್ಯ ಬಿಡದಿ ಸುತ್ತಮುತ್ತ ...ಯಾಡುತ್ತಿದೆ. ಬಿಡದಿಯ ಧ್ಯಾನಪೀಠವನ್ನು ...ಂದನಿಂದ ಕಸಿದುಕೊಳ್ಳುವುದು ಅಷ್ಟು ಸುಲಭವಲ್ಲ, ಅದು ಕಾನೂನು ರೀತ್ಯವೇ ಆಗಬೇಕು ಅಥವಾ ನಿತ್ಯಾನಂದನೇ ...ಗಿ ಅದನ್ನು ಸರ್ಕಾರಕ್ಕೋ ಆದಿಚುಂಚನಗಿರಿ ಮಠಕ್ಕೋ ವಹಿಸಿಕೊಡಬೇಕು. ದೇವಿಕಾರಾಣಿ ರೋರಿಚ್‌ರ ...ಣಿ ಎಸ್ಟೇಟನ್ನು ಸರ್ಕಾರ ವಹಿಸಿಕೊಂಡಂತೆ ನಿತ್ಯಾನಂದನ ಧ್ಯಾನಪೀಠಕ್ಕೂ ಆಡಳಿತಾಧಿಕಾರಿಯೊಬ್ಬನನ್ನು ನೇಮಿಸಬಹುದು.

ಇದಕ್ಕೆಲ್ಲ ನಿತ್ಯಾನಂದನ ವಿರುದ್ಧ ಪಕ್ಕಾ ಸಾಕ್ಷ್ಯಾಧಾರಗಳು ಬೇಕು.

...ಂಥದೊಂದು ಪರಿಸ್ಥಿತಿಗಾಗಿ ಸರ್ಕಾರ ಯಾವ ಸಾಕ್ಷ್ಯವನ್ನು ಹುಡುಕುತ್ತಿದೆ? ಈಗಿರುವ ಕೇಸುಗಳಿಂದ ಸ್ವಾಮಿ ...ಸೆಯಾಗುವತನಕ ಧ್ಯಾನಪೀಠವನ್ನು ಸರ್ಕಾರ ವಹಿಸಿಕೊಳ್ಳುತ್ತಾ? ಅಲ್ಲಿಯತನಕ ಅದನ್ನು ಆದಿಚುಂಚನಗಿರಿ ...ೇ ನಿಭಾಯಿಸಬೇಕೆಂಬ ಷರತ್ತು ವಿಧಿಸಬಹುದಾ? ಅಥವಾ ರವಿಶಂಕರ್‌ಗೇ ಧ್ಯಾನಪೀಠವನ್ನು ವಹಿಸಿಕೊಳ್ಳುವ ...ುದೆಯಾ?

...ದ್ಯಕ್ಕಂತೂ ಆದಿಚುಂಚನಗಿರಿ ಹೆಸರೇ ಮುಂಚೂಣಿಯಲ್ಲಿದೆ.

...ಂದ್ರ ಸರಸ್ವತಿ ಸ್ವಾಮಿಯನ್ನು ಜಯಲಲಿತಾ ಸರ್ಕಾರ ...ಸಿದಾಗ ಬೆಂಗಳೂರಿನ ಶಂಕರಮಠದೆದುರು ...ಂದೂ ಪರಿಷತ್ ಸಾಧು ನಂತರ ಪ್ರತಿಭಟನೆಯೊಂದನ್ನು ...ಸಿದಾಗ ಅದರ ನೇತೃತ್ವ ವಹಿಸಿದ್ದೇ ರವಿಶಂಕರ್. ... ಆದಿಚುಂಚನಗಿರಿ ಸ್ವಾಮಿ, ಪೇಜಾವರ ಸ್ವಾಮಿ, ...ರು ಸ್ವಾಮಿ, ಹೀಗೆ ಹದಿನೈದು ಮಂದಿ ಪ್ರತಿಷ್ಠಿತ ...ಧೀಶರ ಮಧ್ಯೆ ಧರ್ಮ ಸಂರಕ್ಷಣಾ ಸಮಿತಿಯ ...ಲ್ಲಿ ನಡೆದ ಪ್ರತಿಭಟನೆಯಲ್ಲಿ ಮುಂಚೂಣಿಯಲ್ಲಿದ್ದ ...ಕರ್. ಇಷ್ಟಾಗಿದ್ದೇ ತಡ ರವಿಶಂಕರ್ ನೇರವಾಗಿ ... ವೇದಿಕೆಯಲ್ಲಿ ಕಾಣಿಸಿಕೊಂಡ. ಬೆಂಗಳೂರಿನ ...ನೆ ಮೈದಾನದಲ್ಲಿ ನಡೆದ ಆರೆಸ್ಸೆಸ್ ಪ್ರಾಂತೀಯ ...ವೇಶದಲ್ಲಿ ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ... ಸುದರ್ಶನ್‌ಜೀ ಜೊತೆ ರವಿಶಂಕರ್ ವೇದಿಕೆಯಲ್ಲಿ ...ಬಿಟ್ಟ. ಅವತ್ತು ರವಿಶಂಕರ್ ಜೊತೆ ಆರೆಸ್ಸೆಸ್ ...ಯಲ್ಲಿ ಬಾಲಗಂಗಾಧರನಾಥ ಸ್ವಾಮಿ ಮತ್ತು ...ಡಿಯಾ ಕೂಡ ಉಪಸ್ಥಿತರಿದ್ದರು. ಇದು ರವಿಶಂಕರ್ ... ಆರೆಸ್ಸೆಸ್ ನೆಂಟಸ್ತಿಕೆಗೆ ಉದಾಹರಣೆಯಷ್ಟೇ.

...ದರೆ ನಿತ್ಯಾನಂದ ಮಾತ್ರ ಯಾವತ್ತೂ ಆರೆಸ್ಸೆಸ್‌ಗೆ ... ಹಾಕಲಿಲ್ಲ. ಒಮ್ಮೆ ನರೇಂದ್ರ ಮೋದಿಯನ್ನು ...ನಾದರೂ ಅದು ಗುಜರಾತ್‌ನ ಶ್ರೀಮಂತರನ್ನು ...ಮಿಸುವುದಕ್ಕೇ ಹೊರತು ಅದಕ್ಕೂ ಸಂಘ ...ರಕ್ಕೂ ಏನೇನೂ ಸಂಬಂಧವಿರಲಿಲ್ಲ. ಮೋದಿಯಂತೆ ಎಸ್.ಎಂ. ಕೃಷ್ಣ ದೀಕೆ, ದೇಶಪಾಂಡೆಯಂತವರನ್ನೂ ಬಿಡದಿಗೆ ಕರೆಸಿ ನಿತ್ಯಾನಂದ ಸನ್ಮಾನಿಸಿದ್ದ.

ಯಾವತ್ತು ನಿತ್ಯಾನಂದನ ಕಾಮಕೇಳಿ ಬಯಲಾಯಿತೋ ರವಿಶಂಕರ್‌ಗೆ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಗಿದೆ. ಆರೆಸ್ಸೆಸ್‌ಗೂ ನಿತ್ಯಾನಂದನ ವಿರುದ್ಧ ಮೊದಲೇ ಅಸಹನೆಯಿತ್ತು, ರವಿಶಂಕರ್ ಮತ್ತು ಆರೆಸ್ಸೆಸ್‌ನ ಮುಖ್ಯಸ್ಥ ವೈ.ಚ. ಜಯದೇವರ ಮಧ್ಯೆ ಆ ಕಾಲದಿಂದಲೂ ಆತ್ಮೀಯತೆ ಇದ್ದೇ ಇದೆ. ಈ ಎಲ್ಲದರ ಪರಿಣಾಮವಾಗೇ ಬಿಜೆಪಿ ಸರ್ಕಾರ ನಿತ್ಯಾನಂದನನ್ನು ಮುಗಿಸಲು ಹೊರಟಿದೆಯೇ? ರವಿಶಂಕರ್‌ನ ಒತ್ತಾಸೆಯ ಮೇರೆಗೇ ಆರೆಸ್ಸೆಸ್ ಮುಖ್ಯಸ್ಥ ಜಯದೇವ ಗೃಹ ಸಚಿವ ಆಚಾರ್ಯರ ಕಿವಿ ಕಚ್ಚಿರಬಹುದೆ?

ಹಾಗಿಲ್ಲದಿದ್ದರೆ ಎರಡು ವಾರಗಳ ಹಿಂದಷ್ಟೇ ಹೈಕೋರ್ಟಿನಲ್ಲಿ ನಿತ್ಯಾನಂದನ ಪರ ತಟಸ್ಥ ಹೇಳಿಕೆ ಕೊಟ್ಟಿದ್ದ ಸಿಐಡಿ ಪೊಲೀಸರು ಏಕಾಏಕಿ ಗಾಬರಿಗೆ ಬಿದ್ದು ಕಾರ್ಯಾಚರಣೆಗಿಳಿದಿದ್ದೇಕೆ? ಬಿಡದಿ ಆಶ್ರಮವನ್ನು ಪದೇಪದೇ ಶೋಧಿಸಿದ್ದೇಕೆ? ಆತ ಬಳಸುತ್ತಿದ್ದ ಕಂಪ್ಯೂಟರ್ ಹಾರ್ಡ್‌ಡಿಸ್ಕ್‌ನಲ್ಲಿ ಯಾವ ಮರ್ಮವಿದೆ? ಅದನ್ನು ಕಟ್ಟಿಕೊಂಡು ಪೊಲೀಸರು ಏನು ಸಾಧಿಸಬೇಕಿದೆ?

ನಿನ್ನೆಮೊನ್ನೆಯ ತನಕ ಕುಂಟುತ್ತಾ ಸಾಗಿದ್ದ ನಿತ್ಯಾನಂದನ ಕೇಸು ಏಕಾಏಕಿ ತೀವ್ರಗೊಂಡಿದೆಯೆಂದರೆ ಇನ್ನೇನೋ ಇರಲೇಬೇಕು. ಏನದು?

• ರಾ. ಸೋಮನಾಥ್
ra.somanath2010@gmail.com

ತಾಂತ್ರಿಕ್ ಸೆಕ್ಸ್‌ಗೆ ...ಲಿಯಾದ ಭಕ್ತೆಯರೆಷ್ಟು?

...ತ್ತ ಶಿಮ್ಲಾದಲ್ಲಿ ನಿತ್ಯಾನಂದ ಪೊಲೀಸರ ವಶವಾಗಿದ್ದು ...ಯಾಗುತ್ತಿದ್ದಂತೆ ಬಿಡದಿಯ ಧ್ಯಾನಪೀಠಕ್ಕೆ ನುಗ್ಗಿದ್ದ ...ಏ ಎಸ್.ಪಿ. ಯೋಗಪ್ಪನವರಿಗೇ ಅಚ್ಚರಿ ಕಾದಿತ್ತು, ... ಕೇವಲ ತಮಿಳು ನಟಿ ... ಜೊತೆಗಷ್ಟೇ ಆತ ಕಾಮಕೇಳಿ ...ಸಿ ಗೊತ್ತಿದ್ದ ಪೊಲೀಸರೇ ಬೆಚ್ಚಿ ...ುತೆ ನಿತ್ಯಾನಂದನ ಮತ್ತೊಂದು ... ಬಯಲಾಗಿತ್ತು.



...ು ತಾಂತ್ರಿಕ್ ಸೆಕ್ಸ್. ... ಸೆಕ್ಸ್ ಮೂಲಕ ...ಪೆ ಹೊಂದುವುದು!


... ಜೊತೆ ಲೈಂಗಿಕವಾಗಿ ಸಹ ... ಮಹಿಳೆಯರಿಗೆ ದೈವಸಿದ್ಧಿ ...ತ್ತದೆಯೆಂದು ನಿತ್ಯಾನಂದ ...ತ್ತಿದ್ದ. ಅದಕ್ಕೆಂದೇ ವಿಶಿಷ್ಟ ಶಯ್ಯಾಗೃಹವೊಂದನ್ನು ...ಆಶ್ರಮದಲ್ಲಿ ನಿರ್ಮಿಸಿದ್ದ. ಅದಕ್ಕೆ ತಾಂತ್ರಿಕ್ ಸೆಕ್ಸ್ ...ಚಿತ್ರ ಹೆಸರಿಟ್ಟಿದ್ದ. ತನ್ನ ಜೊತೆ ತಾಂತ್ರಿಕ್ ಸೆಕ್ಸ್‌ನಲ್ಲಿ ...ವ ಭಕ್ತೆಯರು, ಕ್ಷೋಭಿತ ಮಹಿಳೆಯರೊಂದಿಗೆ ... ಲಿಖಿತ ಒಪ್ಪಂದವೊಂದನ್ನು ಮಾಡಿಕೊಳ್ಳುತ್ತಿದ್ದ. ...ಪ್ಪಂದದ ಪ್ರಕಾರ ಯಾವ್ಯಾವ ಭಕ್ತೆಯರನ್ನು ಆತ ...ಬಳಸಿಕೊಳ್ಳುತ್ತಿದ್ದನೋ ಅವರ್‍ಯಾರೂ ಈ ಬಗ್ಗೆ ...ಂದಿಗೂ ಬಾಯಿಬಿಡುವಂತಿಲ್ಲ!

...ಗೆ ತಾಂತ್ರಿಕ್ ಸೆಕ್ಸ್ ಸೋಗಿನಲ್ಲಿ ನಿತ್ಯಾನಂದನ ವಿಕೃತಿಗೆ ...ಾದ ಅನೇಕ ಹೆಂಗಸರು ಬರೆದುಕೊಟ್ಟ ಕರಾರುಪತ್ರಗಳೆಲ್ಲ ಈಗ ಸಿಐಡಿ ಪೊಲೀಸರ ಕೈಸೇರಿವೆ. ಇದು ನಿತ್ಯಾನಂದ ಎಂಥಾ ಕ್ರಿಮಿನಲ್ ಮತ್ತು ಕೊಳಕು ವ್ಯಕ್ತಿ ಎಂಬುದಕ್ಕೆ ಸಾಕ್ಷಿಯಷ್ಟೇ. ಈ ಪ್ರಕಾರವೇ ಆತನಿಗೆ ಶಿಕ್ಷೆ ವಿಧಿಸಬಹುದಾದರೆ ಜನ್ಮಾಪಿ ಆತ ಕಂಬಿ ಎಣಿಸಬೇಕಾಗುತ್ತದೆ. ದೇವರು, ಧರ್ಮ, ದೈವೀಕೃಪೆ, ದೈವ ಸಾಕ್ಷಾತ್ಕಾರದ ಹೆಸರಲ್ಲಿ ಅದೆಷ್ಟೋ ಹೆಣ್ಣುಮಕ್ಕಳನ್ನು ಮುಕ್ಕಿ ಹಾಕಿದ ನಿತ್ಯಾನಂದ ಓರ್ವ ತಾಂತ್ರಿಕ್ ರೇಪಿಸ್ಟ್ ಮಾತ್ರ.

ಪೊಲೀಸ್ ಮೂಲಗಳೇ ಹೇಳುವಂತೆ ನಿತ್ಯಾನಂದನ ತಾಂತ್ರಿಕ್ ಸೆಕ್ಸ್ ಮೋಸಕ್ಕೆ ಕೇವಲ ತಮಿಳು ನಟಿಯರಷ್ಟೇ ಅಲ್ಲ ಕನ್ನಡದ ನಟಿಯರೂ ಬಲಿಯಾಗಿದ್ದಾರೆ. ಸದ್ಯ ಬಿಜೆಪಿಯ ಎಮ್ಮೆಲ್ಸಿಗಿರಿಯ ನಿರೀಕ್ಷೆಯಲ್ಲಿರುವ ಓರ್ವ ನಟಿ, ಕೊಡಗು ಮೂಲದ ಮತ್ತೊಬ್ಬ ನಟಿ ಕೂಡ ಈತನ ತಾಂತ್ರಿಕ್ ಸೆಕ್ಸ್ ಪಾತ್ರಧಾರಿಗಳ ಪಟ್ಟಿಯಲ್ಲಿದ್ದಾರೆ!

ಕೇವಲ ತಮಿಳು ನಟಿ ರಂಜಿತಾ ಜೊತೆಗಷ್ಟೇ ನಿತ್ಯಾನಂದನ ಚಕ್ಕಂದದ ದೃಶ್ಯ ಕಂಡವರಿಗೆ ಆತನ ತಾಂತ್ರಿಕ್ ಸೆಕ್ಸ್ ಒಪ್ಪಂದದ ವಿವರಗಳು ನಿಜಕ್ಕೂ ಆಘಾತ ಹುಟ್ಟಿಸಲಿವೆ. ಆದರೆ ಬಿಜೆಪಿ ಸರ್ಕಾರಕ್ಕೆ ಇಚ್ಛಾಶಕ್ತಿ ಇದೆಯೇ? ಸ್ವಾಮಿ ಸೋಗಿನ ಕಾಮುಕನೊಬ್ಬನನ್ನು ಶಿಕ್ಷಿಸುವ ಛಲ ನಿಜಕ್ಕೂ ಇದೆಯೇ? ಅಥವಾ ಇದನ್ನೇ ಬ್ಲ್ಯಾಕ್‌ಮೇಲ್‌ಗೆ ಬಳಸಲಿದೆಯೇ?

ಕಿರಾತಕ ಸೈಕಲ್ ರವಿಯ ಸ್ಕೆಚ್
ಕತ್ತಿಗುಪ್ಪೆ ಲಿಂಗನ ಅಂತ್ಯ



ಕತ್ತಿಗುಪ್ಪೆ ಲಿಂಗ

ಬೆಂಗಳೂರಿನ ಪಾಪಕೂಪವೇ ತಲ್ಲಣಿಸುವಂತೆ ಕತ್ತಿಗುಪ್ಪೆ ಲಿಂಗನ ಕೊಲೆಯಾಗಿದೆ!

ಸೈಕಲ್ ರವಿ ಎಂಬ ರಣಪಾತಕಿಯ ಸುದೀರ್ಘ ಸಂಚೊಂದು ಲಿಂಗನ ಹತ್ಯೆಯ ಮೂಲಕ ಅಂತ್ಯಗೊಂಡಿದೆ. ಅತ್ತ ಜೈಲಲ್ಲೇ ಕೂತು ಲಿಂಗನ ಬಲಗೈ ಬಂಟ ಮುನಿಯ ಅದೆಷ್ಟು ಹಲ್ಲು ಕಡಿದನೋ. ಗುರು ಕೊರಂಗು ಅದೆಷ್ಟು ಕಣ್ಣೀರಿಟ್ಟನೋ, ಹೊಸಕೆರೆಹಳ್ಳಿಯ ಕೌನ್ಸಿಲರ್ ನಾರಾಯಣ ಹೇಗೆಲ್ಲಾ ಹಣೆ ಚಚ್ಚಿಕೊಂಡನೋ, ಮಂತ್ರಿ ಅಶೋಕ್ ಅದೆಷ್ಟು ಬಾರಿ ಬೆವರೊರೆಸಿಕೊಂಡರೋ; ಅಂತೂ ನಡೆಯಬಾರದ್ದು ನಡೆದುಹೋಗಿದೆ.

ಏಪ್ರಿಲ್ 29 ರ ಗುರುವಾರದ ಮಟಮಟ ಮಧ್ಯಾಹ್ನವೇ ತನ್ನ ಮನೆಯಲ್ಲೇ ವಿಪರೀತ ಕಾಯಿಲೆ ಬಿದ್ದು ಮಲಗಿರುವಾಗಲೇ ತನ್ನನ್ನು ವೈರಿ ಗ್ಯಾಂಗ್ ಮುಗಿಸುತ್ತದೆಯೆಂಬ ನಿರೀಕ್ಷೆ ತಾನೇ ಲಿಂಗನಿಗೆಲ್ಲಿತ್ತು?

ರಣಪಾತಕಿ ಸೈಕಲ್ ರವಿಯ ತಲೆಯೇ ಅಂಥಾದ್ದು!

ಕತ್ತಿಗುಪ್ಪೆ, ಬನಶಂಕರಿ, ಇಟ್ಟಮಡು, ಹೊಸಕೆರೆಹಳ್ಳಿ, ಬ್ಯಾಂಕ್ ಕಾಲೋನಿ, ಪದ್ಮನಾಭನಗರ, ವಿದ್ಯಾಪೀಠ, ಉತ್ತರಹಳ್ಳಿ, ಗುಟ್ಟಹಳ್ಳಿ, ಗಿರಿನಗರ ಇತ್ಯಾದಿ ಕಾಲುಭಾಗದ ಬೆಂಗಳೂರಿನ ಪಾಪಕೂಪವನ್ನು ಕಳೆದೊಂದು ದಶಕದಿಂದ ಸಂಭಾಳಿಸಿದವನು ಲಿಂಗರಾಜ ಉರ್ಫ್ ಕತ್ತಿಗುಪ್ಪೆ ಲಿಂಗ. ಬನಶಂಕರಿ, ಇಟ್ಟಮಡು ಸುತ್ತಮುತ್ತಲ ಗ್ಯಾಂಗ್‌ವಾರ್‌ನ ಭೀಕರತೆ ಮತ್ತು ತಾಕತ್ತು ಬಲ್ಲವರಿಗೆ ಲಿಂಗನ ಚಾಣಾಕ್ಷತೆ ಗೊತ್ತಿರಲೇಬೇಕು. ಪಾಖಂಡಿ ಸೈಕಲ್ ರವಿ ಮತ್ತು ಕಿರಾತಕ ಪರಂಧಾಮನ ವಿರುದ್ಧ ಸುದೀರ್ಘಕಾಲದ ತನಕ ಸೆಣಸಾಡಿದ, ಏಟಿಗೆ ಎದಿರೇಟು ಕೊಟ್ಟು, ಅವರಿಗೆ ಸರಿಸಮನಾಗಿ ನಿಂತ ಏಕೈಕ ಹಂಟರ್ ಲಿಂಗ ಇಷ್ಟೊಂದು ನಿರಾಯಾಸವಾಗಿ ಕೊಲೆಯಾಗುತ್ತಾನೆಂದು ಯಾರು ತಾನೇ ನಿರೀಕ್ಷಿಸಲು ಸಾಧ್ಯವಿತ್ತು?

ಲಿಂಗನ ದುರಂತವೋ ದೌರ್ಭಾಗ್ಯವೋ ಗೊತ್ತಿಲ್ಲ, ಇಲ್ಲಿಗೆ ತಿಂಗಳ ಹಿಂದಷ್ಟೇ ಜೈಲಿಂದ ಹೊರಬಿದ್ದ ಲಿಂಗನಿಗೆ ಟಿಬಿ ಕಾಯಿಲೆ ಅಂದರೆ ಕ್ಷಯರೋಗ ಶುರುವಾಗಿತ್ತು. ಅದೂ ವಿಪರೀತ ಉಲ್ಬಣಗೊಂಡಿತ್ತು. ಕನಿಷ್ಠ ಎರಡು ದಿನಕ್ಕೊಮ್ಮೆಯಾದರೂ ಆತ ಪದ್ಮನಾಭನಗರದ ದೇವೇಗೌಡ ಆಸ್ಪತ್ರೆಗೆ ಚಿಕಿತ್ಸೆಗೆಂದು ಬರಲೇಬೇಕಿತ್ತು. ಯಾವತ್ತೂ ಯಾಮಾರದ, ತನ್ನ ಸುತ್ತ ಸದಾ ಡಜನ್ನುಗಟ್ಟಲೇ ಹುಡುಗರನ್ನಿಟ್ಟುಕೊಂಡಿರುತ್ತಿದ್ದ, ಆಪತ್ತಿಗೆಂದು ಒಂದಲ್ಲ ಎರಡು ರಿವಾಲ್ವರ್‌ಗಳನ್ನಿಟ್ಟುಕೊಳ್ಳುತ್ತಿದ್ದ, ತಾನಿರುವೆಡೆ 'ಪಸರ್' ಎಂದರೆ ಮಾಹಿತಿ ಕಲೆ ಹಾಕಲೆಂದೇ ಹುಡುಗರನ್ನಿಟ್ಟುಕೊಳ್ಳುತ್ತಿದ್ದ, ಕ್ಷಣಕ್ಷಣಕ್ಕೂ ಮಾಹಿತಿ ಪಡೆಯುತ್ತಿದ್ದ ಲಿಂಗ ಏಪ್ರಿಲ್ 29 ರಂದು ಯಾಮಾರಿಬಿಟ್ಟ.



ಸೈಕಲ್ ರವಿ

ಯಾವುದೋ ಕೇಸಿಗೆಂದು ಕೋರ್ಟಿಗೆ ಬಂದವನು ಮಧ್ಯಾಹ್ನ ಒಂದರ ಹೊತ್ತಿಗೆ ಇಟ್ಟಮಡುವಿನ ತನ್ನ ತಾಯಿ ಮನೆಗೆ ಬಂದಿದ್ದಾನೆ. ಅವತ್ತಷ್ಟೇ ಅಲ್ಲ, ಕಳೆದ ಒಂದು ತಿಂಗಳಿನಿಂದ ಲಿಂಗ ಹೀಗೆ ಪ್ರತಿನಿತ್ಯ ತನ್ನ ತಾಯಿಯ ಮನೆಯಲ್ಲೇ ಇದ್ದು ಟೀಬಿ ಕಾಯಿಲೆಗೆ ಚಿಕಿತ್ಸೆ ಪಡೆಯುತ್ತಿದ್ದ. ಅಲ್ಲಿಂದಲೇ ಆಸ್ಪತ್ರೆಗೆ ಹೋಗಿಬರುತ್ತಿದ್ದ. ಚನ್ನಮ್ಮನಕೆರೆ ಇನ್ಸ್‌ಪೆಕ್ಟರ್ ವಾಸುದೇವ ನಾಯಕ್ ಬೇರೆ ಕಂಡಕಂಡಲ್ಲಿ ಲಿಂಗನ ಹುಡುಗರನ್ನು ಎಳೆದೊಯ್ದು ರಿಪೇರಿ ಮಾಡುತ್ತಿದ್ದರು. ಸಿಸಿಬಿಯ ಪೊಲೀಸರಂತೂ ಕೈತೊಳೆದುಕೊಂಡು ಲಿಂಗನ ಬೆನ್ನು ಹತ್ತಿದ್ದರು. ಒಂದೆಡೆ ಪೊಲೀಸ್ ಕಾಟ, ಮತ್ತೊಂದೆಡೆ ಕ್ಷಯರೋಗ. ಮಗದೊಂದೆಡೆ ದುಷ್ಮನ್‌ಗಳ ಹಾವಳಿ. ಹೀಗೆ ಹೈರಾಣಾದ ಲಿಂಗ ತನಗೆ ಗೊತ್ತಿಲ್ಲದಂತೆ ಎಡವಟ್ಟು ಮಾಡಿಕೊಂಡಿದ್ದ.

ಅದು ಕತ್ತಿಗುಪ್ಪೆಯ ತನ್ನ ಮನೆಯನ್ನು ಬಿಟ್ಟು ಇಟ್ಟಮಡುವಿನ ತನ್ನ ತಾಯಿ ಮನೆಗೆ ವಾಸ್ತವ್ಯ ಬದಲಿಸಿದ್ದು!

ತಾನು ಇಟ್ಟಮಡು ಮನೆಗೆ ವಾಸ್ತವ್ಯ ಬದಲಿಸಿದ್ದು ಯಾರ ಗಮನಕ್ಕೂ ಬರುವುದಿಲ್ಲ ಎಂದೇ ಲಿಂಗ ಲೆಕ್ಕ ಹಾಕಿದ್ದ. ಮನೆ ಸುತ್ತಮುತ್ತ ಹುಡುಗರನ್ನಿಟ್ಟುಕೊಂಡರೆ ತಾನೇ ಹೊರಜಗತ್ತಿಗೆ ಗೊತ್ತಾಗೋದು? ಆದಕ್ಕೆಂದು ಲಿಂಗ ಒಬ್ಬನೇ ಹೋಗಿ ಬಂದು ಮಾಡುತ್ತಿದ್ದ. ಹೆಂಡತಿಯನ್ನೂ ಅಲ್ಲಿಗೇ ಕರೆಸಿಕೊಂಡ. ಅಲ್ಲಿಂದಲೇ ಆಸ್ಪತ್ರೆಗೆ ಹೋಗಿ ಬರತೊಡಗಿದ. ಪಾಖಂಡಿ ಸೈಕಲ್ ರವಿಗಿದು ಗೊತ್ತಾಗುವುದು ಎಷ್ಟು ಹೊತ್ತು?

ಇಟ್ಟಮಡು ಬಾಬುವನ್ನು ಕೊಂದು ತನ್ನ ಪರಮಾಪ್ತ ಪರಂಧಾಮನ ಎನ್‌ಕೌಂಟರ್‌ಗೆ ಕಾರಣನಾದ ಸೈಕಲ್ ರವಿ ಪ್ರಳಯಾಂತಕ. ಕಳೆದ ಮೂರು ವರ್ಷಗಳಿಂದ ಆತನನ್ನು ಕಂಡ ಪೊಲೀಸರಿಲ್ಲ, ಲಿಂಗ ಬದುಕಿದ್ದಷ್ಟೂ ದಿನ ತಾನು ಬನಶಂಕರಿ ಸುತ್ತಮುತ್ತ ಕಾಲಿಡುವಂತಿಲ್ಲ ಎಂಬುದು ಆತನಿಗೆ ಚೆನ್ನಾಗಿ ಗೊತ್ತು, ಲಿಂಗನ ವಿರುದ್ಧ ಒಂದೆಡೆ ಪರಂಧಾಮನನ್ನು ಎತ್ತಿಕಟ್ಟಿದ್ದ ಮತ್ತೊಂದೆಡೆ ಬಳ್ಳನಂಥ ಕ್ರಿಮಿನಲ್‌ನನ್ನು ಬೆಳೆಸಿದ. ಮಗದೊಂದೆಡೆ ಶಿಷ್ಯ ಜಾಂಟಿಯನ್ನು ರೆಡಿ ಮಾಡಿದ. ತನ್ನ ವಿರುದ್ಧ ಸೈಕಲ್ ರವಿ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಫೀಲ್ಡಿಗಿಳಿದಿದ್ದಾನೆಂಬುದು ಲಿಂಗನಿಗೆ ಚೆನ್ನಾಗಿ ಗೊತ್ತಿತ್ತು, ಸೈಕಲ್ ರವಿಯಷ್ಟೇ ಅಲ್ಲದೇ ಸುಪಾರಿ ಕಿಲ್ಲರ್ ಬಳ್ಳಕೂಡ ಜೈಲಿಂದ ಹೊರಬಿದ್ದಿದ್ದು ಲಿಂಗನ ಗಮನಕ್ಕೆ ಬಂದಿತ್ತು, ಎಲ್ಲಾ ಗೊತ್ತಿದ್ದೂ ಲಿಂಗ ಯಾಮಾರಿಬಿಟ್ಟ.

ದುಷ್ಮನ್ ಪೊಲೀಸರಿಂದ ಬಚಾವಾಗಲು ಬೆಂಗಳೂರನ್ನೇ ತೊರೆದು ತಮಿಳುನಾಡಿನ ಯಾವುದೋ ಊರು ಸೇರಿಕೊಂಡಿದ್ದಾನೆಂದು ಲಿಂಗ ಲೆಕ್ಕ ಹಾಕಿದ್ದು ತಪ್ಪಾಗಿತ್ತು, ತಾನು ಪ್ರತಿನಿತ್ಯ ಬಳಸುತ್ತಿದ್ದ ಮೊಬೈಲನ್ನು ತಮಿಳುನಾಡಿನ ಯಾವುದೋ ಹಳ್ಳಿಯಲ್ಲಿಟ್ಟು ಅದರ ಸಿಗ್ನಲ್ ಗ್ರಹಿಸಿದ ಪೊಲೀಸರು ಅದನ್ನೇ ನಂಬುವಂತೆ ಮಾಡಿ ದಿಕ್ಕುತಪ್ಪಿಸುತ್ತಿದ್ದ ರವಿ ಬೆಂಗಳೂರಿನಲ್ಲೇ ಅವಿತು ಕುಳಿತಿದ್ದ. ಲಿಂಗ ಜೈಲಿಂದ ಹೊರಬಿದ್ದಾಗಿನಿಂದ ಆತನ ಪ್ರತಿಯೊಂದು ಚಲನವಲನದ ಮೇಲೂ ಕಣ್ಣಿಟ್ಟಿದ್ದ. ಲಿಂಗನಿಗೆ ಟೀಬಿ ಕಾಯಿಲೆ ಬಂದಿದ್ದು ಆತನಿಗೆ ನಿಖರವಾಗಿ ಗೊತ್ತಿತ್ತು. ಪಾಲಿಕೆ ಚುನಾವಣೆಯಲ್ಲಿ ಲಿಂಗನ ಗ್ಯಾಂಗ್ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಲು ಓಡಾಡಿದ್ದನ್ನೂ ಆತ ಗಮನಿಸಿದ್ದ. ಪಾಲಿಕೆ ಚುನಾವಣೆಯಲ್ಲೇ ಲಿಂಗನನ್ನು ಮುಗಿಸಲು ಸೈಕಲ್ ರವಿ ಮತ್ತು ಬಳ್ಳ ರೌಂಡಿಂಗ್ ಮಾಡಿದ್ದರು.

ಲಿಂಗನ ದೌರ್ಭಾಗ್ಯವೆಂದರೆ ಒಂದೆಡೆ ಆತನನ್ನು ಕ್ಷಯರೋಗ ಕಾಡುತ್ತಿದ್ದಂತೆ ಆತನ ಬಲಗೈ ಬಂಟ ಮತ್ತು ಮಹಾನ್ ಫೈಟರ್ ಮಚ್ಚು ಮುನಿಯ ಜೈಲು ಪಾಲಾಗಿದ್ದ. ಪಾಲಿಕೆ ಎಲೆಕ್ಷನ್ ಮುಗಿದು ಲಿಂಗ ಯಾರ್‍ಯಾರನ್ನು ಬೆಂಬಲಿಸಿದ್ದನೋ ಅವರೆಲ್ಲರೂ ಗೆದ್ದ ಖುಷಿಯಲ್ಲಿ ಲಿಂಗ ತಾನಿನ್ನು ರೌಡಿಸಂ ಬಿಟ್ಟೇ ಬಿಡುತ್ತೇನೆಂದು ಜಂಟಿ ಕಮೀಷನರ್ ಅಲೋಕ್‌ಕುಮಾರ್ ಕಂಡು ಮಾತು ಕೊಟ್ಟು ಬಂದ. ಮುಂದೊಮ್ಮೆ ಪಾಲಿಕೆ ಎಲೆಕ್ಷನ್ನಿಗೆ ನಿಲ್ಲುವುದು ಆತನ ಉದ್ದೇಶವಾಗಿತ್ತು. ಆದರೆ ದುಷ್ಮನಿ ಬಿಡಬೇಕಲ್ಲ. ಪಾಲಿಕೆ ಎಲೆಕ್ಷನ್ ಮುಗಿದು ವಾರಕ್ಕೇ ಸೈಕಲ್ ರವಿಯ ಸಹಚರ ಪೆಟ್ಟಾ ಸೂರಿ ಕೊಲೆಯಾದ. ಆತನ ಕೊಲೆಯಲ್ಲಿ ಲಿಂಗನ ಕೈವಾಡವಿರಬಹುದೆಂಬ ಗುಮಾನಿ ಸೈಕಲ್ ರವಿಗೆ. ಬಹುಶಃ ಬಳ್ಳನನ್ನು ಬಿಟ್ಟು ಲಿಂಗನ ಮೇಲೆ ಅಟ್ಯಾಕ್ ಮಾಡಿಸುವುದು ರವಿಯ ತಂತ್ರವಾಗಿತ್ತೇನೊ. ಆದರೆ ಬಳ್ಳ ತಿರುಪತಿ ಯಾತ್ರೆಗೆಂದು ಹೊರಟವನು ವಾರದ ಹಿಂದಷ್ಟೇ ಅಪಘಾತಕ್ಕೀಡಾಗಿ ಆಸ್ಪತ್ರೆಗೆ ದಾಖಲಾದ. ಹಾಗಂತ ಬಳ್ಳನನ್ನು ಕಾದು ಕೂತರೆ ಕೆಲಸ ನಡೆಯಬೇಕಲ್ಲ-

ರವಿ ತಾನೇ ರೆಡಿಯಾಗಿದ್ದಾನೆ. ಏಪ್ರಿಲ್ 29 ರ ಮಧ್ಯಾಹ್ನ ಲಿಂಗ ಕೋರ್ಟಿನಿಂದ ಬಂದದ್ದು, ಅಲ್ಲಿಂದ ಏಕಾಂಗಿಯಾಗಿ ಇಟ್ಟಮಡುವಿನ ತನ್ನ ತಾಯಿ ಮನೆ ಹೊಕ್ಕಿದ್ದು, ಮನೆ ಸುತ್ತಮುತ್ತ ಯಾರೂ ಬೆಂಗಾವಲಿಗಿಲ್ಲದೇ ಇರುವುದು ಇತ್ಯಾದಿ ಪ್ರತಿಯೊಂದನ್ನು ರವಿ ಗಮನಿಸಿದ್ದಾನೆ. ಬಹುಶಃ ಅನೇಕ ದಿನಗಳ ಹಿಂದಿನಿಂದಲೇ ಸ್ಕೆಚ್ಚು ರೆಡಿಯಾಗಿತ್ತೇನೊ. ಲಿಂಗ ಊಟ ಮಾಡಿ ಟೀಬಿ ಕಾಯಿಲೆಗೆ ಮಾತ್ರೆ ನುಂಗಿ ಮಲಗಿದ್ದು ಗೊತ್ತಾಗಿದ್ದೇ ತಡ, ಏಳೆಂಟು ಬೈಕುಗಳು ಮನೆಗೆ ಲಗ್ಗೆಯಿಟ್ಟವೆ. ಎಲ್ಲರೂ ಮಂಕಿ ಕ್ಯಾಪ್ ಧರಿಸಿದ್ದರು. ಕೈಗಳಲ್ಲಿ ಲಾಂಗ್ ಹಿಡಿದು ಲಿಂಗನ ಮನೆಗೆ ನುಗ್ಗಿದ್ದೇ ಆತನ ಹೆಂಡತಿ ಮತ್ತು ತಂಗಿಯನ್ನು ರೂಮೊಂದಕ್ಕೆ ಕೂಡಿ ಹಾಕಿ ಮಲಗಿದ್ದ ಲಿಂಗನನ್ನು ಹಿಡಿದು ಕತ್ತರಿಸಿದ್ದಾರೆ. ಅಂಥಾ ಸ್ಥಿತಿಯಲ್ಲೂ ಬಡಿದಾಡಿದ ಲಿಂಗ ತನ್ನ ಜೀವದ ಕೊನೆಯ ಹೋರಾಟವೋ ಎಂಬಂತೆ ರಕ್ತ ಸುರಿಸಿಕೊಂಡೇ ಮನೆಯಿಂದ ಆಚೆಗೆ ಓಡಿದ್ದಾನೆ. ಹಂತಕರು ಹೊರಗೂ ಇದ್ದರಲ್ಲ, ತಲೆ ಸೀಳುವಂತೆ, ಮಿದುಳೇ ಆಚೆ ಬೀಳುವಂತೆ ಕತ್ತರಿಸಿದ್ದಾರೆ. ಕೈ, ಕಾಲು, ಎದೆ, ಬೆನ್ನು, ಭುಜ ಎಲ್ಲೆಂದರಲ್ಲಿ ಲಾಂಗ್ ಏಟು ತಿಂದ ಲಿಂಗನನ್ನು ಜನ ದೇವೇಗೌಡ ಆಸ್ಪತ್ರೆಗೆ ತರುವಾಗಲೇ ಪ್ರಾಣ ಹೋಗಿತ್ತು.

ಪಾಖಂಡಿ ಸೈಕಲ್ ರವಿಯೇ ಮಂಕಿ ಕ್ಯಾಪ್ ಧರಿಸಿ ಕತ್ತರಿಸುತ್ತಿದ್ದದ್ದನ್ನು ಲಿಂಗನ ಪತ್ನಿಯೇ ಕಂಡಿದ್ದಾಳಂತೆ!


ಲಿಂಗನೇನೋ ಮುಗಿದು ಹೋದ. ಸೈಕಲ್ ರವಿಯ ಹಾವಳಿಗೆ ಅಂತ್ಯವಿಲ್ಲವೆ?

• ರಾ.ಸೋ.


ಕೇಬಲ್ ಸುನೀಲನ ಹತ್ಯೆ ಕೊಂದವನನ್ನು ಪಾಪವು ನುಂಗಿ ಹಾಕಿತು

● ಸುನೀಲನಿಗೆ ವಯಸ್ಸಿನ್ನೂ ಇಪ್ಪತ್ತಾರು ಮಾತ್ರ. ದೊಡ್ಡ ವಯಸ್ಸೇನಲ್ಲ. ಮದುವೆಯಾಗಿದ್ದ ಮಂಜುಳಾ ಈಗಷ್ಟೇ ಗರ್ಭಿಣಿ. ತಂದೆ ಆಂಜನಪ್ಪ ತೀರಿಕೊಂಡು ಯಾವುದೋ ಕಾಲವಾಗಿದೆ. ಇಬ್ಬರು ಅಕ್ಕಂದಿರನ್ನು ಬಿಟ್ಟರೆ ತಾಯಿ ಮಂಜುಳಮ್ಮನಿಗೆ ಗತಿ ಅಂತ ಇದ್ದದ್ದು ಮಗ ಸುನೀಲ ಮಾತ್ರ. ವೃತ್ತಿಯಲ್ಲಿ ಪೇಂಟರ್ ಆಗಿದ್ದ ಸುನೀಲ ಒಂದಲ್ಲ ಎರಡು ಕೊಲೆ ಮಾಡಿಯೂ ಗಳಿಸಿದ್ದು ಏನೇನೂ ಇಲ್ಲ. ರೌಡಿಯಾಗುವ ಹುಚ್ಚು ಆತನ ಪತ್ನಿ ಮತ್ತು ತಾಯಿಯನ್ನು ಬೀದಿಪಾಲು ಮಾಡಿದ್ದು ಬಿಟ್ಟರೆ ಸುನೀಲ ಗಳಿಸಿದ್ದು ಸಾವನ್ನು ಮಾತ್ರ!

●


ಶವವಾದ ಸುನೀಲ


ಕೇಬಲ್ ಸುನೀಲ


ಕೇಬಲ್ ಚಂ

ನಿರರ್ಥಕ ಜಿದ್ದಾಜಿದ್ದಿಯೊಂದರ ಕ್ಷುಲ್ಲಕ ಪ್ರತಿಕ್ರಿಯೆಯೋ ಎಂಬಂತೆ ಬ್ಯಾಟರಾಯನಪುರದ ರೌಡಿ ಕೇಬಲ್ ಸುನೀಲನ ಕೊಲೆಯಾಗಿದೆ.

ಕೊಂದವರು ಅದೇ ಬ್ಯಾಟರಾಯನಪುರದ ಲಿಂಗ ಮತ್ತಾತನ ಹುಡುಗರು. ಅದು ಏರಿಯಾದ 'ಹವಾ' ಮೆಂಟೇನ್‌ಗಾಗಿ ನಡೆದ ಹತ್ಯೆಯಾ? ಅಥವಾ ಕೊಂದ ಪಾಪವೇ ಸುನೀಲನನ್ನು ನುಂಗಿ ಹಾಕಿತಾ? ಕೊಂದವರಿಗೂ ಕೇಬಲ್ ಚಂದ್ರನ ಕಡೆಯವರಿಗೂ ಸಂಬಂಧವಿತ್ತಾ? ರೌಡಿ ಎನ್ನಿಸಿಕೊಳ್ಳುವ ಹುಚ್ಚು ಹಂಬಲ ಅಂತಿಮವಾಗಿ ಸುನೀಲನನ್ನು ಬಲಿ ಪಡೆಯಿತಾ? ಇತ್ಯಾದಿ ಪ್ರಶ್ನೆಗಳಿಗೆಲ್ಲ ಪೊಲೀಸರು ತಲೆಕೆಡಿಸಿಕೊಂಡಂತಿಲ್ಲ.

ಅಸಲಿಗೆ ಸುನೀಲ ಯಾಕೆ ಕೊಲೆಯಾದ ಎಂಬುದೇ ಯಾರಿಗೂ ಅರ್ಥವಾಗುತ್ತಿಲ್ಲ. ಕೊಲೆ ನಡೆದ ರೀತಿ, ಕೊಂದವರ ಹೇಳಿಕೆ ಮತ್ತು ಪೊಲೀಸರ ತರ್ಕವನ್ನೇ ಲೆಕ್ಕ ಹಾಕುವುದಾದರೆ ಸುನೀಲ ಬೇಕಾರ್ ಗ್ಯಾಂಗ್‌ವಾರ್ ಒಂದರ ಮೂರನೇ ಬಲಿ!

ಸುನೀಲ ಬ್ಯಾಟರಾಯನಪುರ ಪೊಲೀಸ್ ಠಾಣೆಯ ರೌಡಿ ಶೀಟರ್. 2005 ರಲ್ಲಿ ಚಂದ್ರಾಲೇಔಟಿನಲ್ಲಿ ಮಹೇಶ ಎಂಬ ಪೋಕರಿಯೊಬ್ಬನನ್ನು ಕತ್ತರಿಸಿ ಕೊಂದಿದ್ದ. ನಂತರ ಬ್ಯಾಟರಾಯನಪುರ ವ್ಯಾಪ್ತಿಯಲ್ಲಿ ಮತ್ತೊಂದು ಮರ್ಡರ್ ಅಟೆಂಪ್ಟ್ ಮಾಡಿ ಜೈಲು ಕಂಡ. ಇದಾಗಿ 6 ತಿಂಗಳಿಗೇ ಇದೇ ಬ್ಯಾಟರಾಯನಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಇನ್ನಾರನ್ನೋ ಹಿಡಿದು ಕತ್ತರಿಸಿದ್ದ. ಆಗ ಬ್ಯಾಟರಾಯನಪುರಕ್ಕೆ ಇನ್ಸ್‌ಪೆಕ್ಟರ್ ಆಗಿದ್ದ ಹನುಮಂತಪ್ಪ ಈತನ ಹಾವಳಿ ಕಂಡೇ ರೌಡಿ ಶೀಟು ತೆರೆದಿದ್ದರು. ಇದೆಲ್ಲದರ ಹೊರತಾಗಿ ಸುನೀಲನ ಹೆಸರು ಮೊದಲ ಬಾರಿಗೆ ದೊಡ್ಡಮಟ್ಟದಲ್ಲಿ ಚಾಲ್ತಿಗೆ ಬಂದದ್ದು 2008ರಲ್ಲಿ. ಅದು ಕೇಬಲ್ ಚಂದ್ರನ ಹತ್ಯೆ.

ಬಾಪೂಜಿನಗರದ ಕಾಂಗ್ರೆಸ್ ನಾಯಕ ಮತ್ತು ಶಾಸಕ ಲೇಔಟ್ ಕೃಷ್ಣಪ್ಪನವರ ನಂಬಿಕಸ್ತ ಬಂಟ ಕೇಬಲ್ ಚಂದ್ರನನ್ನು ಇದೇ ಸುನೀಲನ ಗ್ಯಾಂಗ್ ಆತನ ಮನೆಯೆದುರೇ ಕೊಂದುಹಾಕಿದ್ದು 2008ರ ಜೂನ್ 27ರ ರಾತ್ರಿ. ಚಂದ್ರನ ಅಣ್ಣ ವೆಂಕಟೇಶ್‌ನ ಬರ್ತ್‌ಡೇ ಪಾರ್ಟಿ ನಡೆಯುತ್ತಿದ್ದ ರಾತ್ರಿಯೇ ಚಂದ್ರನನ್ನು ಮನೆಯಿಂದ ಹೊರಕ್ಕೆ ಕರೆದು ಕತ್ತರಿಸಿದ್ದರು. ಆವತ್ತು ಚಂದ್ರನ ಬಲಗೈ ಬಂಟನಂತಿದ್ದ ಪ್ರವೀಣ್ ಉರ್ಫ್ ದೋಣಿಯೇ ಹಂತಕರನ್ನು ಕರೆಸಿಕೊಂಡು ಚಂದ್ರನನ್ನು ಹಾಕಿಕೊಟ್ಟಿದ್ದ. ಆವತ್ತು ಚಂದ್ರನ ಕೊಲೆಯಲ್ಲಿ ಸುನೀಲನ ಜೊತೆಗಿದ್ದದ್ದು ಸಂತೋಷ ಅಲಿಯಾಸ್ ಕಲ್ಲು ಮತ್ತು ಅಶೋಕ ಎಂಬ ಲೋಕಲ್ ಪೋಕರಿಗಳು.


ಲೋಕಲ್ಲಾಗಿ ಬಿಜೆಪಿಯ ವಿರುದ್ಧ ದಿನಂಪ್ರತಿ ಘರ್ಷಣೆಗಿಳಿದಿದ್ದ ಕೇಬಲ್ ಚಂದ್ರನ ಹತ್ಯೆಯಲ್ಲಿ ಆಗ ಬಾಪೂಜಿನಗರಕ್ಕೆ ಕೌನ್ಸಿಲರ್ ಆಗಿದ್ದ ಸೋಮಣ್ಣನ ಬಂಟ ವೆಂಕಟಸ್ವಾಮಿಯ ಹೆಸರು ಕೇಳಿಬಂತಾದರೂ ಬ್ಯಾಟರಾಯನಪುರ ಪೊಲೀಸರು ಹೆಚ್ಚಿಗೆ ಕೆದಕಲು ಹೋಗಲಿಲ್ಲ. ಸರಿಸುಮಾರು ಒಂದು ವರ್ಷ ಸುನೀಲ ಜೈಲಲ್ಲೇ ಇದ್ದ. ಕೊಲೆಯಲ್ಲಿ ಆತನ ಜೊತೆಗಿದ್ದ ಕಲ್ಲು, ಅಶೋಕ, ಅನಿಲ ಇತ್ಯಾದಿಗಳೆಲ್ಲ ಪರಪ್ಪನ ಅಗ್ರಹಾರ ಜೈಲು ಕಂಡು ಸುನೀಲನ ಜೊತೆಗೇ ಹೊರಬಿದ್ದಿದ್ದರು. ಇಷ್ಟೇ ಆಗಿದ್ದರೆ ಸುನೀಲ ಬದುಕಿರುತ್ತಿದ್ದನೋ ಏನೋ. ಜೈಲಿಂದ ಬಂದವನೇ ತನ್ನ ಮನೆಯನ್ನು ನಾಗರಬಾವಿ ಪಕ್ಕದ ಆದರ್ಶ ಲೇಔಟ್‌ಗೆ ಸ್ಥಳಾಂತರಿಸಿದನಾದರೂ ಬ್ಯಾಟರಾಯನಪುರದಲ್ಲಿ ಹಾವಳಿಯಿಡುವುದನ್ನು ಬಿಡಲಿಲ್ಲ. ಈ ಹೊತ್ತಿಗಾಗಲೇ ಬಾಪೂಜಿನಗರದ ಹುಡುಗಿ ಮಂಜುಳಾ ಎಂಬಾಕೆಯನ್ನು ಸುನೀಲ ಪ್ರೀತಿಸಿ ಮದುವೆಯಾಗಿದ್ದ. ಚಂದ್ರನ ಕೊಲೆ ಕೇಸಿನ ಕುಖ್ಯಾತಿಯನ್ನೇ ಲಾಭಕ್ಕೆ ಬಳಸಿಕೊಂಡು ಮೀಟರ್ ಬಡ್ಡಿ ದಂಧೆಗೆ ಕೈಯಿಟ್ಟಿದ್ದ. ಬಡ್ಡಿಕಟ್ಟದವರನ್ನು ಪೀಡಿಸಲೆಂದೇ ಪ್ರತ್ಯೇಕ ಗ್ಯಾಂಗ್ ಕಟ್ಟಿಕೊಂಡ.

ಹೀಗೆ ತಾನು ಬ್ಯಾಟರಾಯನಪುರದ ರೌಡಿ ಎನಿಸಿಕೊಳ್ಳುವ ಹುಚ್ಚಿಗೆ ಬಿದ್ದ ಸುನೀಲನಿಗೆ ಟಕ್ಕರ್ ಬಂದಿದ್ದು ಅದೇ ಏರಿಯಾದ ಲಿಂಗ ಅಲಿಯಾಸ್ ಲಿಂಗರಾಜ ಎಂಬಾತನಿಂದ. ವೃತ್ತಿಯಲ್ಲಿ ಆತ ಕಾರ್ ಡ್ರೈವ… ಸುನೀಲನಿಂದ ಬಡ್ಡಿಗೆ ಸಾಲ ಪಡೆದಿದ್ದ ಮುನಿ… ಎಂಬಾತನನ್ನು ಲಿಂಗ ಬೆಂಬಲಿಸುತ್ತಿದ್ದ. ಅದೇ ಕಾರಣ… ಒಂದೆರಡು ಬಾರಿ ಲಿಂಗನನ್ನು ಅಡ್ಡಹಾಕಿ ಸುನೀಲ ಆವಾ… ಹಾಕಿದ್ದ. ಲಿಂಗ ಅದ್ಯಾವುದಕ್ಕೂ ಜಗ್ಗದೇ ಹೋದ… ಕೆರಳಿದ ಸುನೀಲ ಇಲ್ಲಿಗೆ ತಿಂಗಳ ಹಿಂದೆ ಲಿಂಗನ… ಮುಗಿಸಲೆಂದು ಸರಿಯಾದ ಸ್ಕೆಚ್ಚನ್ನೇ ಹಾಕಿದ್ದ. ಆವ… ಸುನೀಲನ ಗ್ಯಾಂಗ್ ಇನ್ನೇನು ಲಿಂಗನನ್ನು ಕತ್ತರಿಸಿಹಾಕು… ಎಂಬಂತೆಯೇ ಅಟ್ಯಾಕ್ ನಡೆದಿತ್ತಾದರೂ ಲಿಂಗನ ಆಯ… ಗಟ್ಟಿಯಿತ್ತೇನೋ, ಗಾಳಿಆಂಜನೇಯಸ್ವಾಮಿ ದೇವಸ್ಥಾ… ಬಳಿ ಅಡ್ಡಬಂದ 'ಬಸ್' ಹತ್ತಿದ್ದೇ ಲಿಂಗ ಬಚಾವಾಗಿಬ… ಆವತ್ತೇ ಲಿಂಗ ಸುನೀಲನನ್ನು ಮುಗಿಸಲು ನಿರ್ಧರಿಸಿರಬೇ… ಒಂದೆಡೆ ಸುನೀಲನಿಂದ ಬಡ್ಡಿಗೆ ಪಡೆದಿದ್ದವರ ಬೆಂ… ಮತ್ತೊಂದೆಡೆ ಸುನೀಲನಿಂದ ಕೊಲೆಯಾಗಿದ್ದ ಕೇಬ… ಚಂದ್ರನ ಹುಡುಗರ ಕುಮ್ಮಕ್ಕು. ಎರಡನ್ನೂ ಲಿ… ಸರಿಮಾಡಿಕೊಂಡಿದ್ದ. ಕೇಬಲ್ ಚಂದ್ರನ ಕಡೆಯ ಪುಸಿ… ಮತ್ತು ಪ್ರಮೋದ ಎಂಬಿಬ್ಬರು ಪುಡಿರೌಡಿಗಳಿ… ಲಿಂಗನಿಗೂ ಹಳೇ ಲಿಂಕಿತ್ತು. ಆದಕ್ಕೆ ಸರಿಯಾಗಿ ಕೇಬ… ಚಂದ್ರನ ಅಣ್ಣ ವೆಂಕಟೇಶ ಸಾಥ್ ಕೊಟ್ಟಿದ್ದಾನೆ. ತಮ್ಮನನ್ನು ಕೊಂದವರನ್ನು ಮುಗಿಸದೇ ಬಿಡೋಲ್ಲ ಎಂ… ಆವತ್ತೇ ವೆಂಕಟೇಶ ಶಪಥಗೈದಿದ್ದ.

ಇತ್ತ ಕೇಬಲ್ ಚಂದ್ರನ ಕೊಲೆ ಕೇಸಿನ ವಿಚಾರ ಕ… ಬರದಿಂದಲೇ ಸಾಗಿತ್ತು. ಏಪ್ರಿಲ್ 23ರಂದು ಕಾವೇರಿಭವ… ಹಿಂಭಾಗ ಸೆಷನ್ಸ್ ನ್ಯಾಯಾಲಯದ ಕೋರ್ಟ್ ಹಾ… ನಂಬರ್ ಒಂದರಲ್ಲಿ ಚಂದ್ರನ ಕೊಲೆಕೇಸಿನ ಸಾಕ್ಷ ವಿಚಾ… ಶುರುವಾಗಿತ್ತು. ಆವತ್ತೇ ತನ್ನನ್ನು ಲಿಂಗನ ಗ್ಯಾಂಗ್ ಮು… ತ್ತದೆಯೆಂಬ ಮುನ್ಸೂಚನೆಯಾದರೂ ಸುನೀಲನಿಗೆಲ್ಲಿ…

ಕಾಶ್ಮೀರದಲ್ಲಿ ನ್ಯಾಯದ ವಿಡಂಬನೆ

ದೆಹಲಿಯ ಲಜಪತ್ ನಗರ್ ಬಾಂಬ್ ಬ್ಲಾಸ್ಟ್ ಕೇಸಿನಲ್ಲಿ ಕಾಶ್ಮೀರಿ ಮೂಲದ ಮೂವರು ವ್ಯಕ್ತಿಗಳಿಗೆ ಮರಣದಂಡನೆ ವಿಧಿಸಿರುವ ದೆಹಲಿ ನಗರ ನ್ಯಾಯಾಲಯದ ತೀರ್ಪಿನ ವಿರುದ್ಧ ಕಾಶ್ಮೀರದಲ್ಲಿ ಪ್ರತಿಭಟನೆ ಭುಗಿಲೆದ್ದಿದೆ. 1996ರ ಮೇ 21ರಂದು ದೆಹಲಿಯ ಲಜಪತ್ ನಗರದಲ್ಲಿ ಸ್ಫೋಟಗೊಂಡ ಬಾಂಬಿನಿಂದ ಹದಿಮೂರು ಜನ ಸಾವಿಗೀಡಾಗಿದ್ದರು. ಮರಣದಂಡನೆಗೆ ಗುರಿಯಾಗಿರುವ ಮಿರ್ಜಾ ನಾಸರ್ ಹುಸೇನ್‌ನ ತಾಯಿ ಶ್ರೀನಗರದಲ್ಲಿ ಪ್ರತಿಭಟಿಸುತ್ತಾ "ನನ್ನ ಮಗ ಆಗ ಕೇವಲ 14 ವರ್ಷದವನಾಗಿದ್ದು ಈ ದುಷ್ಕೃತ್ಯದಲ್ಲಿ ಭಾಗಿಯಾಗಿರಲು ಸಾಧ್ಯವೇ ಇಲ್ಲ" ಎಂದು ಅವಲತ್ತುಕೊಳ್ಳುತ್ತಿದ್ದಾರೆ. ಇದು ಅನ್ಯಾಯಯುತವಾದ ತೀರ್ಪು ಎಂದು ಕೇವಲ ಶಿಕ್ಷೆಗೆ ಗುರಿಯಾದವರ ಸಂಬಂಧಿಕರು ಮಾತ್ರವಲ್ಲ; ಇಡೀ ಕಾಶ್ಮೀರದ ಜನತೆ ಭಾವಿಸಿದ್ದಾರೆ.



ವಾಸ್ತವದಲ್ಲಿ ಕಾಶ್ಮೀರಿಗಳಿಗೆ ಈ ರೀತಿಯ ಭಾವನೆ ಬರುವುದು ಸಹಜವೇ ಆಗಿದೆ. 'ಭಾರತದಲ್ಲಿ' ಅಪರಾಧವೆಸಗಿ ಸಿಕ್ಕಿಬೀಳುವ ಕಾಶ್ಮೀರಿಗಳಿಗೆ ಇಲ್ಲಿನ 'ದಮನಕಾರಿ ಆಡಳಿತಗಾರರು' ಕಾನೂನಿನ ಪ್ರಕಾರ ಅತ್ಯಂತ ಗರಿಷ್ಠ ಶಿಕ್ಷೆ ಕೊಡಿಸುವಲ್ಲಿ ಯಶಸ್ವಿಯಾಗುತ್ತಾರೆಂದೂ, ಅದೇ ಸಮಯದಲ್ಲಿ ಕಾಶ್ಮೀರದಲ್ಲಿ ಅಪರಾಧವೆಸಗಿ ಸಿಕ್ಕಿಬೀಳುವ 'ಭಾರತೀಯರನ್ನು' ಕಾನೂನಿನ ಮುಷ್ಠಿಯಿಂದ ಬಿಡಿಸಿಕೊಳ್ಳುವುದಕ್ಕೆ ಗರಿಷ್ಠ ಪ್ರಮಾಣದಲ್ಲಿ ಪ್ರಯತ್ನಿಸುತ್ತಾರೆಂದೂ ಕಾಶ್ಮೀರಿಗಳು ಬಲವಾಗಿ ನಂಬಿದ್ದಾರೆ. ಅವರ ಈ ನಂಬುಗೆ ಗಟ್ಟಿ ಮಾಡುವಂತಹ ಅನೇಕ ಘಟನೆಗಳು ಚರಿತ್ರೆಯಲ್ಲಿ ನಡೆದುಹೋಗಿರುವುದೂ ಸತ್ಯವೆ.

ತೀರಾ ಇತ್ತೀಚಿನ ಪ್ರಕರಣಗಳನ್ನೇ ತೆಗೆದುಕೊಳ್ಳಿ. ಕಾಶ್ಮೀರದಲ್ಲಿ ಇತ್ತೀಚೆಗೆ ನಡೆದ ಶೋಪಿಯನ್ ಡಬಲ್ ರೇಪ್ ಮತ್ತು ಮರ್ಡರ್ ಪ್ರಕರಣದಲ್ಲಿ ಕೇಂದ್ರ ಸರ್ಕಾರ ವರ್ತಿಸಿದ ರೀತಿ ಎಂಥವರಿಗೂ ಕೋಪ ತರಿಸುತ್ತದೆ. ನಿಮಗೆ ನೆನಪಿರಬಹುದು. ಕಳೆದ ವರ್ಷ ಮೇ 30ರಂದು ಕಾಶ್ಮೀರದ ಶೋಪಿಯನ್ ಪ್ರದೇಶದಲ್ಲಿ ಇಪ್ಪತ್ತೆರಡು ವರ್ಷದ ನಿಲೋಫರ್ ಜಾನ್ ಮತ್ತು ಆಕೆಯ ಹದಿನೇಳು ವರ್ಷದ ನಾದಿನಿ ಆಶಿಯ ಜಾನ್ ಅವರ ಮೃತದೇಹಗಳು ಒಂದು ತೊರೆಯ ಪಕ್ಕದಲ್ಲಿ ಪತ್ತೆಯಾಗಿದ್ದವು. ವಾಸ್ತವದಲ್ಲಿ ಅದರ ಹಿಂದಿನ ಸಂಜೆ ಅವರಿಬ್ಬರೂ ತಮ್ಮ ತೋಟದಲ್ಲಿ ಕೆಲಸ ಮುಗಿಸಿಕೊಂಡು ಮನೆಗೆ ಹಿಂತಿರುಗುತ್ತಿದ್ದಾಗ ಭಾರತೀಯ ರಕ್ಷಣಾ ಪಡೆಗಳು ಅವರಿಬ್ಬರನ್ನು ಅಪಹರಿಸಿ, ಅವರ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿ, ಅವರನ್ನು ಕೊಂದು, ತಮ್ಮ ಅಪರಾಧ ಬಯಲಿಗೆ ಬಾರದಂತೆ ತಡೆಯುವುದಕ್ಕಾಗಿ ಅವರನ್ನು ಕೊಂದು ಬೊಂಗಾಮ್ ಎಂಬಲ್ಲಿದ್ದ ಒಂದು ತೊರೆಯ ಪಕ್ಕ ಮೃತ ದೇಹಗಳನ್ನು ಎಸೆದುಹೋಗಿದ್ದರು. ಸೈನಿಕರು, ಮಿಲಿಟರಿ ಅಧಿಕಾರಿಗಳು ಸ್ಥಳೀಯರ ಮೇಲೆ ಈಗಾಗಲೇ ಇಂಥ ಅನೇಕ ಅತ್ಯಾಚಾರ ಮತ್ತು ಕೊಲೆಗಳನ್ನು ಮಾಡಿರುವುದರಿಂದ ಈ ಕೃತ್ಯವನ್ನೂ ಅವರೇ ಮಾಡಿದ್ದಾರೆಂದು ಊಹಿಸುವುದಕ್ಕೆ ಕಾಶ್ಮೀರಿಗಳಿಗೆ ಕಷ್ಟವಾಗಲಿಲ್ಲ. ಹೀಗಾಗಿ, ಬೆಳಗ್ಗೆ ಮೃತದೇಹಗಳು ಸಿಗುತ್ತಿದ್ದಂತೆಯೇ ಭಾರತೀಯ ರಕ್ಷಣಾ ಪಡೆಗಳ ವಿರುದ್ಧ ಇಡೀ ಶೋಪಿಯನ್ ಪ್ರದೇಶ ಮಾತ್ರವಲ್ಲ ಕಾಶ್ಮೀರದಾದ್ಯಂತ ಭಾರಿ ಪ್ರತಿಭಟನೆಗಳು ಭುಗಿಲೆದ್ದವು. ಶೋಪಿಯನ್ ಪಟ್ಟಣವಂತೂ 47 ದಿನಗಳ ಕಾಲ ಅಕ್ಷರಶಃ ಬಂದ್ ಆಗಿತ್ತೆಂದರೆ ಭಾರತೀಯ ಪಡೆಗಳ ವಿರುದ್ಧ ಕಾಶ್ಮೀರಿಗಳಲ್ಲಿ ಅದೆಂಥ ಸಿಟ್ಟು ಮಡುಗಟ್ಟಿದೆಯೆಂಬುದು ಅರ್ಥವಾಗುತ್ತದೆ.

ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಮೂವರು ನುರಿತ ವೈದ್ಯರು ನಡೆಸಿದ ಮೊದಲ ಮರಣೋತ್ತರ ಪರೀಕ್ಷೆಯಲ್ಲಿಯೇ ಅತ್ಯಾಚಾರವೆಸಗಿರುವುದು ದೃಢಪಟ್ಟಿತು. ಆದರೆ ಪೊಲೀಸರು ವೈದ್ಯರ ಮೇಲೆ ಒತ್ತಡ ತಂದು ತಮಗೆ ಬೇಕಾದಂತೆ ವರದಿ ತಯಾರಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಇದು ಜನರಿಗೆ ಗೊತ್ತಾಗುತ್ತಿದ್ದಂತೆಯೇ ಕಾಶ್ಮೀರ ಕಣಿವೆಯಲ್ಲಿ ಪ್ರತಿಭಟನೆಗಳು ಉಗ್ರರೂಪ ಪಡೆದವು. ಮೃತದೇಹಗಳನ್ನು ಇಟ್ಟಿದ್ದ ಜಿಲ್ಲಾ ಆಸ್ಪತ್ರೆಯ ಕಿಟಕಿ, ಬಾಗಿಲುಗ… ನುಚ್ಚುನೂರಾದವು. ಎರಡನೇ ಬಾರಿಗೆ ಮತ್ತೊ… ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಆದರೆ ಅದರ… ಅತ್ಯಾಚಾರವಾಗಿರುವುದನ್ನು ನಿರಾಕರಿಸಲಾಗಿತ್ತು. … ಮರಣೋತ್ತರ ಪರೀಕ್ಷೆಯಲ್ಲಿ ಪಾಲ್ಗೊಂಡ ಮಹಿ… ವೈದ್ಯೆಯೊಬ್ಬಳಿಗೆ ಪವಿತ್ರ ಖುರಾನ್ ಮುಟ್ಟಿ ಪ್ರಮ… ಮಾಡಿ ಹೇಳು ಎಂದು ಸ್ಥಳೀಯರು ಆಗ್ರಹಿಸಿ… ಆಕೆ ಖುರಾನ್ ಮುಟ್ಟಿ ಆ ಮಹಿಳೆ… ಮೇಲೆ ಅತ್ಯಾಚಾರ ಮಾಡಲಾಗಿತ್ತು ಎ… ಒಪ್ಪಿಕೊಂಡಳು!

ಯಾವಾಗ ಕಣಿವೆಯಲ್ಲಿ ಪ್ರತಿಭಟನೆಗಳು ಹಿಂಸಾತ್ಮಕ ಸ್ವರೂ… ಪಡೆದು ಸರ್ಕಾರದ ಬುಡವನ್ನೇ … ಅಲ್ಲಾಡಿಸತೊಡಗಿದವೋ ಆಗ ಮಣಿದ ಜಮ್ಮು-ಕಾಶ್ಮೀರದ ಸರ್ಕಾರ ಈ ಕುರಿತು ತನಿಖೆ ನಡ… ವರದಿ ಸಲ್ಲಿಸುವಂತೆ ಏಕಸದಸ್ಯ ಆಯೋಗವೊಂದನ್ನು ರಚಿಸಿತು. ಪ್ರಕರಣವನ್ನು ಕೂಲಂಕಶವಾಗಿ ಅಧ್ಯಯನ ನಡೆಸಿದ ಆಯೋಗವು ರೇ… ಆಗಿದ್ದು ನಿಜ ಎಂಬ ಅಭಿಪ್ರಾಯಕ್ಕೆ ಬಂತ… ಅಲ್ಲದೇ, ರೇಪ್ ಮತ್ತು ಹತ್ಯೆಯನ್ನು ಮುಚ್ಚಿಹಾಕುವುದಕ್ಕಾಗಿ ನಾಲ್ವರು ಪೊಲೀಸ್ ಅಧಿಕಾರಿಗಳು ಪ್ರಯತ್ನಿಸಿದ್ದಾರೆಂದು ಅವರ ಹೆಸರನ… ಉಲ್ಲೇಖಿಸಿತು. ತಕ್ಷಣವೇ ರಾಜ್ಯ ಸರ್ಕಾರ ವಿಧಿಯಿ… ಆ ನಾಲ್ಕು ಅಧಿಕಾರಿಗಳನ್ನು ಅಮಾನತ್ತುಗೊಳಿಸಿ ಬಂಧಿಸಿತು. ಅಂತೆಯೇ ಪ್ರಕರಣವನ್ನು ಸಿಬಿಐ ತನಿ… ವಹಿಸಲಾಯಿತು. ಆದರೆ ಸಿಬಿಐ ಕೊಟ್ಟ ವರದಿ ಹೇಗಿತ್ತು? ತನ್ನ 66 ಪುಟಗಳ ವರದಿಯಲ್ಲಿ ಆ ಮಹಿಳೆಯರ ಮೇಲೆ ಯಾವುದೇ ಅತ್ಯಾಚಾರ ಆಗ… ಅದು ಕೊಲೆಯೂ ಅಲ್ಲ, ಅವರು ನೀರಿನಲ್ಲಿ ಮು… ಸತ್ತಿದ್ದಾರೆಂದು ಹೇಳಿತು! ಅಲ್ಲದೇ ಮೊನ್ನೆ ಮೊನ್ನೆ

ತನ್ನ ಜೊತೆ ಅನಿಲ, ಅರುಣ, ಕಳ್ಳ ದೀಪು ಮತ್ತು ಅವಿನಾಶ್ ಎಂಬ ಹುಡುಗರನ್ನು ಗುಡ್ಡೆಹಾಕಿದ್ದೇ ಸುನೀಲ ಸೆಷನ್ಸ್ ಕೋರ್ಟ್‌ಗೆ ಬಂದಿದ್ದಾನೆ; ಅಲ್ಲಿ ಎವಿಡೆನ್ಸ್ ಶುರುವಾಗಿದೆ. ಕಟಕಟೆಯಲ್ಲಿ ನಿಂತು ಸಾಕ್ಷಿಗಳ ವಿರುದ್ಧ ಹೇಳಿಕೆಕೊಟ್ಟ ಸುನೀಲ ಸಂಜೆ ಐದರ ಹೊತ್ತಿಗೆ ಕೋರ್ಟ್ ಆವರಣದಿಂದ ಹೊರಬಿದ್ದವನು ಸೀದಾ ಬಿನ್ನಿ ಮಿಲ್ ಎದುರಿನ ರೈಲ್ವೇಗೇಟಿಗೆ ಬಂದಿದ್ದಾನೆ. ಬಿನ್ನಿ ಮಿಲ್ ಹಿಂಭಾಗದ ಬಾಳೇಮಂಡಿ ಎದುರಿಗೆ ಇರುವ ರೈಲ್ವೆಗೇಟ್ ಸಮೀಪದಲ್ಲೇ ಟೀ ಅಂಗಡಿಯೊಂದಿದೆ. ಕಳ್ಳ ದೀಪು ಮತ್ತು ಅವಿನಾಶ್‌ರನ್ನು ಮುಂದಕ್ಕೆ ಕಳಿಸಿಕೊಟ್ಟ ಸುನೀಲ ಟೀ ಅಂಗಡಿಯಲ್ಲಿ ಅನಿಲನ ಜೊತೆ ಸೇರಿ ಕಾಫಿ ಕುಡಿದು ಇನ್ನೇನು ಸಿಗರೇಟ್‌ಗೆ ಕಡ್ಡಿ ಗೀರಬೇಕು. ಅಷ್ಟರಲ್ಲೇ ಸುಮೋ ಗಾಡಿಯೊಂದು ಟೀ ಅಂಗಡಿಯೆದುರು ಬಂದು ನಿಂತಿದೆ.

ಅದು ದುಷ್ಮನ್ ಲಿಂಗನ ಗಾಡಿಯಾಗಿತ್ತು. ಕೇಬಲ್




ಸುನೀಲನ ಹಂತಕ ಪಡೆ

ಚಂದ್ರನ ಕೊಲೆ ಕೇಸಿಗೆ ಸುನೀಲ ಬಂದೇಬರುತ್ತಾನೆಂಬ ಮಾಹಿತಿಯಿದ್ದೇ ಲಿಂಗ ಸ್ಕೆಚ್‌ಹಾಕಿದ್ದ. ಲಿಂಗನ ಜೊತೆ ಬ್ಯಾಟರಾಯನಪುರದ ನವೀನ, ಸುನೀಲ, ಬಾಪೂಜಿನಗರದ ಯೋಗ್ಯನಾಥನ್, ನಂದೀಶ ಮತ್ತು ನಾಯಂಡಹಳ್ಳಿಯ ಅರುಣ ಮುಂತಾದ ಹಂತಕರ ಪಡೆಯೇ ಅಣಿಯಾಗಿತ್ತು. ಎಲ್ಲರ ಕೈಯಲ್ಲೂ ಲಾಂಗ್‌ಗಳಿದ್ದವು. ಒಬ್ಬೊಬ್ಬರಾಗಿ ಗಾಡಿಯಿಂದ ಧುಮುಕುತ್ತಿದ್ದದ್ದನ್ನು ನೋಡಿದ್ದೇ ಸುನೀಲ ಮತ್ತು ಅನಿಲ ಬೈಕ್ ಸ್ಟಾರ್ಟ್ ಮಾಡಿದ್ದೇ ಅಗ್ರಹಾರದ ಗಲ್ಲಿಯೊಂದಕ್ಕೆ ನುಗ್ಗಿದ್ದಾರೆ. ಇನ್ನೇನು ಕೆಂಪಾಪುರ ಅಗ್ರಹಾರದ ಒಂದನೇ ಮುಖ್ಯರಸ್ತೆಗೆ ಬೈಕ್ ತಿರುಗಬೇಕೆನ್ನುವಷ್ಟರಲ್ಲಿ ಹಿಂದಿನಿಂದ ಲಿಂಗನ ಸುಮೋ ಬೈಕಿಗೆ ಡಿಕ್ಕಿ ಹೊಡೆದಿದೆ. ಆ ಗುದ್ದಿದ ಏಟಿಗೆ ಬೈಕ್ ಮುಗ್ಗುರಿಸಿ ನೆಲಕಚ್ಚಿದೆ. ಜೊತೆಗಿದ್ದ ಅನಿಲ ಲಾಂಗ್ ಹಿಡಿದು ಬರುತ್ತಿದ್ದ ಹಂತಕರನ್ನು ನೋಡಿದ್ದೇ ದಿಕ್ಕಾಪಾಲಾಗಿ ಓಡಿದ್ದಾನೆ. ಆದರೆ ಸುನೀಲ ಅನಾಯಾಸವಾಗಿ ಕಟ್ಟಡವೊಂದಕ್ಕೆ ನುಗ್ಗಲು ಹೋಗಿ ಸಿಕ್ಕಿಬಿದ್ದಿದ್ದ. ಒಂದನೇ ಮುಖ್ಯರಸ್ತೆಯ ಒಂಬತ್ತನೇ ಕ್ರಾಸಿನ ಮಹಡಿಯ ಮನೆಯೊಂದಕ್ಕೆ ನುಗ್ಗಿದ ಸುನೀಲ ಇನ್ನೇನು ಆ ಮನೆಯನ್ನು ಹೊಕ್ಕಬೇಕೆನ್ನುವಷ್ಟರಲ್ಲಿ ಒಳಗಿದ್ದ ಹೆಂಗಸು ಬಾಗಿಲು ಮುಚ್ಚಿಕೊಂಡಿದ್ದಾಳೆ. ಅಷ್ಟೇ, ಮೇಲೆ ಹತ್ತಲೂ ಆಗದ, ಪಕ್ಕದ ಮಹಡಿಗೆ ನೆಗೆಯಲೂ ಬಾರದ, ಹಿಂದಕ್ಕೆ ಓಡಲಿಕ್ಕೂ ಅವಕಾಶವಿಲ್ಲದ ಮಹಡಿಯ ಗೂಡೊಂದರಲ್ಲಿ ಸುನೀಲ ಸಿಕ್ಕಿಬಿದ್ದಿದ್ದಾನೆ. ಅಟ್ಟಿಸಿಕೊಂಡು ಬಂದಿದ್ದ ಏಟಿಗೆ ತಲೆ ಸೀಳಾಗಿದೆ. ಒಬ್ಬರ ನಂತರ ಒಬ್ಬರಂತೆ ಲಿಂಗನ ಜೊತೆಗಿದ್ದವರೆಲ್ಲ ಏಟು ಹಾಕಿದ್ದಾರೆ. ನಿಂತ ನೆಲದಲ್ಲೇ ಹೆಣವಾಗಿದ್ದಾನೆ ಸುನೀಲ!

ಕೇಬಲ್ ಚಂದ್ರನನ್ನು ಕೊಂದು ಸೇಡು ಸುನೀಲನನ್ನು ನುಂಗಿ ಹಾಕಿತ್ತು. ಇದಾಗಿ ಎರಡೇ ದಿನಕ್ಕೆ ಕೆಂಪಾಪುರ ಅಗ್ರಹಾರದ ಇನ್ಸ್‌ಪೆಕ್ಟರ್ ಸ್ವಾಮಿಕುಮಾರ್ ಲಿಂಗನ ಗ್ಯಾಂಗನ್ನು ಬಂಧಿಸಿದ್ದಾರೆ. ಅದೂ ಕೂಡಾ ಬ್ಯಾಟರಾಯನಪುರದ ಪೊಲೀಸರೇ ಹಂತಕರನ್ನು ಹಿಡಿದಿಟ್ಟದ್ದೇವೆಂದು ಕೆಂಪಾಪುರ ಪೊಲೀಸರಿಗೆ ಒಪ್ಪಿಸಿದ್ದಂತೆ. ಹಂತಕರ ಗ್ಯಾಂಗ್ ಲೀಡರ್ ಲಿಂಗನಿಗೆ ಸುನೀಲನನ್ನು ಮುಗಿಸುವಂತೆ ಸುಪಾರಿ ಕೊಟ್ಟಿದ್ದ ಕೇಬಲ್ ಚಂದ್ರನ ಗೆಳೆಯರಾದ ಪುನೀತ್ ಮತ್ತು ಪ್ರಮೋದ್ ಇನ್ನೂ ಸಿಗಬೇಕಂತೆ. ಹಾಗೆಂದು ಕೆಂಪಾಪುರದ ಪೊಲೀಸರು ಹೇಳುತ್ತಿದ್ದಾರೆ. ಕೊಂದ ಪಾಪ ಮತ್ತು ರೌಡಿಯಾಗುವ ಹುಚ್ಚು ಒಟ್ಟೊಟ್ಟಿಗೆ ಸುನೀಲನನ್ನು ನುಂಗಿಹಾಕಿದೆ.

ಸುನೀಲನಿಗೆ ವಯಸ್ಸಿನ್ನೂ ಇಪ್ಪತ್ತಾರು ಮಾತ್ರ. ದೊಡ್ಡ ವಯಸ್ಸೇನಲ್ಲ, ಮದುವೆಯಾಗಿದ್ದ ಮಂಜುಳಾ ಈಗಷ್ಟೇ ಗರ್ಭಿಣಿ. ತಂದೆ ಆಂಜನಪ್ಪ ತೀರಿಕೊಂಡು ಯಾವುದೋ ಕಾಲವಾಗಿದೆ. ಇಬ್ಬರು ಅಕ್ಕಂದಿರನ್ನು ಬಿಟ್ಟರೆ ತಾಯಿ ಮಂಜುಳಮ್ಮನಿಗೆ ಗತಿ ಅಂತ ಇದ್ದದ್ದು ಮಗ ಸುನೀಲ ಮಾತ್ರ. ವೃತ್ತಿಯಲ್ಲಿ ಪೇಂಟರ್ ಆಗಿದ್ದ ಸುನೀಲ ಒಂದಲ್ಲ ಎರಡು ಕೊಲೆ ಮಾಡಿಯೂ ಗಳಿಸಿದ್ದು ಏನೇನೂ ಇಲ್ಲ. ರೌಡಿಯಾಗುವ ಹುಚ್ಚು ಆತನ ಪತ್ನಿ ಮತ್ತು ತಾಯಿಯನ್ನು ಬೀದಿಪಾಲು ಮಾಡಿದ್ದು ಬಿಟ್ಟರೆ ಸುನೀಲ ಗಳಿಸಿದ್ದು ಸಾವನ್ನು ಮಾತ್ರ!

• ರಾ. ಸೋಮನಾಥ್
ra.somanath2010@gmail.com



ಸುತ್ತ-ಮುತ್ತ

ಕುಮಾರ್ ಬುರಡಿಕಟ್ಟಿ

...ತೇ ಏಪ್ರಿಲ್ ತಿಂಗಳಲ್ಲಿ ಸಿಬಿಐ ಮತ್ತೆ ...ಮ್ಮು-ಕಾಶ್ಮೀರ ಹೈಕೋರ್ಟಿಗೆ ಮನವಿ ಸಲ್ಲಿಸಿ ಈ ...ರಣದಲ್ಲಿ ಆರೋಪಿಗಳಾಗಿರುವ ನಾಲ್ವರು ...ಲೀಸರ ವಿರುದ್ಧದ ಪ್ರಕರಣವನ್ನು ಕೈಬಿಡಬೇಕೆಂದು ...ತ್ತಾಯಿಸಿತು (ದಿ ಹಿಂದೂ, 23.04.2010)! ಇದು ...ಶ್ಮೀರದಲ್ಲಿ ಅಪರಾಧ ನಡೆಸುವ ...ಸಿರತೀಯರನ್ನು' ನಡೆಸಿಕೊಳ್ಳುವ ಪರಿ.


...ಸ್ವಲ್ಪ ಹಿಂದಕ್ಕೆ ಹೋಗಿ ನೋಡಿ. 1991ರ ...ಬ್ರವರಿ 23ರಂದು ಭಾರತೀಯ ಸೇನೆಯ ...ಪುತಾನಾ ರೈಫಲ್ಸ್ ತುಕಡಿಯ ಸೈನಿಕರು ಉತ್ತರ ...ಶ್ಮೀರದ ಕುಪ್ವಾರ ಜಿಲ್ಲೆಯ ಕುನಾನ್ ಪೊಷ್ಪೋರ ...ಎ ಹಳ್ಳಿಗೆ ನುಗ್ಗಿದರು. ಹಳ್ಳಿಯಲ್ಲಿದ್ದ ...ಷುವರನ್ನೆಲ್ಲಾ ಪಕ್ಕದ ಬಯಲಿಗೆ ಬಲವಂತವಾಗಿ ...ದೊಯ್ದರು. ನಂತರ ಮತ್ತೆ ಹಳ್ಳಿಗೆ ನುಗ್ಗಿ ...ಸುಮಾರು 100 ಮಹಿಳೆಯರನ್ನು ...ಸಾಮೂಹಿಕವಾಗಿ ರೇಪ್ ಮಾಡಿದರು. ಮಕ್ಕಳು ...ತ್ತು ವಯೋವೃದ್ಧರ ಕಣ್ಣೆದುರಿನಲ್ಲೇ ಒಬ್ಬೊಬ್ಬ ...ಹಿಳೆಯನ್ನು ಏಳೆಂಟು ಸೈನಿಕರು ರೇಪ್ ...ಮಾಡಿದರು. ವಾಸ್ತವದಲ್ಲಿ ಕಾಶ್ಮೀರದಲ್ಲಿ ಕದನ ...ಶುರುವಾದಾಗಿನಿಂದ ಇಲ್ಲಿಯ ತನಕ ಇಂಥ ಭೀಕರ ...ಸ್ ರೇಪನ್ನು ಕಾಶ್ಮೀರ ಕಂಡಿರಲಿಲ್ಲ. ಉನ್ನತ ...ಅಧಿಕಾರಿಗಳಿಗೆ, ಭಾರತ ಸರ್ಕಾರಕ್ಕೆ ದೂರು ...ಕೊಟ್ಟರೂ ಏನೂ ಆಗಲಿಲ್ಲ. ಹಳ್ಳಿಗರಿಂದ ಬಂದ ...ದೂರನ್ನಾಧರಿಸಿ ಕುಪ್ವಾರ ಜಿಲ್ಲೆಯ ಮ್ಯಾಜಿಸ್ಟ್ರೇಟ್ ಆ ...ಗೆ ಭೇಟಿ ಕೊಟ್ಟು ವರದಿ ಸಿದ್ಧಪಡಿಸಿದಿದರು. ಆದರಲ್ಲಿ "ಸೈನಿಕರು ಕಾಡು ಮೃಗಗಳಂತೆ ವರ್ತಿಸಿದ್ದಾರೆ" ಎಂದೇ ಸ್ಪಷ್ಟವಾಗಿ ಬರೆದರು. **A large number of armed personnel entered into the houses of villagers and at gunpoint they gang-raped 23 ladies, without any consideration of their age, married, unmarried, pregnancy etc?** ಎಂದು ವರದಿಯನ್ನು ಮುಕ್ತಾಯ ಮಾಡಿದರು. ತದನಂತರದ ಕೆಲವು ಸ್ವತಂತ್ರ ಸತ್ಯಶೋಧನಾ ತಂಡಗಳು ಘಟನೆಯ ತನಿಖೆ ನಡೆಸಿ ಸಾಮೂಹಿಕ ಅತ್ಯಾಚಾರ ನಡೆದದ್ದು ಸತ್ಯ ಎಂದು ಹೊರ ಜಗತ್ತಿಗೆ ತೋರಿಸಿಕೊಟ್ಟವು. ಆದರೆ ಪೊಲೀಸರು ತನಿಖೆಯನ್ನೂ ಮಾಡಲಿಲ್ಲ, ಕೇಸನ್ನೂ ದಾಖಲಿಸಲಿಲ್ಲ. ಇನ್ನು ವಿಚಾರಣೆ ಮತ್ತು ಶಿಕ್ಷೆಯ ಮಾತಂತೂ ದೂರವೇ ಉಳಿಯಿತು. ಜಮ್ಮು ಮತ್ತು ಕಾಶ್ಮೀರ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿ ಮುಫ್ತಿ ಬಹಾ-ಉದ್-ದೀನ್ ಫಾರೂಕ್ ಅವರ ಮಾತನ್ನೇ ಇಲ್ಲಿ ಪುನರ್‌ದಾಖಲಿಸುವುದಾದರೆ: "ನನ್ನ 43 ವರ್ಷಗಳ ನ್ಯಾಯಾಧೀಶ ವೃತ್ತಿಯಲ್ಲಿ ಇಂತಹದ್ದೊಂದು ಹೀನ ಅಪರಾಧದಲ್ಲಿ ತನಿಖೆ ನಡೆಯದೇ ಹೋಗಿದ್ದನ್ನು ನಾನು ಕಂಡೇ ಇಲ್ಲ".

ಎಲ್ಲಿಯತನಕ ಭಾರತ ಸರ್ಕಾರದ, ಭಾರತೀಯ ನ್ಯಾಯಾಂಗ ವ್ಯವಸ್ಥೆಯ ಈ ತಾರತಮ್ಯ ಧೋರಣೆ ಬದಲಾಗುವುದಿಲ್ಲವೋ ಅಲ್ಲಿಯತನಕ ನಮ್ಮ ದೇಶದ ಕಾನೂನಿಗೆ, ಸಂವಿಧಾನಕ್ಕೆ ಕಾಶ್ಮೀರಿಗಳು ತಲೆಬಾಗಬೇಕೆಂದು ನಿರೀಕ್ಷಿಸುವುದೂ ಕಷ್ಟ ಅಲ್ಲವೆ? ●

ಸಾದರು ಕೇಳದೆಯಿದ್ರೂ ಮೀಸಲು ಕೊಡೋದೇಕೆ?

ಅಪರಾಧಿಗಳನ್ನು ಹಿಡಿಯುವುದರಲ್ಲಿ ನಿಸ್ಸೀಮರಾದ ಯೋಗಪ್ಪ ಎಂಬ ಪೊಲೀಸ್ ಅಧಿಕಾರಿ ನಿತ್ಯಾನಂದನೆಂಬ ಚಪಲ ಚೆನ್ನಿಗರಾಯನನ್ನು ಹಿಡಿದು ತಂದಾಗಿನಿಂದಲೂ ಆತ ವಿಚಾರಣೆಗೆ ಸಹಕರಿಸುತ್ತಿಲ್ಲವಂತಲ್ಲಾ, ಈ ನಡುವೆ ಎದೆ ಹಿಡಿದುಕೊಂಡು ಇನ್ನೇನು ಸತ್ತೇ ಹೋಗುವ ನಾಟಕವಾಡಿದ ನಿತ್ಯಾನಂದನನ್ನು ಜಯದೇವ ಆಸ್ಪತ್ರೆಗೆ ಸೇರಿಸಲಾಗಿ, ಆಮೂಲಾಗ್ರ ತಪಾಸಣೆ ಮಾಡಿದ ವೈದ್ಯರು ಈತನನ್ನು ಯಾವ ಯಂತ್ರದೊಳಕ್ಕೆ ಹಾಕಿದರೂ ಗುಡ್ ಹೆಲ್ತ್ ಎಂಬ ರಿಜಲ್ಟು ಪಡೆದು ದಂಗಾದರಂತಲ್ಲಾ, ದೇಹದ ಎಲ್ಲಾ ಅಂಗಾಂಗಗಳನ್ನು ಬಹಳ ಚೆನ್ನಾಗಿಯೇ ಇಟ್ಟುಕೊಂಡು ಬಳಸುತ್ತಿರುವ ನಿತ್ಯಾನಂದನನ್ನು ನೋಡಿ ಮುಗುಳು ನಕ್ಕ ಹೃದಯ ತಜ್ಞರು ಸದರಿ ವ್ಯಕ್ತಿಯನ್ನು ನೋಡಿದರೆ ದೇವೇಗೌಡರಿಗಿಂತಲೂ ದೀರ್ಘಾಯುವಾಗಿ ಬದುಕುವ ಎಲ್ಲಾ ಸೂಚನೆಗಳಿವೆ, ಆದ್ದರಿಂದ ಕೂಡಲೆ ಬಿಡುಗಡೆ ಮಾಡುತ್ತೇವೆ ಎಂದರಂತಲ್ಲಾ, ಥೂತ್ತೇರಿ!

* * * * * *



ಈ ಹಿಂದೆ ನಿತ್ಯಾನಂದನನ್ನು ಕೋರ್ಟ್‌ಗೆ ತಂದಾಗ ಕನ್ನಡದ ನಟಿಯರ ಅಭಿಮಾನಿಯೊಬ್ಬ ನಿತ್ಯಾನಂದನನ್ನು ನೋಡಿದ ಕೂಡಲೇ "ಈ ಕೊಂಗಾಟಿ ನನ್ನಮಗ ನಮ್ಮೂರಿಗೆ ಬಂದು ನೆಲೆಸಿರೋದು ಅಲ್ದೆ ನಮ್ಮ ಕನ್ನಡದ ಮುದ್ದಾದ ನಟಿಯರನ್ನ ಹಾಳು ಮಾಡಿದ್ದಾನಲ್ಲ" ಎಂದು ಏಕ್‌ದಂ ಕೆರಳಿ ಕೆರ ಎಸೆದನಂತಲ್ಲಾ, ಇದರಿಂದ ಸಿಟ್ಟಾದ ಸಿಐಡಿ ಪೊಲೀಸರು ಸದರಿ ವ್ಯಕ್ತಿಯನ್ನು ವಶಕ್ಕೆ ತೆಗೆದುಕೊಂಡು "ಕನ್ನಡದ ಯಾವ ನಟಿ ನಿನಗೆ ಸಂಬಂಧಿ? ನಟಿಯರಿಗೂ ನಿನಗೂ ಏನು ಸಂಬಂಧ ಹೇಳು" ಎಂದು ನಿತ್ಯಾನಂದನಿಗಿಂತಲೂ ಹೆಚ್ಚಾಗಿಯೇ ತಪಾಸಣೆ ಶುರುಮಾಡಿದರಂತಲ್ಲಾ, "ನಿತ್ಯಾನಂದ ಭಗವಂತನ ಶೈಲಿಯಲ್ಲಿ ಮುಖಮಾಡಿ ನನ್ನ ಕಡೆಗೆ ಆಶೀರ್ವಾದ ಮಾಡುವವನಂತೆ ಕೈತೋರಿದ್ದರಿಂದ ನನ್ನ ಕೈಗೆ ಕೆರಬಂತೇ ಹೊರತು ನಾನು ಅಪರಾಧಿಯಲ್ಲ, ಪಾರ್ಟ್‌ಟೈಂ ಕವಿ" ಎಂದನಂತಲ್ಲಾ, "ನೀನು ಕವಿಯಲ್ಲ ಕಪಿ" ಎಂದು ಪೊಲೀಸರು ಬಿಟ್ಟು ಓಡಿಸಿದರಂತಲ್ಲಾ, ಥೂತ್ತೇರಿ!!

* * * * * *

ಸದ್ದಿಲ್ಲದೇ ಸಾದ ಲಿಂಗಾಯತರನ್ನು ಮೀಸಲಾತಿಯೊಳಕ್ಕೆ ತಂದು, ಗಲಾಟೆಯ ನಂತರ ವಾಪಸು ಪಡೆದ ಎಡೂರಪ್ಪನ ಕ್ರಮವನ್ನ ಮಾದರು ಖಂಡಿಸುತ್ತಿದ್ದಾರೆಂದು ನಾಯಕರು ದೂರು ಹೇಳತೊಡಗಿದ್ದಾರಂತಲ್ಲಾ, "ಮೀಸಲಾತಿ ವಿಷಯದಲ್ಲಾದರೂ ನಾವಿಬ್ಬರು ಒಂದಾಗಿ, ನಿಜಕ್ಕೂ ಬಸವ ನಮ್ಮವನೇ ಎಂದು ಹೋರಾಡುತ್ತ ಬಂಜಗೆರೆ ಅಧ್ಯಯನಕ್ಕೊಂದು ನ್ಯಾಯ ಒದಗಿಸಬೇಕು" ಎಂದು ಮಾದರ ಬುದ್ಧಿಜೀವಿಗಳು ಸಾದರನ್ನ ಕಂಡು ಚರ್ಚಿಸುವ ಮೊದಲೇ ಹೆದರಿದ ಎಡೂರಪ್ಪ ಸಾದರ ಮೀಸಲಾತಿ ಆದೇಶವನ್ನ ಹಿಂಪಡೆದರಂತಲ್ಲಾ, ಈ ಬಗ್ಗೆ ಅವರನ್ನೇ ಕೇಳಿ ತಿಳಿದುಕೊಳ್ಳುವುದೊಳ್ಳೆಯದೆಂದು ಫೋನ್ ಮಾಡಿದರೆ ಸಿಕ್ಕಿದರು.

ರಿಂಗ್‌ಟೋನ್: "ಶಿವ ಶಿವ ಎಂದರೆ ಭಯವಿಲ್ಲ ಶಿವನಾಮಕೆ ಸಾಟಿ.."

"ಹಲೋ ಯಾರು?"

"ನಮಸ್ಕಾರ ಸಾರ್, ನಾನು ಯಾಹೂ."

"ಏನೇಳಿ ಯಾಹೂ ಅವರೆ."

"ಏನಿಲ್ಲ ಸಾರ್, ಸಾದ ಜನಾಂಗ ಕೇಳದೆಯಿದ್ರೂ ಮೀಸಲಾತಿ ಕೊಡ್ತೀರಲ್ಲ ಯಾಕೆ ಸಾರ್?"

"ಇಲ್ಲ, ಆ ಜನಾಂಗಕ್ಕೆ ಮೀಸಲಾತಿ ಕೊಡಬೇಕು ಅನ್ನೋ ಒತ್ತಡ ಜಾಸ್ತಿಯಿದೆ. ಆದ್ರೂ ನಾನು ಸುಮ್ಮನಿದ್ದೆ. ನಮ್ಮ ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿ ಆದೇಶ ಹೊರಡಿಸಿದ್ದರು."

"ಅಲ್ಲಿಗೆ ಕಾರ್ಯದರ್ಶಿಗಳು ಮುಖ್ಯಮಂತ್ರಿ ಆದೇಶದ ಹಂಗಿಲ್ಲದೆ ಸ್ವತಂತ್ರವಾಗಿ ಕೆಲಸ ಮಾಡ್ತರೆ ಅಂದಂಗಾಯ್ತಲ್ಲ ಸಾರ್?"

ಥೂತ್ತೇರಿ

"ಕೆಲವೊಂದು ಸಾರಿ ಹಾಗಾಗುತ್ತೆ, ಏನೂ ಮಾಡಕ್ಕಾಗಲ್ಲ."

"ಅಲ್ಲಿಗೆ ಮುಖ್ಯಮಂತ್ರಿ ಸ್ಥಾನದ ಕತೆ ಏನು ಸಾರ್?"

"ಆದೇಶನ ವಾಪಸ್ ತಗಂಡನಲ್ಲ ಈಗ."

"ಓಹೋ, ಅಂತ ಕೆಲಸಗಳಿಗ ನೀವಿರದು? ಇರಲಿ, ಸಾದ ಜನಾಂಗನಾದ್ರು ನಮಗೆ ಮೀಸಲಾತಿಬೇಡ ಅನ್ನಬವುದಿತ್ತಲ್ಲ ಸಾರ್?"

"ಜಂಗಮರು ಬೇಡ ಜಂಗಮರ ಸರ್ಟಿಫಿಕೇಟ್ ತಗೊಳ್ತಾಯಿದಾರೆ. ಅಂತಾದ್ರಲ್ಲಿ ಪಾಪ ಸಾದರನ್ನು ದೂರದು ಸರಿಯಿಲ್ಲ, ಸಾದ ಜನಾಂಗ ಕೃಷಿ ಅವಲಂಬಿಸಿರೋದರಿಂದ ಅವರಿಗೆ ಮೀಸಲಾತಿ ಕೊಡದ್ರಲ್ಲಿ ತಪ್ಪಿಲ್ಲ."

"ಅಲ್ಲಿಗೆ ಈ ಮೀಸಲಾತಿ ಆದೇಶದಲ್ಲಿ ಮುಖ್ಯಮಂತ್ರಿ ಕೈವಾಡ ಇದೆ ಅಂತ ಸಿದ್ದರಾಮಯ್ಯ ಹೇಳಿರದ್ರಲ್ಲಿ ಸತ್ಯ ಇದೆ ಅಂದಂಗಾಯ್ತಲ್ಲ ಸಾರ್?"


"ಅದನ್ನ ಅವರು ಸಾಬೀತುಪಡಿಸಬೇಕು. ಸುಮ್ಮಸುಮ್ಮನೆ ಹೇಳಬಾರ್ದು."

"ನಿಮ್ಮ ಸ್ಪಷ್ಟೀಕರಣವೇ ನಿಜ ಹೇಳ್ತಾ ಇದೆಯಲ್ಲ ಸಾರ್?"

"ನಾನೇನು ಸ್ಪಷ್ಟೀಕರಣ ಕೊಟ್ಟಿದ್ದೀನಿ?"

"ಅದೇ ಸಾರ್, ಪ್ರವರ್ಗ 2ಎನಲ್ಲಿರೋ ನೂರ ಎರಡ ಜಾತಿವಳಿಕೆ ಸಾದರನ್ನ ಸೇರಿಸಿ ಸರ್ಟಿಫಿಕೇಟ್ ಕೊಡತಿದ್ರಂತೆ. ಸಾವಿರಾರು ಸರ್ಟಿಫಿಕೇಟ್ ಕೊಟ್ಟಮೇಲೆ ಬೇಡ ಅಂದಿದ್ದಿರಿ. ಒಂದು ವೇಳೆ ಪ್ರತಿಭಟನೆ ಇಲ್ದೆಯಿದ್ರೆ ಇದಂಗೇ ಮುಂದುವರಿತಿತ್ತಲ್ಲವೆ?"

"ನೋಡ್ರಿ, ನಾನು ಯಾರಿಗೂ ಹೆದ್ರಿಕೊಂಡು ಆಡಳಿತ ಮಾಡ್ತ ಇಲ್ಲ."



"ಸಾದರ ಸ್ವಾಮಿಗಳಿಗೆ ಹೆದರಿಕೊಂಡು ಮೀಸಲಾತಿ ಜಾರಿ ಮಾಡಿದ್ರಿ. ನಿಮ್ಮ ಪಕ್ಷದವರ ಪ್ರತಿಭಟನೆಗೆ ಹೆದರಿ ವಾಪಸ್ ತಗೊಂಡ್ರಿ. ಆದ್ರೂ ಯಾರಿಗೂ ಹೆದರತಯಿಲ್ಲ ಅಂತಿರಲ್ಲ ಸಾರ್?"

"ನಮ್ಮ ಪಕ್ಷದವರಿಗೆ ಮೀಸಲಾತಿ ವಿರುದ್ಧ ಮಾತನಾಡೋ ಹಕ್ಕಿಲ್ಲ. ಕಾಡುಕುರುಬರ ಸರ್ಟಿಫಿಕೇಟ್‌ನಲ್ಲಿ ಎಷ್ಟು ಜನ ಸರ್ಕಾರಿ ನೌಕರಿ ಹೊಡೆದಿದ್ದಾರೆ ತೋರುಸ್ಲ?"

"ಅದೇರೀತಿ ಅವರೂ ಬೇಡ ಜಂಗಮರ ಸರ್ಟಿಫಿಕೇಟ್‌ನಲ್ಲಿ ಎಷ್ಟು ಜನ ಯಾವ ಯಾವ ಹುದ್ದೆ ಹೊಡದವ್ರುರೆ ತೋರ್ಲ ಅಂತ ಅಂದ್ರೆ?"

"ಅನ್ನಲಿ ಬಿಡ್ರಿ, ನನಗೇನು? ನಾನು ಜಂಗಮನೂ ಅಲ್ಲ ಸಾದನೂ ಅಲ್ಲ!"

"ಥೂತ್ತೇರಿ!!!"

ರೆಡ್ಡಿ ಗ್ಯಾಂಗ್ ಮೇಲೆ ಪುನೀತ್ ಬಾಂಬ್

ಕನ್ನಡ ಚಿತ್ರರಂಗದಲ್ಲಿ ಸಮಕಾಲೀನ ವಿಷಯ ಅದರಲ್ಲೂ ರಾಜಕೀಯ ಸವಾಲಿನ ಕಥಾವಸ್ತುವನ್ನು ಎತ್ತಿಗೊಳ್ಳುತ್ತಿಲ್ಲ ಎಂಬ ಬೇಸರದ ನಡುವೆ ಪುನೀತ್ ಅಭಿನಯದ 'ಪೃಥ್ವಿ' ಆ ಪ್ರಯೋಗಕ್ಕೆ ಕೈಹಾಕಿ ಯಶಸ್ಸು ಕಾಣುತ್ತಿದೆ. ಅಕ್ರಮ ಗಣಿಗಾರಿಕೆಯ ಮೂಲಕ ರಾಜ್ಯದ ಗಡಿ ನಕ್ಷೆಯನ್ನೇ ತಿದ್ದಿ, ಅದಿಲುಲೂಟಿಯ ಹಣದಿಂದ ಮುಖ್ಯಮಂತ್ರಿಯನ್ನೇ ಕೈಗೊಂಬೆ ಮಾಡಿಕೊಂಡಿರುವ ಬಳ್ಳಾರಿಯ ಗಣಿಗಳ್ಳರೇ 'ಪೃಥ್ವಿ'ಯಲ್ಲಿ ವಿಲನ್‌ಗಳು....

-ಸಾವಂತಿ





ದುಡ್ಡಿದ್ದವನೇ ದೊಡ್ಡಪ್ಪ ಮಾತ್ರವಲ್ಲ, ಈ ರಾಜ್ಯದ ದೊಡ್ಡ ನುಂಗಪ್ಪ ಎಂಬಂತೆ ಮೆರೆಯುತ್ತಿರುವ ಬಳ್ಳಾರಿ ಗಣಿ ಲೂಟಿಕೋರ ಧಣಿಗಳ ಬುಡದಲ್ಲೇ 'ಪೃಥ್ವಿ' ಎಂಬ 'ಬಾಂಬ್' ಸ್ಫೋಟಗೊಂಡಿದೆ. ಈ 'ಬಾಂಬ್'ನ ರೂವಾರಿಗಳು ಜನಪ್ರಿಯ ನಟ ಪುನೀತ್ ರಾಜ್‌ಕುಮಾರ್, ನಿರ್ಮಾಪಕ ಸೂರಪ್ಪ ಬಾಬು ಮತ್ತು ಯುವ ನಿರ್ದೇಶಕ ಜೇಕಬ್ ವರ್ಗೀಸ್.

ಈ ಮೂವರು ಸೃಷ್ಟಿಸಿರುವ ಈ 'ಬಾಂಬ್' ಅಂತಿಂತಹದ್ದಲ್ಲ, ಈ ಸಿನಿಮಾದಿಂದಾಗಿ ರೆಡ್ಡಿ ಗ್ಯಾಂಗಿನ ರೊಕ್ಕದ ಧಿಮಾಕೆಲ್ಲ ಮೂರು ಕಾಸಿಗೆ ಬಿಕರಿ ಆಗಿದೆ, ಜೊತೆಗೆ ಚಿಡ್ಡಿ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಆತನ ಗೃಹ ಸಚಿವ ವಿ.ಎಸ್. ಆಚಾರ್ಯನ ಮಾನಮರ್ಯಾದೆ ಬಾಕ್ಸ್ ಆಫೀಸಿನಲ್ಲಿ ಹರಾಜಾಗಿದೆ.

ಕನ್ನಡ ಚಿತ್ರರಂಗದ ಮಟ್ಟಿಕ್ಕಂತೂ 'ಪೃಥ್ವಿ' ಒಂದು ಐತಿಹಾಸಿಕ ಚಿತ್ರ. ನಮ್ಮವರಿಗಿಂತಲೂ ಬಹಳ ಹಿಂದಿನಿಂದ ನೆರೆಯ ತೆಲುಗು ಮತ್ತು ಮಲೆಯಾಳಂ ಚಿತ್ರರಂಗದವರು ಸಮಕಾಲೀನ ವಿಷಯಗಳ ಬಗ್ಗೆ ಸಿನಿಮಾಗಳನ್ನು ಮಾಡಿ ಗೆದ್ದಿದ್ದರು. ಇತ್ತೀಚೆಗೆ ಹಿಂದಿ ಚಿತ್ರರಂಗದವರೂ ಇಂತಹ ಹಲವಾರು ಸಿನಿಮಾಗಳನ್ನು ಮಾಡಿದ್ದಾರೆ. ಅಂತಹ ಚಿತ್ರಗಳು ಈಗ ಎಷ್ಟು ಜನಪ್ರಿಯವಾಗುತ್ತಿವೆ ಅಂದರೆ ಸೈಫ್ ಅಲಿ ಖಾನ್, ಅಜಯ್ ದೇವಗನ್ ಮತ್ತು ಕರೀನಾ ಕಪೂರ್ ತರಹದ `A' ಲಿಸ್ಟ್ ನಟ-ನಟಿಯರೂ ತಮ್ಮ ಇಮೇಜ್‌ಗಳನ್ನು ಬದಿಗಿಟ್ಟು ಆ ಚಿತ್ರಗಳಲ್ಲಿ ನಟಿಸಿ ಸೈ . ಅನ್ನಿಸಿಕೊಳ್ಳುತ್ತಿದ್ದಾರೆ.


ಆದರೆ ಕನ್ನಡ ಚಿತ್ರರಂಗ ಮಾತ್ರ ಸುತ್ತಲಿನ ಸಮಾಜಕ್ಕೂ ತನಗೂ ಯಾವುದೇ ಸಂಬಂಧವೇ ಇಲ್ಲ ಎಂಬಂತೆ ಇತ್ತು. ಈ ಕುರುಡುತನದಲ್ಲಿ ಮರಸುತ್ತುವ ಲವ್ ಸ್ಟೋರಿಗಳು ಅಥವಾ ಲಾಂಗ್-ಮಚ್ಚು ಹಿಡಿದು ಕಡಿಬಡಿ ತರಹದ ಸಿದ್ಧ ಸೂತ್ರಗಳನ್ನೇ ಅವಲಂಬಿಸಿದ್ದರು ನಮ್ಮ ಗಾಂಧಿನಗರಿಗಳು.





ಜನಾರ್ದನ ರೆಡ್ಡಿ ಪಾತ್ರದಲ್ಲಿ ಅವಿನಾಶ್





ಆಚಾರ್ಯ ಪಾತ್ರದಲ್ಲಿ ಸಿಂಹ

ಈಗ ಅಂತಹ ಎಲ್ಲಾ ಮಸಾಲ ಸೂತ್ರಗಳನ್ನು ಬದಿಗಿಟ್ಟು, ಈ ರಾಜ್ಯದಲ್ಲಿ ಏನಾಗುತ್ತಿದೆ ಎನ್ನುವುದಕ್ಕೆ ಮೊದಲ ಬಾರಿ ಕನ್ನಡಿ ಹಿಡಿದಿರುವ ಕನ್ನಡ ಚಿತ್ರವೊಂದು ಬಂದಿದೆ. 'ಪೃಥ್ವಿ' ಸಿನಿಮಾದಲ್ಲಿನ ಏರುಪೇರುಗಳು, ನ್ಯೂನತೆಗಳು ಏನೇ ಇರಲಿ, ಇವತ್ತು ಇದ್ದದ್ದನ್ನು ಇದ್ದ ಹಾಗೆ ಹೇಳಿದ್ದಕ್ಕಾದರೂ ಇದು ಐತಿಹಾಸಿಕ ಚಿತ್ರವಾಗುತ್ತದೆ.

'ಪೃಥ್ವಿ' ಓರ್ವ ಸಾಮಾನ್ಯ ಆದರೆ ಪ್ರಾಮಾಣಿಕ ಅಧಿಕಾರಿಯ ಕತೆಯೂ ಹೌದು, ಈ ರಾಜ್ಯವನ್ನು ತಮ್ಮ ಹಣಬಲ ಮತ್ತು ತೋಳ್ಬಲದಿಂದ ಆಳುತ್ತಿರುವ ರೆಡ್ಡಿ ಗ್ಯಾಂಗಿನ ದುಷ್ಟತನವನ್ನು ತೆರೆದಿಡುವ ಕತೆಯೂ ಹೌದು. ಅಂದಹಾಗೆ, ಈ ಚಿತ್ರದಲ್ಲಿ ಹೇಳಿರುವುದರಲ್ಲಿ ಹೊಸದೇನಿಲ್ಲ, ಅದರಲ್ಲಿರುವುದನ್ನೆಲ್ಲ ನಮ್ಮ ಪತ್ರಿಕೆ ಈಗಾಗಲೇ ವರದಿ ಮಾಡಿದೆ. ಆದರೆ ಸಿನಿಮಾದಂತಹ ಬಲಿಷ್ಠ ಮಾಸ್ ಮಾಧ್ಯಮ ಇದೆಯಲ್ಲ, ಅಂತಹ ಮಾಧ್ಯಮ ದಲ್ಲಿ ಇದೆಲ್ಲ ಬಿಂಬಿತವಾಗಿರುವುದು ಖಂಡಿತವಾಗಿಯೂ ಪ್ರಶಂಸಾರ್ಹ.

ಇನ್ನೊಂದು ಮುಖ್ಯ ಅಂಶ ಯಾವು ರೆಂದರೆ ಈ ಚಿತ್ರದ ಪ್ರಾಮಾಣಿಕತೆ. ಇಲ್ಲಿ ಬಳ್ಳಾರಿಯ ಗಣಿ ಲೂಟಿ, ಗಣಿ ಹಣದಿಂದ ಕೆಲವರಿಗೆ ಬಂದ ರಾಜಕೀಯ ಪ್ರಭಾವ, ಅದರ ದುರುಪಯೋಗ, ಅಧಿಕಾರದಲ್ಲಿರು ವವರ ನಪುಂಸಕತನ, ಎಲ್ಲವನ್ನು ಸಾಧ್ಯವಾದಷ್ಟು (ಸೆನ್ಸಾರ್ ಕತ್ತರಿಗೆ ಗುರಿಯಾಗದಂತೆ) ಸೀದಾಸಾದಾ ಹೇಳಲಾಗಿದೆ.

ಇನ್ನು 'ಪೃಥ್ವಿ'ಯ ಕತೆಗೆ ಬರುವುದಾದರೆ ಅದು ಪ್ರಸ್ತುತ ಬಳ್ಳಾರಿಯ ಚಿತ್ರಣ!

ಪೃಥ್ವಿ ಎಂಬ ಆದರ್ಶವಾದಿ ಯುವಕ (ಪುನೀತ್ ರಾಜ್‌ಕುಮಾರ್) ತನ್ನ ಮಹತ್ವಾಕಾಂಕ್ಷೆ ಯಾದ ಐಎಎಸ್ ಪರೀಕ್ಷೆಗಳಲ್ಲಿ ಪಾಸ್ ಆಗುವುದರೊಂದಿಗೆ ಚಿತ್ರ ಪ್ರಾರಂಭವಾಗು ತ್ತದೆ. ಆತ ಬಳ್ಳಾರಿಯ ಡಿಸಿ ಆಗಿ ಜವಾಬ್ದಾ ವಹಿಸಿಕೊಳ್ಳುವ ಮುನ್ನ ಆತನ ಗೆಳ ಪ್ರಿಯಾಳೊಂದಿಗೆ (ಪಾರ್ವತಿ ಮೆನನ್ ಆತನ ಮದುವೆಯೂ ಆಗುತ್ತೆ.

ನವ ದಂಪತಿಗಳು ಬಳ್ಳಾರಿಗೆ ಆಗಮಿಸು ತ್ತಾರೆ. ಆ ಜಿಲ್ಲೆಯಲ್ಲಿ ಏನಾಗುತ್ತಿದೆ ಎಂಬುದರ ಮಾಹಿತಿ ಅವರ ಮನೆಯ ತೋಟ ನೋಡಿ ಕೊಳ್ಳುವ ತಿರುಪತಿ (ಸಾಧು ಕೋಕಿಲ ಮೂಲಕ ಸಿಗುತ್ತದೆ. "ಬಳ್ಳಾರಿ ರಾಜ್ಯದಲ್ಲೇ ಅ ಭ್ರಷ್ಟ ಜಿಲ್ಲೆ" ಎಂದೂ, "ಈ ಹಿಂದಿದ್ದ ಜಿಲ್ಲಾಧಿಕಾ ಬರುವಾಗ cat ಒಂದನ್ನು ತಂದಿದ್ದು ಹೋಗು ವಾಗ cash ಮಾತ್ರ ತೆಗೆದುಕೊಂಡು ಹೋದರು ಎಂದೂ ಆತ ಹೇಳುವ ಮೂಲಕ ಆ ಜಿಲ್ಲೆಯ ತಾಂಡವವಾಡುತ್ತಿರುವ ಭ್ರಷ್ಟಾಚಾರದ ಪರಿಚಯ ವಾಗುತ್ತೆ.

ಡಿಸಿಯಾಗಿ ಪೃಥ್ವಿ ಅಧಿಕಾರ ವಹಿಸಿಕೊಂ ಮರುಕ್ಷಣದಿಂದಲೇ ಗಣಿ ಧಣಿಗಳ ಅವಾಂತ ಪ್ರಾರಂಭವಾಗುತ್ತದೆ. ಡಿಸಿಯ ಪಿಎ ಶಾಣಪ್ಪ (ಅಚ್ಯು ಶಾಸಕ ನರಸಿಂಹ ನಾಯ್ಕನ (ಅವಿನಾಶ್) ಈಶ್ವ ಮೈನ್ಸ್ ಕುರಿತ ಫೈಲಿಗೆ ಪೃಥ್ವಿ ಸಹಿ ಹಾಕುವಂ ಹೇಳುತ್ತಾನೆ. ಅದಕ್ಕೆ ಪೃಥ್ವಿ ಒಪ್ಪದೆ ತಾನು ಫೈ ಅನ್ನು ಪರಿಶೀಲಿಸಿದ ನಂತರವೇ ಸಹಿ ಹಾಕುವುದಾ ಹೇಳಿದಾಗ ಮುಂದೆ ಆಗಲಿರುವ ಜಿದ್ದಾಜಿದ್ದಿ ಸೂಚನೆ ಸಿಗುತ್ತದೆ.

ಶಾಸಕ ನರಸಿಂಹ ನಾಯ್ಕ ತನ್ನ ಹಿಂಬಾಲಕ ಮೂಲಕ ಪೃಥ್ವಿಗೆ 'ಅಭಿನಂದನೆ' ಕಾರ್ಯಕ್ರ ಎಂಬ ಆತ್ಮರತಿಯ ಆಶೆ ತೋರಿಸುತ್ತಾನೆ; ದುಬಾ ಗಿಫ್ಟ್‌ಗಳ ಮೂಲಕ ಆತನನ್ನು ಸೆಳೆದುಕೊಳ್ಳ ಯತ್ನಿಸುತ್ತಾನೆ; ಅದ್ಯಾವುದೂ ಯಶಸ್ವಿ ಆಗದಿದ್ದಾ ತಾನಿರುವಲ್ಲಿಗೆ ಪೃಥ್ವಿಯನ್ನು ಕರೆಸಿಕೊಂಡು ಕಾನೂ ಗಿನೂನು ಎಲ್ಲ ಗೌಣ, ತಾನು ಹೇಳಿದ್ದೇ ಕಾನೂನ ಬೇಕೆಂದು ಸೂಚಿಸುತ್ತಾನೆ. ಅದ್ಯಾವುದಕ್ಕೂ ಪ ಸೊಪ್ಪು ಹಾಕುವುದಿಲ್ಲ, ಹೀಗೆ ಜಿಲ್ಲಾಡಳಿತ ತಾ ಹೇಳಿದಂತೆ ನಡೆಯಬೇಕೆಂದು ಬಯಸುವ ನರಸಿ ನಾಯ್ಕನ ಪಾತ್ರ ಗಣಿ ಧಣಿ ಜನಾರ್ದನ ರೆಡ್ಡಿಯ ಸೂಕ್ಷ್ಮವಾಗಿ ಹೋಲುತ್ತದೆ.

ಪುನೀತ್: 'ಇದೊಂದು ಸವಾಲಿನ ಪಾತ್ರ'

*** ಈ ಚಿತ್ರದ ಪಾತ್ರ ಒಪ್ಪಲು ಕಾರಣವೇನು?**

ನನಗೆ ಚಿತ್ರದ ಕಥಾವಸ್ತು ಇಷ್ಟವಾಯಿತು ಮತ್ತು ನಿರ್ದೇಶಕ ಜೇಕಬ್ ಹಾಗು ತಂಡದ ಮೇಲೆ ವಿಶ್ವಾಸವಿತ್ತು, ಆ ಕಾರಣಕ್ಕೆ ಇದನ್ನು ಒಪ್ಪಿಕೊಂಡೆ.

*** ಈ ಚಿತ್ರ ಕರ್ನಾಟಕದ ರಾಜಕೀಯ ವಲಯದಲ್ಲಿ ಕೋಲಾಹಲ ಉಂಟು ಮಾಡಬಹುದು ಎಂದು ನಿಮಗೆ ಪಾತ್ರ ಮಾಡುವಾಗ ಅನ್ನಿಸಲಿಲ್ಲವೇ?**

ನಾನು ಚಿತ್ರದ ಕಥಾವಸ್ತು ಮತ್ತು ತಾಂತ್ರಿಕತೆಯ ಬಗ್ಗೆ ಮಾತ್ರ ತಲೆ ಕೆಡಿಸಿಕೊಂಡೆ ವಿನಃ ಬೇರೇನೂ ನನಗೆ ಗೊತ್ತಿಲ್ಲ, ಇಷ್ಟಾಗಿಯೂ ಒಬ್ಬ ಕಲಾವಿದನಾಗಿ ನನಗೂ ಒಂದು ವಿಭಿನ್ನವಾದ ಪಾತ್ರದಲ್ಲಿ ನಟಿಸಬೇಕೆನ್ನಿಸಿತ್ತು.

*** ಈ ಚಿತ್ರ ನಿಮ್ಮ ಅಭಿಮಾನಿಗಳಿಗೆ ಇಷ್ಟವಾಗಿದೆಯೇ?**

ನಿಜ ಹೇಳಬೇಕೆಂದರೆ, ಇದರ ಬಗ್ಗೆ ಮಿಶ್ರ ಪ್ರತಿಕ್ರಿಯೆ ಇದೆ. ಕೆಲವರಿಗೆ ಇಷ್ಟವಾಗಿದೆ. ಕೆಲವರಿಗೆ ಇಷ್ಟವಾಗಿಲ್ಲ, ಆದರೆ ಎಷ್ಟೋ ಜನ ಅಭಿಮಾನಿಗಳಲ್ಲದವರು ಈ ಚಿತ್ರ ನೋಡಿ ಮೆಚ್ಚುಗೆಯನ್ನು ಸೂಚಿಸುತ್ತಿದ್ದಾರೆ. ನನಗೆ ಅದು ಸಂತೋಷ ನೀಡಿದೆ.

*** ಈ ಚಿತ್ರದಿಂದಾಗಿ ರಾಜಕೀಯ ಕ್ಷೇತ್ರದಲ್ಲಿ ಮತ್ತು ವಿಧಾನಸೌದದ ಮೊಗಸಾಲೆಯಲ್ಲಿ ದೊಡ್ಡ ಚರ್ಚೆ, ವಿವಾದ ನಡೆಯುತ್ತಿದೆ. ಇದರಿಂದ ನಿಮಗೇನಾದರೂ ತೊಂದರೆಯಾಗಿದೆಯೇ?**

ಅದರ ಬಗ್ಗೆ ನನಗೇನೂ ಗೊತ್ತಿಲ್ಲ, ನನ್ನ ಮಟ್ಟಿಗೆ ಹೇಳುವುದಾದರೆ, ಐ ಯಾಮ್ ವೆರಿ ಹ್ಯಾಪಿ ಅಂಡ್ ಕಂಫರ್ಟಬಲ್. ನನಗೆ ಏನೂ ತೊಂದರೆಯಾಗಿಲ್ಲ, ತೊಂದರೆಯಾಗುವುದೂ ಇಲ್ಲ, ನೋಡೋಣ.

*** ನಿಮ್ಮ ಪ್ರಕಾರ ಈ ಚಿತ್ರದ ಉದ್ದೇಶವೇನು?**

ನನಗೆ ಈ ರಾಜಕೀಯ, ಚರ್ಚೆ, ವಿವಾದ ಅವೆಲ್ಲ ಮುಖ್ಯವಲ್ಲ, ಈ ಚಿತ್ರ ನೋಡಿ ಕನಿಷ್ಠ ಯುವ ಜನಾಂಗದವರು ಈ ಚಿತ್ರದಲ್ಲಿನ ಜಿಲ್ಲಾಧಿಕಾರಿ ಕೆಲಸದತ್ತ ಆಕರ್ಷಣೆಗೊಳ್ಳಲಿ, ಆ ಮುಖಾಂತರ ನಮ್ಮ ರಾಜ್ಯಕ್ಕೆ ಒಳ್ಳೊಳ್ಳೆಯ ಮತ್ತು ಪ್ರಾಮಾಣಿಕ ಅಧಿಕಾರಿಗಳು ಸಿಗುವಂತಾಗಲಿ ಎಂಬುದೇ ನನ್ನ ಮನದಾಸೆ.

*** ಸಾಧಾರಣವಾಗಿ ಇಂತಹ ಕಥಾವಸ್ತುವಿನ ಚಿತ್ರವನ್ನು ನೀವು ಒಪ್ಪುವುದಿಲ್ಲ, ಈ ಬಾರಿ ಯಾಕೆ ಮನಸು ಮಾಡಿದಿರಿ?**


ಪೊಲೀಸರನ್ನು ಮತ್ತು ಅಧಿಕಾರಿಗಳನ್ನು ಭ್ರಷ್ಟರು ಅಥವಾ ವಿದೂಷಕರಂತೆ ತೋರಿಸಿ ಈಗಾಗಲೇ ಅದೆಷ್ಟು ಸಾವಿರ ಚಿತ್ರಗಳು ಬಂದುಹೋಗಿಲ್ಲ? ನನ್ನ ಪಾಲಿಗೆ ಇದೊಂದು ವಿಭಿನ್ನವಾದ ಸವಾಲಿನ ಪಾತ್ರವಾಗಿತ್ತಷ್ಟೇ. ಆ ಸವಾಲು ಮತ್ತು ಪಾತ್ರವನ್ನು ಒಬ್ಬ ಕಲಾವಿದನಾಗಿ ನಾನು ಸ್ವೀಕರಿಸಿದ್ದೇನೆ. ಉಳಿದದ್ದೆಲ್ಲವೂ ಚಿತ್ರದ ನಿರ್ಮಾಪಕ ಮತ್ತು ನಿರ್ದೇಶಕರ ಕನಸು. ನನ್ನದು ಪಾತ್ರಕ್ಕೆ ಜೀವ ತುಂಬುವ ಕೆಲಸ ಮಾತ್ರ.

*** ಮುಂದೆಯೂ ಇಂಥ ಪಾತ್ರಗಳು ಬಂದರೆ ಒಪ್ಪುತ್ತೀರಾ?**

ಯಾಕೆ ಒಪ್ಪಬಾರದು? ನಾನು ಖಂಡಿತವಾಗಿಯೂ ಒಬ್ಬ ಕಲಾವಿದನಾಗಿ ಇಂಥ ಪಾತ್ರಗಳಲ್ಲಿ ಕಾಣಿಸಿಕೊಳ್ಳಲು ಇಷ್ಟಪಡುತ್ತೇನೆ. ಹೀಗಾಗಿ ಇಂಥ ಪಾತ್ರಗಳಲ್ಲಿ ಮುಂದೆಯೂ ನಟಿಸುವುದು ಗ್ಯಾರಂಟಿ.

(ಸಂದರ್ಶನಗಳು : ಸದಾಶಿವ ಶೆಣೈ)





ಸೂರಪ್ಪ ಬಾಬು: 'ಯಾರ ಹೆದರಿಕೆಯೂ ಇಲ್ಲ'

* ನಿಮ್ಮ ಚಿತ್ರಕ್ಕೆ ಗಣಿ ಧಣಿ ಅನಿಲ್ ಲಾಡ್ ಅವರು ಫೈನಾನ್ಸ್ ಮಾಡಿದ್ದಾರೆ ಎಂಬ ಸುದ್ದಿ ಇದೆ. ಅದು ನಿಜವೇ?

ನನಗೂ ಇತ್ತೀಚೆಗೆ ಎಲ್ಲರೂ ಹಾಗೇ ಫೋನು ಮಾಡುತ್ತಿದ್ದಾರೆ. ಅಷ್ಟೇ ಅಲ್ಲ ತಮಗೂ ಅನಿಲ್ ಲಾಡ್ ಅವರಿಂದ ಫೈನಾನ್ಸ್ ಮಾಡಿಸಿಕೊಡಿ ಎಂದು ದುಂಬಾಲು ಬೀಳುತ್ತಿದ್ದಾರೆ. ನನಗೆ ಈಗ ಚಿತ್ರದ ವಿತರಣೆಗಿಂತ ಇಂತಹ ಫೋನ್ ಕರೆಗಳಿಗೆ ಉತ್ತರಿಸುವ ಕೆಲಸವೇ ದೊಡ್ಡದಾಗಿದೆ. ಆದರೆ ಅದೆಲ್ಲ ಸುಳ್ಳು. ನಾನೇ ಈ ಚಿತ್ರದ ನಿರ್ಮಾಪಕ.

* ಈ ಹಿಂದೆ ನೀವು ಮಸಾಲಾ ಚಿತ್ರಗಳನ್ನೇ ನಿರ್ಮಿಸಿದ್ದೀರಿ. ಆದರೆ ಈಗ ಗಣಿ ಧಣಿಗಳ ವಿರುದ್ಧದ ಈ ಕತೆಯನ್ನು ಕೈಗೆತ್ತಿಕೊಳ್ಳಲು ಕಾರಣವೇನು?

ಅಪ್ಪುಗಾಗಿ ನಿರ್ದೇಶಕ ಜೇಕಬ್ ಮತ್ತು ನಾನು ವಿಶೇಷ ಕಥೆಯನ್ನು ಕೈಗೆತ್ತಿಕೊಳ್ಳಬೇಕೆಂದು ಹಂಬಲಿಸುತ್ತಿದ್ದೆವು. ಆಗ ಜೇಕಬ್ ಈ ಕಥೆ ಹೇಳಿದರು. ...ಗೆ ಇಷ್ಟವಾಯಿತು.

* ಅಪ್ಪುವನ್ನು ಈ ಪಾತ್ರಕ್ಕೆ ಒಪ್ಪಿಸಲು ಕಷ್ಟವಾಯಿತಾ?

ಏನ್ಸಾರ್ ಹೀಗೆ ಕೇಳ್ತೀರ? ಈ ಕಥೆಯ ಎಳೆಯನ್ನು ಹೇಳಿದಾಕ್ಷಣ ಅಪ್ಪು ಕೂಡಲೇ ಒಪ್ಪಿಕೊಂಡರು. ಅವರೂ ...ಲಾವಣೆಗಾಗಿ ಹಾತೊರೆಯುತ್ತಿದ್ದರು.

* ಈಗ ನಿಮ್ಮ ಚಿತ್ರಕ್ಕೆ ರೆಡ್ಡಿ ಧಣಿಗಳಿಂದ ತೊಂದರೆಯಾಗುತ್ತಿದೆಯೇ?

ಒಂದೆರಡು ಕಡೆ ಬಳ್ಳಾರಿಯಲ್ಲಿ ಥಿಯೇಟರ್ ಮಾಲೀಕರಿಗೆ ಯಾರೋ ಧಮಕಿ ಹಾಕಿದ್ದಾರಂತೆ. ಆದರೆ ನಾನು ಥಿಯೇಟರ್ ಮಾಲೀಕರಿಗೆ ಧೈರ್ಯ ತುಂಬಿದ್ದೇನೆ. ಮುಂದೇನೂ ಆಗದು ಎಂದು ಅನಿಸುತ್ತಿದೆ. ಹಾಗೇನಾದರೂ ಆದರೆ, ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಬೇಕಾಗುತ್ತದೆ.

* ಈ ಚಿತ್ರದ ಕಥಾವಸ್ತುವನ್ನು ಮಾಧ್ಯಮದವರಿಂದ ಗೌಪ್ಯವಾಗಿಟ್ಟು ನಿರ್ಮಿಸಿದ್ದರ ಹಿಂದಿನ ಉದ್ದೇಶ ಏನು?

ಚಿತ್ರ ನೋಡುವಾಗ ಎಲ್ಲರಿಗೂ ಸರ್‌ಪ್ರೈಸ್ ಆಗಲಿ ಎಂಬ ಉದ್ದೇಶವೇ ಹೊರತು ಯಾರಿಗೂ ಹೆದರಿ ಅಲ್ಲವೇ ಅಲ್ಲ.

* ಒಬ್ಬ ನಿರ್ಮಾಪಕನಾಗಿ ಆರ್ ಯು ಹ್ಯಾಪಿ?

ಸಾರ್, ನೀವೇನೇ ಹೇಳಿ, ಅಪ್ಪು ಅಭಿಮಾನಿಗಳಿಗೆ ಸ್ವಲ್ಪ ನಿರಾಶೆಯಾಗಿರಬಹುದು. ಆದರೆ ಕ್ಲಾಸ್ ಪೀಪಲ್ ಇದ್ದಾರಲ್ಲ, ಅವರಂತೂ ಚಿತ್ರವನ್ನು ನೋಡಿ ಸಿಕ್ಕಾಪಟ್ಟೆ ಇಷ್ಟಪಟ್ಟಿದ್ದಾರೆ. ನನಗೆ ಅದೇ ಸಂತೋಷ. ಕುಮಾರಸ್ವಾಮಿ ಮತ್ತು ದೇವೇಗೌಡರೂ ಈ ಚಿತ್ರವನ್ನು ನೋಡಬೇಕಂತೆ. ಸದ್ಯದಲ್ಲೇ ಅವರಿಗೆ ತೋರಿಸಬೇಕಿದೆ. ಆದರೆ ರಾಜಕೀಯಕ್ಕೂ, ನನಗೂ ಯಾವುದೇ ಸಂಬಂಧ ಇಲ್ಲ. ಈ ಕಥೆ ನಮಗೆ ಇಷ್ಟವಾಗಿದ್ದರಿಂದ ಮಾಡಿದ್ದೇವೆ...


* ನಿಮ್ಮ ಡೈರೆಕ್ಟರ್ ಜೇಕಬ್ ವರ್ಗೀಸ್ ಯಾಕೆ ಫೋನ್‌ಗೆ ಸಿಗುತ್ತಿಲ್ಲ? ಅವರಿಗೆ ಏನಾದರೂ ಬೆದರಿಕೆ ಕರೆ ಬಂದಿದೆಯಾ?

ಛೆ ಛೆ ಛೆ... ಏನ್ಸಾರ್ ಹೀಗೆಲ್ಲಾ ಕೇಳ್ತೀರಾ? ಅವರು ಮಲೆಯಾಳಿ ಅಲ್ವಾ? ಸಿನಿಮಾ ಮಾಡಿ ಸುಸ್ತಾಗಿದ್ದಾರೆ. ಅದಕ್ಕೆ ಮೊಬೈಲ್ ಆಫ್ ಮಾಡಿಕೊಂಡು ಎಲ್ಲೋ ರೆಸಾರ್ಟ್‌ನಲ್ಲಿ ಆಯುರ್ವೇದಿಕ್ ಮಸಾಜ್ ಮಾಡಿಸ್ಕೊಂಡು ವಿಶ್ರಾಂತಿ ಪಡೆಯುತ್ತಿದ್ದಾರೆ!

...ಸಿಂಹ ನಾಯ್ಕನಿಗೆ ಇರುವಷ್ಟು ತಾಳ್ಮೆ ...ಸಹೋದರ ನಾಗೇಂದ್ರನಿಗೆ ಇಲ್ಲ. ಡಿಸಿ ...ನನ್ನು ಬೆದರಿಸಿಯಾದರೂ ತನ್ನ ಗಣಿ ...ಯನ್ನು ಮುಂದುವರೆಸುವ ತವಕ ಆತನದ್ದು. ...ದುರು ನಿಲ್ಲುವಷ್ಟು ಧಿಮಾಕೇ ಈ ಸರ್ಕಾರಿ ...ಯದ್ದು ಎಂಬ ಆಕ್ರೋಶ ಆತನಿಗೆ.

...ಸಹೋದರನ ಪಾತ್ರಧಾರಿಯ ವೇಷ ...ಗಳೆಲ್ಲ ಸ್ವಲ್ಪಮಟ್ಟಿಗೆ ಶ್ರೀರಾಮುಲು ವನ್ನು ...ತ್ತವೆ. ಅದೇ ರಂಗುರಂಗಿನ ಶರ್ಟ್ ಮತ್ತು ...ಸಿನಿಮಾ ನಟನ ಸ್ಟೈಲು. "ನೋಡು, ...ವ ಆಟವೂ ಇಲ್ಲ ನಡೆಯುವುದಿಲ್ಲ" ...ಶ್ರೀರಾಮುಲು ಸರ್ಕಾರಿ ಅಧಿಕಾರಿ ...ನನ್ನು ಟಿವಿ ಚಾನೆಲ್ ಒಂದು ಕ್ಯಾಮರಾ ...ಬೆದರಿಸಿದ್ದಂತೆ ಈತನೂ ಪೃಥ್ವಿ ಆಫೀಸಿಗೆ ...ಬೆದರಿಸುತ್ತಾನೆ. ಆದರೆ ಇದು ಸಿನಿಮಾ ...ವುದರಿಂದ ಆತನಿಗೆ ಪೃಥ್ವಿ ಸಮಾ ಒದ್ದು ಓಡಿಸುತ್ತಾನೆ.





ಶ್ರೀರಾಮುಲು ಪಾತ್ರದಲ್ಲಿ ಜಾನ್ ಕೊಕಿನ್

...ನಾರ್ದನ ರೆಡ್ಡಿಯನ್ನು ಪ್ರತಿನಿಧಿಸುವ ಶಾಸಕ ನರಸಿಂಹ ಮತ್ತು ಶ್ರೀರಾಮುಲುವಿನ ...ಗಿರಿಯನ್ನು ಪ್ರತಿನಿಧಿಸುವ ಪಾತ್ರಗಳಿಗೆ ಚಿತ್ರದಲ್ಲಿ 'ರೆಡ್ಡಿ' ಎಂದು ಹೆಸರಿಟ್ಟಿಲ್ಲ. ...ಅವರುಗಳಿಗೆ 'ನಾಯ್ಕ' ಎಂದು ಹೆಸರನ್ನು ನೀಡಲಾಗಿದೆ. ವಾಸ್ತವದಲ್ಲಿ ...ಮುಲು ನಾಯ್ಕ ಸಮುದಾಯಕ್ಕೆ ಸೇರಿರುವುದು ಕಾಕತಾಳೀಯವಲ್ಲ ...ದಿಲ್ಲವೆ? ಹಾಗೆಯೇ ನಿಜಜೀವನದಲ್ಲಿ ಜನಾರ್ದನ ರೆಡ್ಡಿ ಮತ್ತು ಶ್ರೀರಾಮುಲು ...ಕರಲ್ಲದಿದ್ದರೂ 'ಆಪ್ತ'ರಾಗಿರುವುದರಿಂದ ಅವರನ್ನು ಚಿತ್ರದಲ್ಲಿ 'ಸಹೋದರರು' ...ತೋರಿಸಿರುವುದೂ ಆಕಸ್ಮಿಕವಲ್ಲ!

...ಚಿತ್ರದಲ್ಲಿನ ನರಸಿಂಹ ನಾಯ್ಕನ ಪಾತ್ರ ಮತ್ತು ರಾಜ್ಯ ರಾಜಕಾರಣದಲ್ಲಿ ...ನ ರೆಡ್ಡಿ ಪಡೆದಿರುವ ಪ್ರಾಮುಖ್ಯತೆ ಎರಡೂ ಒಂದೇ ಎಂಬುದನ್ನು ...ಡೈಲಾಗ್‌ಗಳು ಸಾಬೀತುಪಡಿಸುತ್ತವೆ. ಅವ್ಯವಹಾರದ ತಾಣಗಳಾಗಿರುವ ...ಲೈಸೆನ್ಸ್‌ಗಳನ್ನು ಬಂದ್ ಮಾಡಿರುವ ಡಿಸಿಯನ್ನು ಅಲ್ಲಿಂದ ಕಿತ್ತೊಗೆಯಬೇಕೆಂದು ...ನಾಯ್ಕ ಗೃಹಮಂತ್ರಿಗೆ ಒಮ್ಮೆ ಫೋನ್ ಮೂಲಕ ಹೇಳುತ್ತಾನೆ. ಅದ್ಯಾವುದೋ ...ನ್ನು ನೀಡುವ ಗೃಹಮಂತ್ರಿ ಸಾಧ್ಯವಿಲ್ಲ ಅನ್ನುತ್ತಾನೆ. ಆಗ ನರಸಿಂಹ ನಾಯ್ಕ "ಚುನಾವಣೆಗೆ ನಮ್ಮ ಹಣ ಬೇಕು, ಎಂಎಲ್‌ಎಗಳನ್ನು ಖರೀದಿಸುವುದಕ್ಕೆ ನಮ್ಮ ಹಣ ಬೇಕು. ಆದರೂ ಓರ್ವ ಸರ್ಕಾರಿ ಅಧಿಕಾರಿಯನ್ನು ವರ್ಗಾವಣೆ ಮಾಡಕ್ಕಾಗಲ್ಲ ಅಂದ್ರೆ ಏನ್ರಿ?" ಎಂದು ಪ್ರಶ್ನಿಸುತ್ತಾನೆ. ರೆಡ್ಡಿಗಳ ಹಣದಿಂದ 'ಆಪರೇಷನ್ ಕಮಲ' ಸಾಧಿಸಿ ತನ್ನ ಅಧಿಕಾರವನ್ನು ಗಟ್ಟಿಮಾಡಿಕೊಂಡ ಯಡ್ಡಿಯ ಬಿಜೆಪಿ ಸರ್ಕಾರವನ್ನೇ ಈ ಡೈಲಾಗ್ ಬಿಂಬಿಸುತ್ತದೆ. ಆಗಲೂ ಮಂತ್ರಿ ಅಸಹಾಯಕತೆ ವ್ಯಕ್ತಪಡಿಸುವಾಗ "ಈ ಚುನಾವಣೆಗಳು ಮುಗಿಯಲಿ. ಅನಂತರ ಇವನನ್ನು ತೆಗೆದುಹಾಕಿ ನಮಗೆ ಬೇಕಾದವರನ್ನೇ ಮುಖ್ಯಮಂತ್ರಿ ಸ್ಥಾನದಲ್ಲಿ ಕೂರಿಸೋಣ" ಎನ್ನುತ್ತಾನೆ ನಾಯ್ಕ. ಕಳೆದ ಅಕ್ಟೋಬರ್ ತಿಂಗಳಲ್ಲಿ ಯಡಿಯೂರಪ್ಪನಿಗೆ ಇದೇ ರೆಡ್ಡಿ ಗ್ಯಾಂಗ್ ಏನನ್ನು ಮಾಡಿತು ಎಂದು ಇಡೀ ರಾಜ್ಯಕ್ಕೆ ಗೊತ್ತಿರುವ ವಿಚಾರ.

ಇನ್ನೊಂದು ದೃಶ್ಯದಲ್ಲಿ ನರಸಿಂಹ ನಾಯ್ಕ ಗೃಹ ಮಂತ್ರಿ ಜೊತೆ ಫೋನ್‌ನಲ್ಲಿ ಮಾತನಾಡುತ್ತಿರುವಾಗ ಅವನ ಪಕ್ಕ ನಿಂತಿರುವ ಮತ್ತೋರ್ವ ಗಣಿ ಧಣಿ ತನ್ನ ನಾಯಿಗಳಿಗೆ ಬಿಸ್ಕತ್‌ಗಳನ್ನು ಬಿಸಾಡುತ್ತಿರುತ್ತಾನೆ. ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳ ಮೂಲಕ ಆಯ್ಕೆಯಾಗಿರುವವರ ಬಗ್ಗೆ ಗಣಿ ಮಾಲೀಕರಿಗೆ ಇರುವ ಉದಾಸೀನವನ್ನು ಈ ದೃಶ್ಯ ಬಿಂಬಿಸುತ್ತದೆ.

ಇನ್ನೊಂದು ದೃಶ್ಯದಲ್ಲಿ ಗೃಹಸಚಿವನ ಪಾತ್ರದಲ್ಲಿರುವ ಸಿ.ಆರ್.ಸಿಂಹ ಗಣಿಧಣಿಗಳ ರಾಜಕೀಯ ಒತ್ತಾಯಗಳ ಬಗ್ಗೆ ಮಾತನಾಡುತ್ತಾ "ನಲ್ವತ್ತು ವರ್ಷಗಳಿಂದ ಚಡ್ಡಿ ಹಾಕಿಕೊಂಡು ರಾಜಕಾರಣ ಮಾಡಿದ ನಾನು ಈಗ ಇದ್ದಕ್ಕಿದ್ದಂತೆ ಎಲ್ಲಿಂದಲೋ ಬಂದವರ ಮಾತುಗಳನ್ನು ಕೇಳಬೇಕಾಗಿ ಬಂದಿದೆಲ್ರಿ" ಎಂದು ಉದ್ಗಾರವೆತ್ತುತ್ತಾನೆ. ಇಲ್ಲಿ ಸಿ.ಆರ್.ಸಿಂಹನ ಪಾತ್ರ ಗೃಹಸಚಿವ ಆಚಾರ್ಯನನ್ನೂ ಮುಖ್ಯಮಂತ್ರಿ ಯಡಿಯೂರಪ್ಪನನ್ನೂ ಏಕಕಾಲದಲ್ಲಿ ಸೂಚಿಸುತ್ತದೆ.

▶▶ 12



ಕನ್ನಡಿಗರ ಭೀತಿಯಲ್ಲಿ ರೆಡ್ಡಿಗಳು?

ಈಗ ರಾಜ್ಯಾದ್ಯಂತ ಹರಡಿರುವ ಮಾತು ಯಾವುದೆಂದರೆ 'ಪೃಥ್ವಿ' ಚಿತ್ರ ಬಳ್ಳಾರಿಯ ಗಣಿ ರೆಡ್ಡಿಗಳ ಬುಡದಲ್ಲೇ ಸ್ಫೋಟಗೊಂಡಿರುವ ಬಾಂಬ್!


ಆದರೂ ಬಳ್ಳಾರಿಯ ಗಣಿ ರೆಡ್ಡಿಗಳ ಗ್ಯಾಂಗ್ ಈ ಚಿತ್ರದ ವಿರುದ್ಧ ತುಟಿಪಿಟಿಕ್ ಅನ್ನದೇ ಸುಮ್ಮನಿರುವುದೇಕೆ?

ಅದಕ್ಕೆ ಉತ್ತರ 'ರಾಜ್‌ಭೀತಿ'!

ಅಕಸ್ಮಾತ್ ಪುನೀತ್ ರಾಜ್‌ಕುಮಾರ್ ನಟಿಸಿರುವ ಈ ಚಿತ್ರದ ವಿರುದ್ಧ ರೆಡ್ಡಿ ಗ್ಯಾಂಗ್ ಚಕಾರವೆತ್ತಿದ್ದರೆ ಅದು ರಾಜ್‌ಕುಮಾರ್ ಅವರ ಸಂಸಾರದ ವಿರುದ್ಧವೇ ಪ್ರತಿಭಟಿಸಿದಂತೆ. ಆಗ ರಾಜ್ ಅಭಿಮಾನಿಗಳು ಮಾತ್ರವಲ್ಲ, ಎಲ್ಲಾ ಕನ್ನಡಿಗರೂ ರೆಡ್ಡಿಗಳ ವಿರುದ್ಧ ತಿರುಗಿಬೀಳುತ್ತಾರೆ.

ಗಣಿ ಲೂಟಿ ಹಣದಿಂದ ರೆಡ್ಡಿ ಗ್ಯಾಂಗಿಗೆ ಶಾಸಕರನ್ನು ಖರೀದಿಸುವುದು ಸುಲಭದ ಮಾತಾಗಿರಬಹುದು; ಅಧಿಕಾರವನ್ನು ಪಡೆಯುವುದೂ ಚಿಟಿಕೆ ಹೊಡೆದಷ್ಟೇ ಸಲೀಸಾಗಿರಬಹುದು. ಆದರೆ ಮೂಲತಃ ಆಂಧ್ರದ ತೆಲುಗುವಾಲಾಗಳಾದ ತಮ್ಮನ್ನು 'ಕನ್ನಡ ವಿರೋಧಿ' ಮತ್ತು 'ಕನ್ನಡಿಗರ ದ್ರೋಹಿ' ಎಂಬ ಆರೋಪದಿಂದ ಕೋಟ್ಯಂತರ ರೂಪಾಯಿಗಳೂ ಬಚಾವು ಮಾಡುವುದಿಲ್ಲ ಎಂಬ ಅರಿವು ರೆಡ್ಡಿ ಗ್ಯಾಂಗಿಗೆ ಇದೆ.

ಆದ್ದರಿಂದ ಪ್ರತಿ ದಿನ ನೂರಾರು ಚಿತ್ರಮಂದಿರಗಳಲ್ಲಿ ತಮ್ಮ ಮಾನ ಹರಾಜಾಗುತ್ತಿದ್ದರೂ ಅವರು ವಿಧಿ ಇಲ್ಲದೆ ತೆಪ್ಪಗಿದ್ದಾರೆ....



ರೆಡ್ಡಿಗಳಿಗೆ ಸೆಡ್ಡು ಹೊಡೆದ ಜೇಕಬ್ ವರ್ಗೀಸ್

ಕನ್ನಡದ ಯಾವ ಪ್ರಖ್ಯಾತ-ಕುಖ್ಯಾತ ನಿರ್ದೇಶಕನೂ ಮಾಡದಂತಹ 'ಪೃಥ್ವಿ' ಚಿತ್ರವನ್ನು ಮೂಲತಃ ಕೇರಳದವರಾದ ನಿರ್ದೇಶಕ ಜೇಕಬ್ ವರ್ಗೀಸ್ ಮಾಡಿ ತೋರಿಸಿದ್ದಾರೆ.

ಈ ಜೇಕಬ್ ವರ್ಗೀಸ್ ಯಾರೆಂದು ನೋಡಿದರೆ ಅಚ್ಚರಿ ಆಗುತ್ತದೆ. ಈ ಯುವಕ ಈ ಹಿಂದೆ ನಿರ್ದೇಶಿಸಿರುವುದು 'ಸವಾರಿ' ಎಂಬ ಒಂದೇ ಚಿತ್ರವನ್ನು. ಅದು ಕೂಡ ತೆಲುಗು ಚಿತ್ರವೊಂದರ ರೀಮೇಕ್ ಆಗಿತ್ತು.

ಆದರೆ ಅದಕ್ಕೂ ಮುನ್ನ ಜೇಕಬ್ 2006 ರಲ್ಲಿ 'ಅಂಧಿಯಮ್' ...) ಎಂಬ 15 ನಿಮಿಷಗಳ ಕಿರುಚಿತ್ರವನ್ನು ಮಾಡಿದ್ದರು. ಅಪರಾಧಿಗಳನ್ನು ಗಲ್ಲಿಗೇರಿಸುವ ಮನುಷ್ಯನೊಬ್ಬನ ...ಸಿಕ ತೊಳಲಾಟವನ್ನು ಕುರಿತ 'ಅಂಧಿಯಮ್'ಗೆ ಅತ್ಯುತ್ತಮ ಚೊಚ್ಚಲ ಕಿರುಚಿತ್ರ ವಿಭಾಗದಲ್ಲಿ ರಾಷ್ಟ್ರೀಯ ... ಮತ್ತು ರಜತ ಕಮಲ ದೊರಕಿತ್ತು. ಆ ಕಿರುಚಿತ್ರ ಅನೇಕ ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲೂ ...ವಹಿಸಿತ್ತು.

...ಅನಂತರ, 2008 ರಲ್ಲಿ ಜೇಕಬ್ ಅವರು ಕನ್ನಡದಲ್ಲೇ 'ಪುಟ್ಟಿ' ಎಂಬ 14 ನಿಮಿಷಗಳ ಚಿತ್ರವನ್ನು ...ದೇಶಿಸಿದ್ದರು. ಮಾಂಟ್ರಿಯಲ್ ಮತ್ತು ಸ್ಪೇನ್ ದೇಶದ ಆಲ್ಪ್ಸ್‌ಗಳಲ್ಲಿ ನಡೆದ ಚಿತ್ರೋತ್ಸವಗಳಲ್ಲಿ ಭಾಗವಹಿಸಿದ್ದ ...'ಗೆ ಪ್ಯಾರಿಸ್ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಅತ್ಯುತ್ತಮ ಕಿರುಚಿತ್ರ ಪ್ರಶಸ್ತಿಯೂ ದೊರಕಿತ್ತು.

...ಈಗ ಈ ಜೇಕಬ್ ವರ್ಗೀಸ್ ಎಂಬ ಯುವಕ 'ಪೃಥ್ವಿ' ಮೂಲಕ ಬಳ್ಳಾರಿ ರೆಡ್ಡಿ ಗ್ಯಾಂಗಿನ ಗಣಿ ...ಯನ್ನೂ, ಯಡಿಯೂರಪ್ಪನ ಬಿಜೆಪಿ ಸರ್ಕಾರದ ಭಂಡತನವನ್ನೂ ಕನ್ನಡಿಗರ ಮುಂದೆ ಬೆಳ್ಳಿ ತೆರೆ ಮೇಲೆ ...ದ್ದಾರೆ.

... ಈ ಚಿತ್ರಕ್ಕೆ ಸ್ಫೂರ್ತಿ ಮತ್ತು ಧೈರ್ಯ ಎಲ್ಲಿಂದ ಬಂತು ಅಂತ ಜೇಕಬ್‌ನನ್ನೇ ಕೇಳೋಣವೆಂದರೆ ಆತ ... ಕೈಗೂ ಸಿಗದಂತೆ ನಾಪತ್ತೆಯಾಗಿದ್ದಾರೆ....

...ದರೂ ಈ ಮಲೆಯಾಳಿ ಯುವಕನನ್ನು ಕನ್ನಡಿಗರು ಅಭಿನಂದಿಸಲೇಬೇಕಲ್ಲವೇ.....?!



ಗೌರಿ ತ್ರಿವೇದಿಯನ್ನು ನೆನಪಿಸಿದ 'ಪೃಥ್ವಿ'

ಪುನೀತ್ ರಾಜ್‌ಕುಮಾರ್ ಜಿಲ್ಲಾಧಿಕಾರಿ ಪೃಥ್ವಿ ಕುಮಾರ್ ಪಾತ್ರಕ್ಕೆ ಎಷ್ಟು ಜೀವ ತುಂಬಿದ್ದಾರೆಂದರೆ ಆ ಚಿತ್ರವನ್ನು ನೋಡಿದ ಬಳ್ಳಾರಿಯ ಜನರೆಲ್ಲ ಹಾಲಿ ಜಿಲ್ಲಾಧಿಕಾರಿ ಬಿ.ಶಿವಪ್ಪನಿಗೆ ಹಿಡಿಶಾಪ ಹಾಕುತ್ತಿದ್ದಾರಲ್ಲದೆ, ನಿಜ ಜೀವನದಲ್ಲಿ ಪೃಥ್ವಿಯಂತೆ ಪ್ರಾಮಾಣಿಕ ಡಿಸಿ ಆಗಿದ್ದ ಗೌರಿ ತ್ರಿವೇದಿ ಎಂಬ ಐಎಎಸ್ ಅಧಿಕಾರಿಣಿಯನ್ನು ನೆನಪಿಸಿಕೊಳ್ಳುತ್ತಿದ್ದಾರೆ.

ಈ ಗೌರಿ ತ್ರಿವೇದಿ ಎಂತಹ 'ನೋ ನಾನ್‌ಸೆನ್ಸ್' ಡಿಸಿ ಆಗಿದ್ದರೆಂದರೆ ಅಂದಿನ ಬಡಾ ಗೂಂಡಾ ಆಗಿದ್ದ ಮಂಡ್ಲೂರು ದಿವಾಕರ ಬಾಬು ಅವರನ್ನೇ ತನ್ನ ಕೊಠಡಿಯಿಂದ ಒದ್ದೋಡಿಸಿ "ನನ್ನ ಅನುಮತಿ ಇಲ್ಲದೇ ಡಿಸಿ ಕೊಠಡಿಯನ್ನು ಪ್ರವೇಶಿಸಬೇಡ" ಎಂದು ಹೇಳಿದ್ದರು.

ಗೌರಿ ತ್ರಿವೇದಿಯ ಇಂತಹ ನಿಷ್ಠುರ ವರ್ತನೆಯಿಂದಲೇ ಆಗ ಆ ಜಿಲ್ಲೆಯ ಜನ ಅವರನ್ನು "ಬಳ್ಳಾರಿಯ ದುರ್ಗಿ" ಎಂದೇ ಕರೆಯುತ್ತಿದ್ದರು.

ಗೌರಿ ತ್ರಿವೇದಿಯಂತೆ ಬಳ್ಳಾರಿಯ ಪ್ರಾಮಾಣಿಕ ಡಿಸಿ ಆಗಿ ಕೆಲಸ ಮಾಡಿದ್ದ ಇನ್ನೋರ್ವ ಐಎಎಸ್ ಅಧಿಕಾರಿಯ ಹೆಸರು ವಿ. ಮಂಜುಳಾ. ಇವರು ಎಂದೂ ಹೆಚ್ಚಿಗೆ ಮಾತನಾಡಲಿಲ್ಲ, ಎಂದೂ ಪ್ರಚಾರದ ತೆವಲಿಗೆ ಬೀಳಲಿಲ್ಲ, ಬದಲಾಗಿ ಪೃಥ್ವಿ ಕುಮಾರ್‌ನಂತೆಯೇ ಕಾನೂನುಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಆ ಜಿಲ್ಲೆಯ ಜನರಿಗೊಂದಿಷ್ಟು ನೆಮ್ಮದಿ ನೀಡಲು ಪ್ರಯತ್ನಿಸಿದ್ದರು.

'ರೀಲ್ ಲೋಕದ ಪೃಥ್ವಿ ಕುಮಾರ್' ಮತ್ತು ರಿಯಲ್ ಲೋಕದ ಗೌರಿ ತ್ರಿವೇದಿ ಹಾಗೂ ವಿ. ಮಂಜುಳಾ ಅವರನ್ನಾದರೂ ನೋಡಿ ಹಾಲಿ ಬಳ್ಳಾರಿ ಡಿಸಿ ಶಿವಪ್ಪ ಒಂದಿಷ್ಟು ಬುದ್ಧಿಯನ್ನಾದರೂ ಕಲಿಯುವಂತಾಗಲಿ.

ಗುಲ್ಬರ್ಗಾ: ಮೂರ್ಖ ಎಸ್ಪಿಯಿಂದ ದಲಿತರ ಮೇಲೆ ದೌರ್ಜನ್ಯ




ಯಾವನೋ ಒಬ್ಬ ಕಿಡಿಗೇಡಿ ಮಾಡಿದ ಕೆಲಸಕ್ಕೆ ಇಡೀ ತಾರ್‌ಫೈಲ್ ಬಡಾವಣೆಯ ದಲಿತರ ಮೇಲೆ ದೌರ್ಜನ್ಯ ನಡೆಸಿ ತಮ್ಮ 'ಶೌರ್ಯ' ಮೆರೆದಿದ್ದಾರೆ ಗುಲ್ಬರ್ಗಾದ ಎಸ್.ಪಿ. ಮಹಾಶಯ ಎ. ಪದ್ಮನಯನ.

ತಾರ್‌ಫೈಲ್ ಬಡಾವಣೆಯಿಂದ ಸುಮಾರು ಎರಡೂವರೆ ಕಿ.ಮೀ. ದೂರದ ಉದಯನಗರದಲ್ಲಿ ಮಾರ್ಚ್ 9 ರಂದು ಕೃಷ್ಣಾ ಎಂಬ ಯುವಕನ ಕೊಲೆ ನಡೆದಿತ್ತು. ಆರೋಪಿಗಳೆಂದು ಶಂಕಿಸಲಾದ ಹನ್ಯಾ ಉರ್ಫ್ ಹನುಪುಲ್ಯಾ, ಹಮೀದ್, ನಿಂಗಪ್ಪ ನಾಟಿಕಾರ್, ಶಿವು ಎಂಬುವರು ಈ ಹಿಂದೆ ಕೃಷ್ಣಾನ ಅಣ್ಣನನ್ನೂ ಕೊಂದಿದ್ದರು. ಇಲ್ಲಿ ಪೊಲೀಸರು ಆರೋಪಿಗಳನ್ನು ಬಂಧಿಸುವ ಕೆಲಸ ಮಾಡಬೇಕಿತ್ತು, ಶಂಕಿತ ಆರೋಪಿಗಳ ಪೈಕಿ ಇಬ್ಬರು ತಾರ್‌ಫೈಲ್ ಬಡಾವಣೆಯ ನಿವಾಸಿಗಳು. ಇವರನ್ನು ಬಂಧಿಸಲು ಎಸ್ಪಿ ಸಮೇತ ಪೊಲೀಸ್ ಪಡೆ ಅಲ್ಲಿಗೆ ಹೋದಾಗ ಯಾವನೋ ಕಿಡಿಗೇಡಿಯೊಬ್ಬ (ಕೊಲೆಗಾರರ ಕಡೆಯವನಿರಬಹುದು) ಎಸ್ಪಿ ಕಾರ್ ಕಡೆ ಕಲ್ಲು ಬೀಸಿದ್ದಾನೆ. ಇದರಿಂದ ವ್ಯಗ್ರಗೊಂಡ ಎಸ್ಪಿ ಇಡೀ ಬಡಾವಣೆಯ ನಿವಾಸಿಗಳೆಲ್ಲ ಕೊಲೆಗಾರರೆಂಬಂತೆ ಭಾವಿಸಿ ಲಾಠಿ ಚಾರ್ಜ್‌ಗೆ ಆದೇಶ ಕೊಟ್ಟಿದ್ದಾನೆ. ಮಕ್ಕಳು, ಮುದುಕರಾದಿಯಾಗಿ ಬಡ ದಲಿತರ ಮೇಲೆ ಪೊಲೀಸರು ರಾಕ್ಷಸರ ರೂಪದಲ್ಲಿ ಎರಗಿದ್ದಾರೆ. ಮನೆಬಾಗಿಲುಗಳನ್ನು ಮುರಿದು ಮನೆಹೊಕ್ಕ ಪೊಲೀಸರು ಕೈಗೆ ಸಿಕ್ಕ ಕಟ್ಟಿಗೆ, ಕಲ್ಲುಗಳಿಂದ ಜನರಿಗೆ ಹೊಡೆದಿದ್ದಾರೆ. ಸುಮಾರು ಅರವತ್ತು ಜನ ಬಡಪಾಯಿಗಳನ್ನು ಹಣ್ಣುಗಾಯಿ ನೀರುಗಾಯಿ ಮಾಡಿ ಜೈಲಿಗಟ್ಟಲಾಗಿದೆ. ಮಧ್ಯರಾತ್ರಿ ಹೊತ್ತಿನಲ್ಲಿ ಮನೆಗೆ ನುಗ್ಗಿ ಹೆಣ್ಮಕ್ಕಳಿಗೆ ಕೆಟ್ಟ ರೀತಿಯಲ್ಲಿ ಬೈದು, ಬೂಟುಗಾಲಿನಿಂದ ಒದ್ದಿದ್ದಾರೆ. ಹುಂಬ ಎಸ್ಪಿಯೊಬ್ಬನ ಮೂರ್ಖತನಕ್ಕೆ ಬಡಪಾಯಿ ದಲಿತರು ಬಲಿಪಶುಗಳಾಗಿದ್ದಾರೆ. ಕೊಲೆಗಡುಕರನ್ನು ಬಂಧಿಸಬೇಕಾದ ಎಸ್ಪಿ ಸಾಹೇಬನ ಹುಚ್ಚಾಟಕ್ಕೆ ಕಡಿವಾಣ ಹಾಕಬೇಕಿದೆ. ಬಂಧಿತ ಅಮಾಯಕರನ್ನು ಬಿಡುಗಡೆ ಮಾಡಬೇಕಿದೆ.

ಧಾರವಾಡ: ಪಂಚಾಯ್ತಿ ಚುನಾವಣೆ ಕೈ ಬಿರುಕು, ಕಮಲ ಚುರುಕು.....

ರಾಜ್ಯ ಸರ್ಕಾರ ಇಲ್ಲೇನೂ ಅಂತಾ ಹೇಳಿಕೊಳ್ಳೋ ಕೆಲಸ ಮಾಡಿಲ್ಲ, ನೆರೆ ಹೊಡೆತಕ್ಕೆ ಸಿಕ್ಕಿ ಬಳಲಿದವರ ಬದುಕಿಗೆ ಈ ಸರ್ಕಾರ ಆಸರೆಯಾಗಿಲ್ಲ. ರಾಜ್ಯದ ಗ್ರಾಮೀಣ ಭಾಗವೇ ಕತ್ತಲ ಕೂಪವಾಗಿ ಹೋಗಿದೆ. ಸರಿಯಾಗಿ ಥ್ರೀಫೇಸ್ ವಿದ್ಯುತ್ ಸಿಗದೇ ರೈತಾಪಿ ಜನ ಬೆಳೆನಾಶ ಮಾಡಿಕೊಂಡಿದ್ದಾರೆ. ಇವರ್‍ಯಾರ ಬಗ್ಗೆಯೂ ಯೋಚಿಸದ ರಾಜ್ಯ ಬಿಜೆಪಿ ಸರ್ಕಾರ ತನ್ನ ಕುರ್ಚಿ ಗಟ್ಟಿ ಮಾಡಿಕೊಳ್ಳುವಲ್ಲಿ, ರಾಜ್ಯವನ್ನು ಲೂಟಿ ಮಾಡುವುದರಲ್ಲಿ, ಜನರ ಮಧ್ಯೆ ಗೋಡೆ ಎಬ್ಬಿಸುವ ಕೆಲಸದಲ್ಲಿ ನಿರತವಾಗಿದೆ.



ನಾಗರಾಜ ಛಬ್ಬಿ

ಇದನ್ನೆಲ್ಲ ಜನತೆಗೆ ತಲುಪಿಸಬೇಕಿದ್ದ ವಿರೋಧ ಪಕ್ಷಗಳು ಮೂರ್ಖರಂತೆ ಮಲಗಿರುವುದೇ ಬಿಜೆಪಿಗೆ ಅಡ್ವಾಂಟೇಜ್ ಆಗುತ್ತಾ ಬಂದಿದೆ. ಈಗ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ನಿಚ್ಚಳವಾಗಿ ಬಹುಮತ ಪಡೆಯುವ ಎಲ್ಲ ಅವಕಾಶಗಳಿದ್ದಾಗ್ಯೂ ಕಾಂಗ್ರೆಸ್ ಮಾತ್ರ ಎಂದಿನಂತೆ ಗುಂಪು ಜಗಳದಲ್ಲಿ ನಿರತವಾಗಿದೆ. 'ಕೈ' ತುಂಬಾ ಬಿರುಕುಗಳನ್ನಿಟ್ಟುಕೊಂಡು ಚುನಾವಣೆಗೆ ಹೊರಟಿದ್ದಾರೆ ಈ ಮಹಾಶಯರು.




ಶಂಕರ್ ಪಾಟೀಲ್

ಜಿಲ್ಲಾ ಗ್ರಾಮೀಣ ಕಾಂಗ್ರೆಸ್‌ನ ಅಧ್ಯಕ್ಷನಾಗಿರುವ ನಾಗರಾಜ ಛಬ್ಬಿಗೆ ಕಾಂಗ್ರೆಸ್ಸಿನ ಹಿರಿತಲೆಗಳ ಬೆಂಬಲ ಸಿಗುತ್ತಿಲ್ಲ. ದಶಕ ಕಾಲ ಅಧಿಕಾರದ ರುಚಿಯುಂಡಿರುವ ಎ.ಎಂ. ಹಿಂಡಸಗೇರಿ, ಎಸ್.ಆರ್. ಮೋರೆ, ಜಬ್ಬಾರ್‌ಖಾನ್ ಹೊನ್ನಳ್ಳಿ, ಶಿವಳ್ಳಿ, ಗಡ್ಡಿ, ವಿನಯಕುಲಕರ್ಣಿಗಳೆಲ್ಲ ಒಟ್ಟು ಕಾಂಗ್ರೆಸ್‌ನ ಹಿತ ಕಾಯುವುದನ್ನು ಬಿಟ್ಟು ಬರೀ ತಮ್ಮ ಹಿಂಬಾಲಕರ ಮೇಳದಲ್ಲಿ 'ನಾಯಕ'ರಾಗುತ್ತಿದ್ದಾರೆ.

ಈ ಕಾರಣದಿಂದಾಗಿಯೇ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಕಾಂಗ್ರೆಸ್ಸಿಗೆ ದಕ್ಕಿದ್ದು ಕಲಘಟಗಿ ಕ್ಷೇತ್ರವೊಂದೇ.... ಇಲ್ಲಿ ಸಂತೋಷ್ ಲಾಡ್ ತನ್ನ ಸ್ವಂತ ಹಣ ಸುರಿದು ಹಲವಾರು ಜನೋಪಯೋಗಿ ಕೆಲಸ ಮಾಡಿ ಗೆದ್ದಿದ್ದೇ ಹೊರತು ಅದಕ್ಕೆ ಕಾಂಗ್ರೆಸ್ ಕಾರಣವಾಗಿರಲಿಲ್ಲ, ಈಗ ಜಿಲ್ಲೆಯಲ್ಲಿ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಕಲಘಟಗಿಯೊಂದೇ ಕಾಂಗ್ರೆಸ್‌ನ ಕೈ ಹಿಡಿಯುವುದು ಗ್ಯಾರಂಟಿಯಾಗಿದೆ. ಲಾಡ್ ಚಾರಿಟಬಲ್ ಟ್ರಸ್ಟ್ ಮುಖಾಂತರ ನೂರಾರು ಸಾಮಾಜಿಕ ಚಟುವಟಿಕೆಗಳನ್ನು ನಡೆಸುತ್ತಿರುವ ಸಂತೋಷ್ ಲಾಡ್ ಧಾರ್ಮಿಕ ಚಟುವಟಿಕೆಗಳಿಗೆ ದಾನ ನೀಡುವ ಮೂಲಕ ಜನಪ್ರಿಯರಾಗಿದ್ದು ಯುವ ಕಾಂಗೈಗಳ ಕಣ್ಣಲ್ಲಿ ನೇತಾರರಾಗುತ್ತಿದ್ದಾರೆ. ಸುಮಾರು ಆರು ಸಾವಿರ ಆಟೋಚಾಲಕರ ವಿಮೆ ಹಣವನ್ನು ಕಟ್ಟಿರುವ ಲಾಡ್, ಹೊಲ ರಿಪೇರಿ ಮಾಡಿಸಿಕೊಳ್ಳುವ ರೈತರಿಗೆ ಉಚಿತವಾಗಿ ಬುಲ್ಡೋಜರ್ ಸೇವೆ ಒದಗಿಸುತ್ತಿದ್ದಾರೆ. ಈ ಎಲ್ಲ ಕಾರಣಗಳಿಂದ ಕಲಘಟಗಿ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಅನುಕೂಲವಾಗಲಿದೆ.

ಆದರೆ ಉಳಿದ ತಾಲೂಕುಗಳಲ್ಲಿ ಕಾಂಗ್ರೆ[...] ಜೆಡಿಎಸ್‌ಗಳ ಸೋಂಭೇರಿತನ, ಒಳಜಗಳಗಳಿಂದ[...] ಖದೀಮ ಕಮಲ ಚುರುಕುಗೊಂಡಿದೆ. ಜಿಲ್ಲೆಯ 1[...] ಗ್ರಾಮ ಪಂಚಾಯತ್‌ಗಳ ಪೈಕಿ 120 ಗ್ರಾ[...] ಪಂಚಾಯ್ತಿಗಳ 1746 ಸ್ಥಾನಗಳಿಗೆ ಮೇ 12 ರಂ[...] ಚುನಾವಣೆ ನಡೆಯಲಿದೆ. ಇಲ್ಲಿವರೆಗೂ ಪಂಚಾಯ[...] ಸಂಸ್ಥೆಗಳಲ್ಲಿ ಬೇರು ಬಿಡದ ಬಿಜೆಪಿ ಈಗ. ಹಲವಾ[...] ಆಮಿಷಗಳನ್ನೊಡ್ಡುತ್ತಾ ಆಡಳಿತ ಯಂತ್ರವ[...] ದುರುಪಯೋಗಮಾಡಿಕೊಳ್ಳುತ್ತಾ ಪಂಚಾಯತಿಗಳ[...] ಹೊಕ್ಕಲು ಹವಣಿಸುತ್ತಿದೆ. ನವಲಗುಂದ ತಾಲೂಕಿನ[...] ಬಿಜೆಪಿ ಶಾಸಕ ಶಂಕರ ಪಾಟೀಲ್ ಮುನೇನಕೊ[...] ಈಗಾಗಲೇ ಅಲ್ಲಿನ 19 ಗ್ರಾಪ ಪಂಚಾಯ್ತಿಗಳಲ್ಲಿ[...] ರ ಮೇಲೆ ಹಿಡಿತ ಸಾಧಿಸುತ್ತಿದ್ದಾನೆ. ಆದರೆ ಕಾಂಗ್ರೆಸ್[...] ಗಡ್ಡಿ ಇನ್ನೂ ನಿದ್ದೆಯಿಂದ ಎದ್ದಿ[...] ಧಾರವಾಡ ಗ್ರಾಮೀಣ ಕ್ಷೇತ್ರ[...] ಬಿಜೆಪಿಯ ಶಾಸಕಿ ಸೀಮಾ ಮ[...] ತಿಯ ಧಿಮಾಕಿನ ಕಾರಣದಿ[...] ಕಾಂಗ್ರೆಸ್ಸಿಗೆ ಲಾಭವಾ[...] ಬಹುದೇನೋ. ಕಲಘಟಗಿಯ[...] ಶಿವಳ್ಳಿ ಶ್ರಮವಹಿಸಿದರೆ ಅ[...] ಕಾಂಗ್ರೆಸ್‌ಗೆ ಅನುಕೂಲವಾ[...] ಬಹುದು.



ಸಂತೋಷ್ ಲಾಡ್

ಇನ್ನು ಜೆಡಿಎಸ್‌ನ ಬಸವರ[...] ಹೊರಟ್ಟಿಯು ಕಣ್ಣಿಗೆ ಕೋಸರ[...] ಕೊರವಿ ರಾಜಣ್ಣಗಳನ್ನು ಬಿ[...] ಬೇರೆ ಕಾರ್ಯಕರ್ತರು ಕಾಣೊ[...] ಇಲ್ಲ.

ಅವಿರೋಧ ಆಯ್ಕೆ ನಡೆಯುವ ಗ್ರಾ[...] ಪಂಚಾಯ್ತಿಗಳಿಗೆ ಅನುದಾನ, ಸಾದರ ಲಿಂಗಾಯತ[...] ಮೀಸಲಾತಿ ಡ್ರಾಮಾ ಇತ್ಯಾದಿ ಆಮಿಷಗಳ ಮೂ[...] ಕೋಟಿ ಕೋಟಿ ದುಡ್ಡು ಹರಿಸುವುದರ ಮೂ[...] ಕಮಲ ಅರಳಲು ತಯಾರಾಗಿದೆ. ಈಗಲಾದ[...] ಕಾಂಗ್ರೆಸ್ ಎಚ್ಚರಗೊಂಡು ಒಳಜಗಳ ಮರೆತು ಒಗ್ಗ[...] ಹೋರಾಡಿದರೆ ಕಮಲಕ್ಕೆ ಬ್ರೇಕ್ ಹಾಕಬಹುದು[...]





11

ಗಡಿ ಅತಿಕ್ರಮಣದ ಸರ್ವೆ ಮತ್ತು 'ಪೃಥ್ವಿ' ಕುಮಾರ್

ರಾಜ್ಯದ ಗಡಿಯನ್ನೇ ರೆಡ್ಡಿ ಗ್ಯಾಂಗ್ ನಾಶ ಮಾಡಿರುವುದನ್ನು ಕುರಿತು ಕೇಂದ್ರದ ತಂಡವೊಂದು ಈಗ ತನಿಖೆ ನಡೆಸುತ್ತಿದೆಯಲ್ಲವೇ? ಹಾಗೆಯೇ 'ಪೃಥ್ವಿ' ಚಿತ್ರದಲ್ಲೂ ಗಣಿ ಧಣಿಗಳು ತಮ್ಮ ಲಾಭಕ್ಕಾಗಿ ರಾಜ್ಯದ ಗಡಿಯನ್ನೇ ನುಂಗಿರುವುದಾಗಿ ತೋರಿಸಲಾಗಿದೆ.

ಒಂದು ಸಮಕಾಲೀನ ವಿಷಯದ ಬಗ್ಗೆ ಚಲನಚಿತ್ರ ಮಾಡುವಾಗ ಅದು ಸಾಕ್ಷ್ಯಚಿತ್ರದ ರೂಪ ಪಡೆಯುವ ಅಪಾಯಗಳಿರುತ್ತವೆ. ಅಂತಹ ಅಪಾಯದ ಸೂಚನೆಗಳು ಕಂಡುಬಂದಾಗಲೆಲ್ಲ ನಿರ್ದೇಶಕ ಜೇಕಬ್ ಎಚ್ಚರಗೊಂಡು ಅದನ್ನು ಮತ್ತೆ ದಾರಿಗೆ ಎಳೆಯುತ್ತಾರೆ. ಇನ್ನು ಒಂದು ಕಮರ್ಷಿಯಲ್ ಚಿತ್ರಕ್ಕೆ ಬೇಕಿರುವ ಮೂರು ಫೈಟು, ನಾಲ್ಕು ಹಾಡುಗಳೂ ಈ ಚಿತ್ರದಲ್ಲಿವೆ. ಹಾಗೆಂದಮಾತ್ರಕ್ಕೆ ಅವರು ಕಮರ್ಷಿಯಲ್ ದೃಷ್ಟಿಗೇ ಒತ್ತುಕೊಟ್ಟಿಲ್ಲ. ಯಾವ ದೃಶ್ಯಕ್ಕೆ ನೈಜ ಚಿತ್ರಣದ ಅವಶ್ಯಕತೆ ಇದೆ (ಉದಾಹರಣೆಗೆ ಬಡವರ ಮಕ್ಕಳ ಶಾಲೆ) ಎಂಬುದನ್ನು, ಯಾವುದಕ್ಕೆ ಕಮರ್ಷಿಯಲ್ ಟಚ್ ಬೇಕಿದೆ (ಹಾಡು, ಡ್ಯಾನ್ಸ್, ಫೈಟ್, ವಿಲನ್‌ನ ಡೆನ್ ಇತ್ಯಾದಿ) ಎಂಬುದನ್ನು ಮರೆಯದೇ ಅವುಗಳನ್ನು ಹಾಗೆಯೇ ತೋರಿಸಿದ್ದಾರೆ.

ಪುನೀತ್ ರಾಜ್‌ಕುಮಾರ್ ಬಗ್ಗೆ ಹೇಳದಿದ್ದರೆ ಅದು ಅಕ್ಷಮ್ಯ ಅಪರಾಧವಾಗುತ್ತದೆ. ಪವರ್ ಸ್ಟಾರ್ ಪುನೀತ್ "ನಾನು ಬಿನ್ ಲಾಡೆನ್ ಅಲ್ವೇ ಅಲ್ಲ" ಹಾಡಿನಿಂದ ಬಹುದೂರ ಬಂದು, ಅಪಾರ ಪ್ರಬುದ್ಧತೆ ತೋರಿದ್ದಾರೆ ಈ ಚಿತ್ರದಲ್ಲಿ, ಓರ್ವ ಯುವ ಪ್ರಾಮಾಣಿಕ ಅಧಿಕಾರಿ ಹೇಗಿರಬೇಕೋ ಹಾಗೆಯೇ ಇದ್ದಾರೆ 'ಪೃಥ್ವಿ' ಆಗಿ. ತನ್ನ ಇಮೇಜ್ ಮತ್ತು ಅಭಿಮಾನಿಗಳ ನಿರೀಕ್ಷೆಗಳನ್ನು ಬದಿಗಿಟ್ಟು ಇಂತಹ ಹೊಸ ಸಾಹಸದಲ್ಲಿ ಅವರು ಭಾಗವಹಿಸಿರುವುದು ಶ್ಲಾಘನೀಯ. ಅವರ ಈ ಸಾಹಸವನ್ನು ನೋಡಿ ಕನ್ನಡದ ಇತರೆ ನಟರಾದ ದರ್ಶನ್, ಸುದೀಪ್, ಗಣೇಶ್, ವಿಜಯ್ ಕೂಡ ಇಂತಹ ಚಿತ್ರಗಳೊಂದಿಗೆ ಕೈಜೋಡಿಸುವಂತಾದರೆ ಅದರಿಂದ ಕನ್ನಡ ಚಿತ್ರೋದ್ಯಮಕ್ಕೆ, ರಾಜ್ಯದ ರಾಜಕೀಯ ಮತ್ತು ಸಾಂಸ್ಕೃತಿಕ ವಲಯಕ್ಕೆ ಒಳ್ಳೆಯದಾಗುತ್ತದೆ.

ಒಟ್ಟಾರೆಯಾಗಿ ಗಣಿ ಧಣಿ ರೆಡ್ಡಿ ಗ್ಯಾಂಗಿನ ನೈಜ ಚಿತ್ರವನ್ನು ಬೆಳ್ಳಿತೆರೆ ಮೇಲೆ ನೀಡುವ ಮೂಲಕ ದಿನದಿಂದ ದಿನಕ್ಕೆ ಹದಗೆಡುತ್ತಿರುವ ರಾಜ್ಯದ ರಾಜಕೀಯ ವ್ಯವಸ್ಥೆ ಬಗ್ಗೆ ಅರಿವು ಮೂಡಿಸುವ 'ಪೃಥ್ವಿ' ಚಿತ್ರ ಮಾಡಿದ್ದಕ್ಕೆ ನಿರ್ಮಾಪಕ ಸೂರಪ್ಪ ಬಾಬು ಮತ್ತು ನಿರ್ದೇಶಕ ಜೇಕಬ್ ವರ್ಗೀಸ್ ಅವರಿಗೆ ಅಭಿನಂದನೆಗಳು.

ಹಾಗೆಯೇ ಪುನೀತ್ ರಾಜ್‌ಕುಮಾರ್‌ಗೆ ಹ್ಯಾಟ್ಸ್ ಆಫ್!!

ಬಳ್ಳಾರಿಯ 'missing' ಕೇಸ್‌ಗಳು


'ಪೃಥ್ವಿ' ಚಿತ್ರದಲ್ಲಿ ಎರಡು 'missing' ಕೇಸ್‌ಗಳು ಬರುತ್ತವೆ. ಒಂದು ಸರ್ವೇಯರ್‌ನದು. [illegible] ನಾಯಕನನ್ನು ಟೀರೋ [illegible] ಸಮೇತ ಗಣಿಯಲ್ಲೇ ಹೂತು [illegible] 'missing' ಆಗುವಂತ [illegible]

[illegible]

ಉದಾಹರಣೆಗೆ 2010 ರ ಜನವರಿ ತಿಂಗಳಿನಿಂದ ಮಾರ್ಚ್ ಅಂತ್ಯದವರೆಗೆ ಬಳ್ಳಾರಿಯ ಹೊಸಪೇಟೆ ಮತ್ತು ಸಂಡೂರ್ ಪ್ರದೇಶಗಳಿಂದಲೇ 25ಕ್ಕೂ ಹೆಚ್ಚು ಜನ ನಾಪತ್ತೆಯಾಗಿದ್ದಾರೆ. ಆದರೆ ಪೊಲೀಸರು ಈ ಎಲ್ಲಾ 'missing' ಪ್ರಕರಣಗಳನ್ನು ಕುರಿತು ದೂರುಗಳನ್ನು ದಾಖಲಿಸಿಕೊಳ್ಳುವ ಬದಲಾಗಿ ಕೇವಲ ಎರಡನ್ನು ಮಾತ್ರ ರಿಜಿಸ್ಟರ್ ಮಾಡಿಕೊಂಡಿದ್ದಾರೆ.

ಹಾಗಾದರೆ ಇತರರೆಲ್ಲಾ ಎಲ್ಲಿ ನಾಪತ್ತೆಯಾದರು? ಬಲ್ಲವರ ಪ್ರಕಾರ ಗಣಿ ವ್ಯವಹಾರದಲ್ಲಿ ಅಡಚಣೆ ಉಂಟುಮಾಡಿದವರಿಗೆಲ್ಲಾ ಚಿತ್ರದ ಕೊನೆಯಲ್ಲಿ ಆಗುವುದೇ ಆಗುತ್ತದೆ. ಅಂತಹ ಅದೆಷ್ಟು ಶವಗಳು ಗಣಿ ಧೂಳಿನಲ್ಲಿ ಬೆರೆತುಹೋಗಿವೆಯೋ.

ಆದರೆ ಒಂದಂತೂ ಸ್ಪಷ್ಟ. ಚಿತ್ರದಲ್ಲಿ ನಾಯಕ ಗೆದ್ದರೆ, ಬಳ್ಳಾರಿಯಲ್ಲಿ ಇವತ್ತು ಗೆಲುವು ಸಾಧಿಸುತ್ತಿರುವುದು ಈ ರಾಜ್ಯದ ಗಣಿ ವಿಲನ್‌ಗಳು.



ಬಳ್ಳಾರಿಯಲ್ಲೂ ಗೆದ್ದ 'ಪೃಥ್ವಿ'

ಈಗೀಗ ಸಂಪೂರ್ಣವಾಗಿ ತೆಲುಗುಮಯವಾಗಿರುವ ಬಳ್ಳಾರಿ ಜಿಲ್ಲೆಯ[...] ಇತ್ತೀಚೆಗೆ ಯಾವ ಕನ್ನಡ ಸಿನಿಮಾಗೂ ದೊರಕದಷ್ಟು ಪ್ರತಿಕ್ರಿಯೆ 'ಪೃಥ್ವಿ' ಚಿ[...] ಸಿಕ್ಕಿದೆ.

ಅಲ್ಲಿನ ಚಿತ್ರಮಂದಿರಗಳಲ್ಲಿ ಹೌಸ್‌ಫುಲ್ ಶೋಗಳನ್ನು 'ಪೃಥ್ವಿ' ಕಾಣುತ್ತಿ[...] ಈ ಚಿತ್ರ ತಮ್ಮ ಜಿಲ್ಲೆಯ ಬಗ್ಗೆಯಂತೆ, ರೆಡ್ಡಿಗಳ ಲೂಟಿ ಬಗ್ಗೆಯಂತೆ ಎ[...] ಸುದ್ದಿ ಬಾಯಿಮಾತಿನಲ್ಲೇ ಜಿಲ್ಲೆಯಾದ್ಯಂತ ಹಬ್ಬಿದ ಪರಿಣಾಮ ಕನ್ನಡ ಚಿತ್ರಗ[...] ತಲೆ ಹಾಕಿಯೂ ಮಲಗದಿದ್ದ ಜನರೆಲ್ಲ ಇದನ್ನು ನೋಡಲು ಬರುತ್ತಿದ್ದಾ[...] ಎಲೈಟ್ ಜನ ಸಹ ತಮ್ಮ ಕಾರುಗಳಲ್ಲಿ ಬಂದು 'ಪೃಥ್ವಿ'ಯನ್ನು ಮೆಚ್ಚುತ್ತಿದ್ದಾ[...]

ಈ ಜಿಲ್ಲೆಯಲ್ಲಿ ರೆಡ್ಡಿ ಗ್ಯಾಂಗಿನ ವಿರುದ್ಧದ ಆಕ್ರೋಶ ಎಷ್ಟು ಮಡುಗಟ್ಟ[...] ಎಂದರೆ ಮೋತಿ ಥಿಯೇಟರ್ ಮುಂದೆ ಯು. ಹನುಮೇಶ್ ಎಂಬ ಯಾವುದೋ[...] ಕನ್ನಡಪರ ಸಂಘಟನೆಯ ಉಪಾಧ್ಯಕ್ಷ 'ಬಳ್ಳಾರಿಯಲ್ಲಿ 'ಪೃಥ್ವಿ' ಶತದಿನೋತ್ಸವವ[...] ಆಚರಿಸಲಿ' ಎಂದು ಹಾರೈಸಿ ದೊಡ್ಡ ಫ್ಲೆಕ್ಸ್ ಅನ್ನು ಹಾಕಿಸಿದ್ದಾನೆ. ಆ[...] ರೆಡ್ಡಿಗಳ ಬಗೆಗಿನ ಭಯ ಯಾವ ಮಟ್ಟದ್ದೆಂದರೆ ಈ ಪುಣ್ಯಾತ್ಮ ತನ್ನ ಹೆಸರ[...] ಮಾತ್ರ ಫ್ಲೆಕ್ಸ್‌ನಲ್ಲಿ ಹಾಕಿಸಿದ್ದಾನೆಯೇ ಹೊರತು ತನ್ನ ಫೋಟೋವನ್ನು ಹಾಕಿಸಿ[...]

ವಿಚಿತ್ರವೆಂದರೆ, ಈ ಚಿತ್ರವನ್ನು ನೋಡಲು ರೆಡ್ಡಿ ವಿರೋಧಿಗಳು ಮ[...] ಧಾವಿಸುತ್ತಿಲ್ಲ, ತಮ್ಮ ಗುರು ಮತ್ತವನ ಚೇಲಾನನ್ನೂ ಮತ್ತು ತಮ್ಮಂತಹ [...] ಪಟಾಲಂನ ಪುಂಡರನ್ನು ಹೇಗೆ ಚಿತ್ರಿಸಿದ್ದಾರೆ ಎಂಬ ಕುತೂಹಲದಿಂದ ಇದ[...] ನೋಡಲು ಅವರೂ ಚಿತ್ರಮಂದಿರಕ್ಕೆ ಲಗ್ಗೆ ಇಟ್ಟಿದ್ದಾರೆ!



→ 15

ಹರಾಜಾಗುತ್ತಿರುವ ಗ್ರಾಮ ಪಂಚಾಯತಿಗಳು

...ತ್ತು ರಾಜಕೀಯ ಸಬಲೀಕರಣದ ಉಪಕರಣಗಳನ್ನಾಗಿ ...ಸಿಕೊಂಡಿದ್ದರು. ಆದರೆ ಅವು ಜಾತಿ, ವರ್ಗ ಮತ್ತು ...ಗಾಧಿಕಾರಗಳ ಅಧಿಕಾರ ಪೈಪೋಟಿಯ ಕೇಂದ್ರಗಳಷ್ಟೇ ...ವೆ. ಅದರಲ್ಲೂ 1967ರಲ್ಲಿ ಅವರ ನಿಧನರಾದ ...ತರದ ನಾಲ್ಕು ದಶಕಗಳಲ್ಲಿ ಭಾರತದ ಗ್ರಾಮಗಳಲ್ಲಿ ...ಪುಗೊಂಡ ಹೊಸ ರಾಜಕೀಯ ಸಮೀಕರಣಗಳು ...ಕೇಂದ್ರೀಕರಣದ ಉಪಕರಣಗಳನ್ನೇ ಜಾತಿ ಮತ್ತು ವರ್ಗ ...ವಸ್ಥೆಯ ಕೇಂದ್ರೀಕರಣದ ಮತ್ತು ಸದೃಢೀಕರಣದ ...ಪಕರಣಗಳನ್ನಾಗಿ ಮಾಡಿಕೊಂಡಿವೆ.


ಇದರರ್ಥ ವಿಕೇಂದ್ರೀಕರಣ ಬೇಡವೆಂತಲ್ಲ, ವಿಕೇಂದ್ರೀ...ಣದ ರಾಜಕಾರಣದಲ್ಲಿ ಹಲವು ಮುನ್ನಡೆಗಳನ್ನು ಸಾಧಿಸಿದ್ದ ...ಬಂಗಾಳ ಮತ್ತು ಕೇರಳಗಳು ನಮ್ಮ ಮುಂದಿವೆ. ...ದರೆ ಅವುಗಳ ಸಾಧನೆಯನ್ನು ಮತ್ತು ಇಂದಿನ ವೈಫಲ್ಯವನ್ನು ...ವಾಗಿ ವಿಶ್ಲೇಷಿಸಿದರೆ ವಿಕೇಂದ್ರೀಕರಣ ರಾಜಕಾರಣದ ...ಮಿತಿಗಳು ಇನ್ನಷ್ಟು ಸ್ಪಷ್ಟವಾಗುತ್ತವೆ. ಇವೆರಡು ...ಜ್ಯಗಳಲ್ಲಿ 70ರ ದಶಕದ ಅಂತಿಮದಲ್ಲಿ ಮತ್ತು 80ರ ...ಶಕದ ಪ್ರಾರಂಭದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ...ರಿಗೆ ತರಲಾಯಿತು. ಆದರೆ ಅದಕ್ಕೆ ಮುನ್ನ ಆ ...ಡು ರಾಜ್ಯಗಳಲ್ಲಿ ಬೃಹತ್ ರೈತಕೂಲಿ ಚಳವಳಿಗಳು ...ದಿದ್ದವು. ತೇಬಾಗ ಚಳವಳಿಯಿಂದ ಮೊದಲುಗೊಂಡು ...ಪರೇಷನ್ ಬಾರ್ಗಾ... ...ಲ್‌ಬಾರಿ ಚಳವಳಿಗಳು ಆ ರಾಜ್ಯಗಳ ಶೋಷಿತರಲ್ಲಿ ...ಜಕೀಯ ಜಾಗೃತಿಯನ್ನು ತಂದಿದ್ದವು ಮತ್ತು ಸಂಘಟಿತ ...ಗಿಸಿತ್ತು. ಈ ಹೋರಾಟಗಳ ಪರಿಣಾಮವಾಗಿ ಜಾರಿ ...ದ ನೀತಿಗಳು ಗ್ರಾಮೀಣ ಪ್ರದೇಶದಲ್ಲಿ ಈವರೆಗೆ ...ಷಿತ ವರ್ಗಗಳಿಗೆ ಭೂಮಿ ಹಾಗೂ ಇತರ ಸಂಪನ್ಮೂಲ ...ನ್ನು ದೊರಕಿಸಿತ್ತು. ಈ ಪೂರ್ವಭಾವಿ ಬೆಳವಣಿಗೆಗಳಿಂದಾ ...ಗಿ ಗ್ರಾಮೀಣ ರಾಜಕಾರಣದಲ್ಲಿ ಹೊಸ ಶೋಷಿತ ...ಸ್ತ ದಮನಿತ ಶಕ್ತಿಗಳು ಪ್ರವೇಶ ಪಡೆದಿದ್ದವು. ಆ ...ರ್ಭದಲ್ಲಿ ಜಾರಿಯಾದ ಪಂಚಾಯತ್ ರಾಜ್ ವ್ಯವಸ್ಥೆ ...ಹೊಸ ಶೋಷಿತ ಶಕ್ತಿಗಳಿಗೆ ಅಧಿಕಾರ ವನ್ನು ನೀಡಿ ...ಲ್ಕೂ ಅಧಿಕಾರ ವಿಕೇಂದ್ರೀಕರಣವನ್ನು ಸಾಧ್ಯಗೊಳಿಸಿದ್ದವು. ...ರೆ ವಿಕೇಂದ್ರೀಕರಣಕ್ಕೆ ಪೂರ್ವ ಭಾವಿಯಾಗಿ ಗ್ರಾಮೀಣ ...ತ್ತ ರಾಜಕೀಯ ಸಮೀಕರಣ ಬದಲಾಗಿತ್ತು. ಆದ್ದರಿಂದ ...ಒಂದೆರಡು ದಶಕಗಳ ಕಾಲವಾದರೂ ವಿಕೇಂದ್ರೀಕರ... ರಾಜಕಾರಣ ಶೋಷಿತರ ಸಬಲೀಕರಣಕ್ಕೆ ಸಹಾಯ ...ತ್ತು. ಆದರೆ ಕಳೆದೆರಡು ದಶಕಗಳಲ್ಲಿ ಆ ಎರಡು ...ಗಳಲ್ಲಿ ಪ್ರಾರಂಭದ ಫಲಾನುಭವಿಗಳೇ ಹೊಸದಾದ ...ಆಳುವ ವರ್ಗವಾಗಿ ರೂಪಾಂತರಗೊಂಡಿರುವುದರಿಂದ ...ತ್ತ ಬಂಗಾಳದಲ್ಲಿ ಈ ಹೊಸ ಆಳುವ ವರ್ಗಕ್ಕೂ ...ಪಕ್ಷಕ್ಕೂ ಸಾವಯವ ಸಂಬಂಧ ಇರುವುದರಿಂದ ...ಯೂ ಪಂಚಾಯತ್ ಸಂಸ್ಥೆಗಳು ಶೋಷಕ ವರ್ಗಗಳ ...ೀಕರಣ ಮತ್ತು ಸದೃಢೀಕರಣದ ಸಂಸ್ಥೆಗಳಾಗಿಯೇ ...ರ್ಪಟ್ಟಿವೆ. ಕೇರಳದ್ದೂ ಇದೇ ಕಥೆ.

...ಅದೇನೇ ಇರಲಿ ಒಟ್ಟಾರೆ ಪಂಚಾಯತ್ ರಾಜ್‌ನ ...ಭವ ಹಾಗೂ ಕರ್ನಾಟಕದಲ್ಲಿ ಗ್ರಾಮ ಪಂಚಾಯತಿ ...ಚುನಾವಣೆಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಒಂದು ...ಯನ್ನಂತೂ ಸ್ಪಷ್ಟಪಡಿಸುತ್ತವೆ. ವಿಕೇಂದ್ರೀಕರಣಕ್ಕೆ ...ರ್ವಭಾವಿಯಾಗಿ ಗ್ರಾಮಗಳಲ್ಲಿನ ರಾಜಕೀಯ ಮತ್ತು ...ಕ ಸಾಮಾಜಿಕ ಸಮೀಕರಣಗಳು ಶೋಷಿತರ ಪರವಾಗಿ ...ಆಗದಿದ್ದರೆ ಅವು ಶೋಷಕರನ್ನಷ್ಟೇ ಸಬಲೀಕರಿಸಿ ...ಷಿತರನ್ನು ಇನ್ನಷ್ಟು ದುರ್ಬಲಗೊಳಿಸುತ್ತವೆ. ಆದ್ದರಿಂದ ...ಚಾಯತ್ ರಾಜ್ ವ್ಯವಸ್ಥೆಯೇ ಈ ದೇಶದ ಅತಿ ...ಕ್ಕ ಸಾಧನೆ ಎನ್ನುವವರು, ಜೀವಂತ ಪ್ರಜಾತಂತ್ರಕ್ಕೆ ...ನ್ನುವವರು ಆತ್ಮಾವಲೋಕನ ಮಾಡಿಕೊಳ್ಳುತ್ತಿದ್ದಾರೆ.

ಬಡಗುಪೇಟೆಯ 5 ಸೆಂಟ್ಸ್ ಜಾಗದ ವಿವಾದ

ಉಡುಪಿಯ ಒಂದು ಆಧುನಿಕ ಸ್ಥಳಪುರಾಣ

ಈ ಬರಹವನ್ನು 'ಆಧುನಿಕೋತ್ತರ ಸ್ಥಳ ಪುರಾಣ' ಎಂದು ಕರೆಯುವುದೇ ಹೆಚ್ಚು ಸೂಕ್ತವಾಗಬಹುದು. ಧರ್ಮ ಮತ್ತು ಕಣ್ಕಟ್ಟು, ವ್ಯವಹಾರ ಮತ್ತು ದಗಲ್ಬಾಜಿ, ಸರ್ಕಾರದ ಅಧಿಕಾರ ಮತ್ತು ಖಾಸಗಿ ತೋಳ್ಬಲಗಳು, ಒಂದರಿಂದ ಇನ್ನೊಂದನ್ನು ಬೇರ್ಪಡಿಸಲಾಗದಷ್ಟು ಕಲಸಿಕೊಂಡಿರುವ ಈ ಸ್ಥಳಪುರಾಣವನ್ನು ನೀವು ನಿಮಗೆ ಸರಿ ಕಂಡ ರೀತಿಯಲ್ಲಿ ಓದಿ ಅರ್ಥೈಸಿಕೊಂಡು ಕೃತಾರ್ಥರಾಗಬಹುದು. ಯಾಕೆಂದರೆ 'ಆಧುನಿಕೋತ್ತರ ಓದುಗ'ರಿಗೆ ಅದಕ್ಕಿಂತ ಹೆಚ್ಚಿನ ಯಾವ ಜವಾಬ್ದಾರಿಯೂ ಇಲ್ಲ. ಮಧ್ವಕರಾರ್ಚಿತ ಕೃಷ್ಣನ ನೆಲೆವೀಡಾಗಿರುವ ನಮ್ಮೀ ಉಡುಪಿಯ ಅಂಗುಲ ಅಂಗುಲವೂ ಪವಿತ್ರ ಎಂಬುದರಲ್ಲಿ ಸಂದೇಹವಿಲ್ಲ; ಆದರೆ ಮಾರ್ಕೆಟ್ಟು ಎಂಬ ಆಧುನಿಕ ವಿಕಾರದಿಂದಾಗಿ ಈ ಊರಿನ ಎಲ್ಲ ಭಾಗಗಳಲ್ಲೂ ಜಾಗಕ್ಕೆ ಒಂದೇ ರೇಟು ನಡೆಯುವುದಿಲ್ಲ. ಪ್ರಾಯಶಃ ಉಡುಪಿಯಲ್ಲಿ ನೆಲಕ್ಕೆ ಗರಿಷ್ಠ ಬೆಲೆ ಇರುವುದು ಕೃಷ್ಣಮಠ, ಅಷ್ಟಮಠಗಳಿಗೆ ಅತಿ ಸಮೀಪದಲ್ಲಿರುವ ಬಡಗುಪೇಟೆಯಲ್ಲಿ. ನೆಲಕ್ಕೆ ಇಲ್ಲಿ ಅದರ ತೂಕದ ಚಿನ್ನಕ್ಕಿಂತಲೂ ಜಾಸ್ತಿ ಬೆಲೆ. ಚಿನ್ನವಾದರೂ ಸಿಕ್ಕೀತು; ಆದರೆ ಬಡಗುಪೇಟೆಯಲ್ಲಿ ಖಾಲಿ ಜಾಗ ಸಿಗಲಿಕ್ಕಿಲ್ಲ.



ಜೆಸಿಬಿ ತಡೆದ ಶಿರೂರ ಯತಿ ಮತ್ತು ಶಾಸಕ ಭಟ್ಟ...

ಹೀಗಿರುತ್ತ ಈ ಬಡಗುಪೇಟೆಯ 5 ಸೆಂಟ್ಸ್‌ನ ಜಾಗವೊಂದು ಇತ್ತೀಚೆಗೆ 'ವಿವಾದಗ್ರಸ್ತ'ವಾಯಿತು. ಅದೂ ಸಾಲದ್ದಕ್ಕೆ ಅಲ್ಲಿ ಒಂದು ದೇವಾಲಯದ ಸ್ವಾಗತ ಗೋಪುರವೂ ನಿರ್ಮಾಣವಾಯಿತು. ಸದರಿ ವಿವಾದದಲ್ಲಿ ಉಡುಪಿಯ ಬಿಜೆಪಿ ಶಾಸಕರು ಮತ್ತು ಪರ್ಯಾಯ ಶಿರೂರು ಮಠದ ಸ್ವಾಮಿಗಳು ಮಧ್ಯಪ್ರವೇಶ ಮಾಡಿದರೆ ಅದರಲ್ಲಿ ತಪ್ಪೇನಿದೆ? ನಿಮ್ಮ ಕೊಟ್ಟಿಗೆಯಲ್ಲಿ ನಿಮ್ಮ ವೆಚ್ಚದಲ್ಲಿ ನೀವು ಸಾಕಿದ ಜಾನುವಾರನ್ನು ಹೇಗೆ ವಿಲೇವಾರಿ ಮಾಡಬೇಕು ಎಂದು ನಿರ್ಧರಿಸುವ ಹಕ್ಕು ಸರ್ಕಾರಕ್ಕೆ ಮಾತ್ರವಲ್ಲ, ಮಠಾಧೀಶರುಗಳಿಗೂ ಇದೆ ಎಂದಾದ ಮೇಲೆ ಊರಿನ ಜಾಗವೊಂದರ ವಿವಾದದಲ್ಲಿ ಮೂಗು ತೂರಿಸುವ ಹಕ್ಕು ಶಾಸಕರಿಗೆ ಮತ್ತು ಮಠಾಧೀಶರುಗಳಿಗೆ ಇರಲೇಬೇಕು. ಆದರೆ ರಾಜ್ಯ ಹೈಕೋರ್ಟ್, ಉಡುಪಿ, ಬಡಗುಪೇಟೆಯ 5 ಸೆಂಟ್ಸ್ ಜಾಗದ ವಿವಾದದಲ್ಲಿ ಉಡುಪಿ ಶಾಸಕ ಮತ್ತು ಶಿರೂರು ಮಠಾಧೀಶರ ನಡವಳಿಕೆಯನ್ನು ತೀವ್ರವಾಗಿ ಆಕ್ಷೇಪಿಸಿದೆ; ಸಾಲದ್ದಕ್ಕೆ ದೇಶದ ಕಾನೂನಿಗೆ ಬದಲಾಗಿ ಶಾಸಕರು ಮತ್ತು ಮಠಾಧೀಶರ ಬೆದರಿಕೆಗಳಿಗೆ ತಲೆಬಾಗಿದ ಉಡುಪಿ ಜಿಲ್ಲಾ ಪೊಲೀಸು ವರಿಷ್ಠಾಧಿಕಾರಿಯನ್ನು ಕೋರ್ಟು ತರಾಟೆಗೆ ತೆಗೆದುಕೊಂಡಿದೆ.

ಉಡುಪಿಯ ರಥಬೀದಿಯ ಉತ್ತರಕ್ಕೆ ಕೃಷ್ಣಮಠಕ್ಕೆ ಕೆಲವೇ ಹೆಜ್ಜೆಗಳಷ್ಟು ದೂರವಿರುವ ಈ 'ವಿವಾದಗ್ರಸ್ತ' 5 ಸೆಂಟ್ಸ್ ಜಾಗ, ಗೋಪಾಲಕೃಷ್ಣ ಭಟ್ ಮತ್ತು ವಾರಿಜಾಕ್ಷಿ ಭಟ್ ಎಂಬ ದಂಪತಿಗಳಿಗೆ ಸೇರಿದ್ದಾಗಿದ್ದು ಅವರು ಈ ಜಾಗದ ಮೇಲೆ 1991ರಲ್ಲಿ ಒಂದು ಲಕ್ಷದಷ್ಟು ಬ್ಯಾಂಕ್ ಸಾಲ ಪಡೆದಿದ್ದರು. ಸಾಲದ ಬಹುಪಾಲು ಕಂತುಗಳನ್ನು ಪಾವತಿ ಮಾಡಿದ್ದರೂ, ಇವರು ಒಂದು ಸಣ್ಣ ಮೊತ್ತಕ್ಕೆ ಸುಸ್ತಿದಾರರಾಗಿದ್ದರು. ಬ್ಯಾಂಕ್ ಸಾಲ ಮರುಪಾವತಿಗೆ ನೋಟೀಸ್ ಕಳುಹಿಸಿ, ಇವರಿಂದ ಸೂಕ್ತ ಉತ್ತರ ದೊರೆಯದಿದ್ದಾಗ ಜಾಗವನ್ನು ಹರಾಜು ಹಾಕಿತು. ಏತನ್ಮಧ್ಯೆ ಜಾಗದ ಮಾಲೀಕರು ಬಾಕಿ ಉಳಿದ ಸಾಲದ ಹಣವನ್ನು ಹೊಂದಿಸಿಕೊಂಡು ಮರುಪಾವತಿಗೆ ಮುಂದಾದರು. ಆದರೆ ಜಾಗದ ಹರಾಜಿನ ಪ್ರಕ್ರಿಯೆ ಪ್ರಾರಂಭವಾಗಿತ್ತು, ಬ್ಯಾಂಕಿನ ನಿಯಮಾವಳಿಗಳ ಪ್ರಕಾರ ಸುಸ್ತಿದಾರರೇ ತಮ್ಮ ಜಮೀನಿನ ಹರಾಜಿನಲ್ಲಿ ಭಾಗವಹಿಸುವಂತಿರಲಿಲ್ಲ. ಇವರ ಐದು ಸೆಂಟ್ಸ್ ಜಾಗವನ್ನು ಹರಾಜಿನಲ್ಲಿ ಖರೀದಿಸಿದ ಕೃಷ್ಣಮೂರ್ತಿ ಸಾಮಗ ಮತ್ತು ಇತರರ ಖಾಸಗಿ ಮನೆ/ದೇವಾಲಯ ಈ ಜಾಗದ ಪಕ್ಕದಲ್ಲೇ ಇದೆ. ಅನಾಯಾಸವಾಗಿ ಅತಿ ಅಗ್ಗದ ಬೆಲೆಗೆ ನಗರ ಮಧ್ಯದ ಈ ಜಾಗ ಅವರಿಗೆ ಸಿಕ್ಕಿತು. ಕೃಷ್ಣಮೂರ್ತಿ ಸಾಮಗ ಆಡಳಿತ ಮೊಕ್ತೇಸರರಾಗಿರುವ ವಾಸುಕಿ ಅನಂತ ಪದ್ಮನಾಭ ದೇವಾಲಯ, ಒಂದು ಖಾಸಗಿ ಪೂಜಾ ಕೇಂದ್ರವೇ ಹೊರತು ಸಾರ್ವಜನಿಕ ದೇವಾಲಯವೂ ಅಲ್ಲ; ಪ್ರಾಚೀನ ನಿರ್ಮಾಣವೂ ಅಲ್ಲ. ತಮ್ಮ ಕೋರಿಕೆಯನ್ನು ಮನ್ನಿಸದೆ, ತಮಗೆ ಸೇರಿದ 5 ಸೆಂಟ್ಸ್ ಜಾಗವನ್ನು ಹರಾಜು ಹಾಕಿದ ಬ್ಯಾಂಕಿನ ಕ್ರಮವನ್ನು ಪ್ರಶ್ನಿಸಿ ಸಾಲದಾರರಾಗಿದ್ದ ಗೋಪಾಲಕೃಷ್ಣ ಭಟ್ ಮತ್ತು ವಾರಿಜಾಕ್ಷಿ ಭಟ್ ನ್ಯಾಯಾಲಯದಲ್ಲಿ ದಾವೆ ಹಾಕಿದರು.

ಹರಾಜಿನಲ್ಲಿ ಈ ಜಾಗವನ್ನು ಖರೀದಿಸಿದ ದೇವಾಲಯದ ಆಡಳಿತ ಮೊಕ್ತೇಸರ ನ್ಯಾಯಾಲಯದಲ್ಲಿ ಈ ಕುರಿತ ವಿಚಾರಣೆ ನಡೆಯುತ್ತಿರುವಾಗಲೇ ದೇವಾಲಯವನ್ನು ವಿಸ್ತರಿಸಿ, ಸ್ವಾಗತ ಗೋಪುರವನ್ನು ನಿರ್ಮಿಸಿದರು. ಇದಕ್ಕೆ ತಡೆ ಆಜ್ಞೆ ನೀಡಿದ ಕೋರ್ಟ್ ಆದೇಶವನ್ನು ಧಿಕ್ಕರಿಸಿದರು. ಕೊನೆಗೆ ವಿವಾದ ಹೈಕೋರ್ಟ್ ತಲುಪಿ ಜಾಗದ ಮೂಲ ಹಕ್ಕುದಾರರ ಪರ ತೀರ್ಪು ಪ್ರಕಟವಾಯಿತು. ಇವರ ಜಾಗದಲ್ಲಿ ನಿರ್ಮಾಣವಾಗಿರುವ ದೇವಾಲಯದ ಸ್ವಾಗತ ಗೋಪುರ ಇತ್ಯಾದಿಗಳು ಅಕ್ರಮವಾಗಿದ್ದು ಅವುಗಳನ್ನು ನಿರ್ಮೂಲಗೊಳಿಸಿ ಜಾಗವನ್ನು ಅದರ ಮೂಲ ಹಕ್ಕುದಾರ ವಾರಸುದಾರರಿಗೆ ಒಪ್ಪಿಸಬೇಕು ಎಂದು ಹೈಕೋರ್ಟ್ ತೀರ್ಪು ನೀಡಿದೆ.

ಮೊನ್ನೆ ಏಪ್ರಿಲ್ 19 ಸೋಮವಾರದಂದು ಹೈಕೋರ್ಟ್ ತೀರ್ಪನ್ನು ಜಾರಿಗೆ ತರಲು ವಿವಾದಿತ ಸ್ಥಳಕ್ಕೆ ಬಂದ ಸರ್ಕಾರಿ ಸಿಬ್ಬಂದಿಯನ್ನು ಉಡುಪಿಯ ಶಾಸಕ ಮತ್ತು ಶಿರೂರು ಮಠಾಧೀಶರು ಬೆದರಿಸಿ ಹಿಂದೆ ಕಳುಹಿಸಿದ್ದಾರೆ. ದೇವಾಲಯ ಸಾರ್ವಜನಿಕ ಸ್ಥಳವಾಗಿದ್ದು



ಬೇರೆಯವರ ಜಾಗದಲ್ಲಿ ಅಕ್ರಮವಾಗಿ ನಿರ್ಮಾಣಗೊಂಡಿರುವ ಗೋಪುರ

ಅದರ ಗೋಪುರ ನಾಶ ಮಾಡಿದರೆ ದೇವರು ಒಳ್ಳೆಯದು ಮಾಡುವುದಿಲ್ಲ ಎಂದು ಶಾಸಕರು, ಸರ್ಕಾರಿ ಸಿಬ್ಬಂದಿ ಹಾಗೂ ಗೋಪುರ ಕೆಡವಲು ಜೆಸಿಬಿ ವಾಹನ ತೆಗೆದುಕೊಂಡು ಬಂದಿದ್ದ ಡ್ರೈವರ್‌ನನ್ನು ಹೆದರಿಸಿದರು; ಶಿರೂರು ಮಠಾಧೀಶರು ದೇವಸ್ಥಾನದ ಕೆರೆ, ನಾಗನ ಆವಾಸಸ್ಥಾನವೆಂದೂ ನಾಗನ ವಿರೋಧ ಕಟ್ಟಿಕೊಳ್ಳಬಾರದು ಎಂದೂ ಎಚ್ಚರಿಕೆ ಕೊಟ್ಟರು. ಇವರಿಬ್ಬರ ಮಾತಿನಿಂದ ಕಂಗಾಲಾದ ಡ್ರೈವರ್ ಜೆಸಿಬಿ ಅಲ್ಲೇ ಬಿಟ್ಟು ಪಲಾಯನ ಮಾಡಿದರು. ಸ್ಥಳದಲ್ಲಿದ್ದ ಸರ್ಕಾರಿ ಅಧಿಕಾರಿಗಳಿಗೆ ಶಾಸಕರು ಮತ್ತು ಮಠಾಧೀಶರು "ತಾಕತ್ತಿದ್ದರೆ, ಕೋರ್ಟು ಆದೇಶ ಜಾರಿಗೊಳಿಸಿ" ಎಂದು ಧಮಕಿ ಹಾಕಿದರು.

ಈ ಎಲ್ಲ ವಿದ್ಯಮಾನವನ್ನು ಆಲಿಸಿದ ರಾಜ್ಯ ಹೈಕೋರ್ಟ್ ಉಡುಪಿ ಜಿಲ್ಲಾ ಪೊಲೀಸು ವರಿಷ್ಠಾಧಿಕಾರಿ ಮಧುಕರ್ ಪವಾರ್ ಅವರನ್ನೇ ಕೋರ್ಟಿಗೆ ಕರೆಸಿಕೊಂಡು ವಿವರಣೆ ಕೇಳಿದೆ. "ವಿವಾದಿತ ಸ್ಥಳದಲ್ಲಿರುವ ವಾಸುಕಿ ಅನಂತ ಪದ್ಮನಾಭ ದೇವಾಲಯ ಖಾಸಗಿ ಸಂಸ್ಥೆಯಾಗಿದ್ದು ಅದು ಸಾರ್ವಜನಿಕ ದೇವಾಲಯವಲ್ಲ, ಆದ್ದರಿಂದಲೇ ಅದು ಒತ್ತುವರಿ ಮಾಡಿಕೊಂಡಿರುವ ಜಾಗದಲ್ಲಿ ಕಟ್ಟಿರುವ ಅಕ್ರಮ ನಿರ್ಮಾಣಗಳನ್ನು ನಾಶಪಡಿಸಲು ಹೈಕೋರ್ಟ್ ಆಜ್ಞೆ ನೀಡಿದೆ. ಹೀಗಿರುತ್ತ ವಿವಾದದಲ್ಲಿ ಶಾಸಕರು ಮತ್ತು ಮಠಾಧೀಶರಿಗೆ ಏನು ಕೆಲಸವಿದೆ? ನ್ಯಾಯಾಂಗನಿಂದನೆಗಾಗಿ ನೀವು ಜೈಲಿಗೆ ಹೋಗಬೇಕಾಗಿ ಬಂದರೆ ಅವರು ನಿಮ್ಮೊಟ್ಟಿಗೆ ಬರುತ್ತಾರಾ?" ಎಂದು ನ್ಯಾಯಮೂರ್ತಿಗಳು, ಜಿಲ್ಲಾ ಎಸ್‌ಪಿಗೆ ಛೀಮಾರಿ ಹಾಕಿದ್ದಾರೆ. ತಾನು ಕೋರ್ಟ್‌ನ ಆದೇಶವನ್ನು ಜಾರಿಗೊಳಿಸಲು ಬದ್ಧನಾಗಿದ್ದು ಅದಕ್ಕೆ ತಕ್ಕ ಬಂದೋಬಸ್ತನ್ನು ಮಾಡುವುದಾಗಿ ಎಸ್‌ಪಿ ಪ್ರಮಾಣ ಪತ್ರ ಸಲ್ಲಿಸಿದ್ದಾರೆ. ಆದರೆ ಜಾಗದ ಕುರಿತ ಕೋರ್ಟು ಆದೇಶ ಮಾತ್ರ ಇನ್ನೂ ಜಾರಿಗೆ ಬಂದಿಲ್ಲ. ಸದ್ಯಕ್ಕೆ ಬೇಸಿಗೆ ರಜೆ ಪ್ರಯುಕ್ತ ಕೋರ್ಟು ಕಲಾಪ ಸ್ಥಗಿತಗೊಂಡಿದ್ದು, ರಜೆ ಮುಗಿದ ಮೇಲಷ್ಟೇ ಹೈಕೋರ್ಟು ಪ್ರಕರಣವನ್ನು ಪರಿಶೀಲಿಸಲಿದೆ.

ಉಡುಪಿ ಬಡಗುಪೇಟೆಯ ಜಾಗವೊಂದರ ಈ ವಿವಾದಲ್ಲಿ ವಾದಿ ಮತ್ತು ಪ್ರತಿವಾದಿ ಎರಡೂ ಪಾರ್ಟಿಯವರು 'ಅದೃಷ್ಟವಶಾತ್' (ಹಾಗೆಂದು ಹೇಳಬಹುದಾದರೆ) ಹಿಂದೂಗಳು. ಅಷ್ಟೇ ಯಾಕೆ, ಆಸ್ತಿಕ ಮಾಧ್ವ ಬ್ರಾಹ್ಮಣರು ಮತ್ತು ಸ್ಥಳೀಯರು. ಅಕಸ್ಮಾತ್ ಈ ಜಾಗದ ವಿವಾದದಲ್ಲಿ ಒಂದು ಪಾರ್ಟಿ

'ಅನ್ಯಮತೀಯ' (ಮುಸಲ್ಮಾನ ಅಥವಾ ಕ್ರೈಸ್ತ ಎಂದು ಓದಿಕೊಳ್ಳಿ)ರಾಗಿದ್ದರೆ, ಬಹುಶಃ ಉಡುಪಿ ಆವತ್ತು ರಣರಂಗವಾಗುತ್ತಿತ್ತು. ಉಡುಪಿಯ ಶಾಸಕ ಮತ್ತು ಶಿರೂರು ಮಠಾಧೀಶರಿಗೆ ಹಾಗೆ ಮಾಡುವ ತಾಕತ್ತು, ಕೆಚ್ಚು ಮತ್ತು 'ಜನ ಬೆಂಬಲ' ಎಲ್ಲವೂ ಇವೆ. ಆದರೆ ಸದ್ರಿ ವಿವಾದದಲ್ಲಿ ಯಾರು 'ನಮ್ಮವರು' ಯಾರು 'ಅನ್ಯರು' ಎಂಬುದು ಅಷ್ಟು ಸರಳವಾಗಿಲ್ಲ. ಹಾಗಾಗಿ ಇದರಲ್ಲಿ ಉಡುಪಿಯ ಶಾಸಕ ಮತ್ತು ಶಿರೂರು ಮಠಾಧೀಶರ ಹಸ್ತಕ್ಷೇಪದ ಬಗ್ಗೆ ಊರಿನ ಮಾಧ್ವ ಬ್ರಾಹ್ಮಣರಲ್ಲೇ ಹಲವರಿಗೆ ಸಮಾಧಾನವಿಲ್ಲ. ಹೈಕೋರ್ಟು ಆದೇಶವನ್ನು ಜಾರಿಗೊಳಿಸಲು ಬಂದ ಅಧಿಕಾರಿಗಳಿಗೆ ಇವರು ದೇವರಹೆಸರಿನಲ್ಲಿ ಧಮಕಿ ಹಾಕಿದ್ದು ಯಾವ "ಧರ್ಮ"ದ ರಕ್ಷಣೆಗಾಗಿ? ದೇವರು ಇರುವುದು ಇವರಿಗೆ ಮಾತ್ರವೋ? ಹೈಕೋರ್ಟ್ ಆದೇಶವನ್ನು ಜಾರಿಗೊಳಿಸಲು ಬಂದ ಸರ್ಕಾರಿ ಸಿಬ್ಬಂದಿಯನ್ನು ಇವರು ನಾಗನನ ಹೆಸರು ಹೇಳಿ ಹಿಂದೆ ಅಟ್ಟಿದ್ದಾರೆ. ಇಂತಹವರನ್ನು ಕುರಿತೇ ತನ್ನ ಸುಪ್ರಸಿದ್ಧ ವಚನವೊಂದರಲ್ಲಿ ಬಸವ ಹೇಳಿದ:

"ಕಲ್ಲನಾಗರ ಕಂಡರೆ ಹಾಲನೆರೆ ಎಂಬರು
ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ"

ಬಡಗುಪೇಟೆಯ ವಿವಾದಿತ ಸ್ಥಳದಲ್ಲಿರುವ ದೇವಾಲಯ ನಾಗನ ಆವಾಸ ಸ್ಥಾನ ಎಂದು ಹೇಳುವ ಶಿರೂರು ಮಠಾಧೀಶರೇ, ಉಡುಪಿ ಮಣಿಪಾಲ ಹೆದ್ದಾರಿಯ ಅಕ್ಕಪಕ್ಕ ಇರುವ, ಮಠದ ಒಡೆತನದ ಆದರೆ ವಾಸ್ತವವಾಗಿ ಊರೊಟ್ಟಿನ ಜಾಗಗಳಾಗಿದ್ದ ನೂರಾರು ಎಕ್ರೆ ಕಾಡನ್ನು ಬಿಲ್ಡರುಗಳಿಗೆ ಮಾರಿದ್ದಾರೆ. (ಇದರಲ್ಲಿ ಉಡುಪಿಯ ಇತರ ಮಠಗಳವರೇನೂ ಹಿಂದೆ ಬಿದ್ದಿಲ್ಲ). ಈ ಕಾಡಿನಲ್ಲಿದ್ದ "ದಿಟದ ನಾಗರ"ಗಳೂ ಇತರ ಮೃಗಪಕ್ಷಿ ಜೀವಜಂತು ಹುಳುಹುಪ್ಪಟ್ಟೆಗಳೂ ಏನಾದವು? ಶಿರೂರು ಮಠಾಧೀಶರಿಗಾಗಲೀ, ಉಡುಪಿಯ ಇತರ ಮಠಗಳ ಸ್ವಾಮೀಜಿಗಳಿಗಾಗಲೀ ಈ ಪ್ರಶ್ನೆ ಯಾವತ್ತಾದರೂ ಬಾಧಿಸಿದೆಯಾ? ನಾಗ ಇರುವುದು, ದೇವಸ್ಥಾನ ಕಟ್ಟಿ ದುಡ್ಡು ಮಾಡುವುದಕ್ಕೆ ಮತ್ತು ಬಡಪಾಯಿಗಳಿಗೆ ಬೆದರಿಕೆ ಹಾಕುವುದಕ್ಕೆ ಮಾತ್ರವೋ? ಉಡುಪಿಯ ಬಿಜೆಪಿ ಶಾಸಕರು ಮತ್ತು ಶಿರೂರು ಮಠಾಧೀಶರು ಬಡಗುಪೇಟೆಯ ಈ ವಿವಾದಿತ ಜಾಗ ಕುರಿತ ಹೈಕೋರ್ಟು ಆದೇಶ ಜಾರಿಗೆ ಬರದಂತೆ ನೋಡಿಕೊಂಡು ತಮ್ಮ ತಾಕತ್ತು ತೋರಿಸಿಕೊಂಡಿದ್ದಾರೆ. ಆದರೆ ತಮ್ಮ ವರ್ತನೆಯಿಂದ ಕಾನೂನಿನ ಆಳ್ವಿಕೆಯ ಸುವಿಧಾನದ ಪರಿಕಲ್ಪನೆಗೆ ಮಾತ್ರವಲ್ಲ, ಹಿಂದೂ ಧರ್ಮಕ್ಕೇನೆ ಆಗಿರುವ ಅಪಚಾರದ ಬಗ್ಗೆ ಅವರು ಯೋಚಿಸಿದ್ದಾರೆಯೇ?

ಲಿಂಗಾಯತ ಧರ್ಮ ಮತ್ತು ಅನಿಷ್ಟ ಜಾತಿ ಜಂಗಮರು

> 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ', 'ಶಾಸ್ತ್ರವೆಂಬುದು ಸಂತೆಯ ಸುದ್ದಿ. ಪುರಾಣವೆಂಬುದು ಪುಂಡರಗೋಷ್ಠಿ' ಎಂದಿದ್ದ ಬಸವಣ್ಣನವರ ವಿಚಾರ ಉತ್ತರ ಮುಖವಾದರೆ, ಈ ಪಂಚಾಚಾರ್ಯರದ್ದು ದಕ್ಷಿಣ ಮುಖ. ಇವರ ಪಂಚಪೀಠಗಳ ಮೂಲ ಸ್ಥಳದಲ್ಲಿ ಇರುವ ಲಿಂಗಾಯತರು ಎಷ್ಟು? ಅವರೆಲ್ಲ ಈ ಜಾಗದ ಗುರುಗಳಿಂದ ಎಷ್ಟು ಪ್ರಭಾವಿತರಾಗಿದ್ದಾರೆ? ಎಂದು ನೋಡಿದರೆ ಇವರ ಇಬ್ಬಂದಿತನ ಬಟಾಬಯಲಾಗುತ್ತದೆ. ಕರ್ನಾಟಕ ಅದರಲ್ಲೂ ಉತ್ತರ ಕರ್ನಾಟಕದ ಲಿಂಗಾಯತರನ್ನು ಮೂಲವಾಗಿಟ್ಟುಕೊಂಡು ಹುಟ್ಟಿಕೊಂಡ ಈ ಚತುರಾಚಾರ್ಯರು ಪಂಚಾಚಾರ್ಯರಾದದ್ದು 17 ನೇ ಶತಮಾನದಲ್ಲಿ ಎಂದು ಇತಿಹಾಸ ಸ್ಪಷ್ಟವಾಗಿ ಹೇಳುತ್ತದೆ.

ಬಾಗಲಕೋಟೆ ಜಿಲ್ಲೆಯ ಬದಾಮಿ ತಾಲೂಕಿನ ಶಿವಯೋಗಮಂದಿರದಲ್ಲಿ ಇತ್ತೀಚೆಗೆ ಗದುಗಿನ ತೋಂಟದಾರ್ಯ ಸಿದ್ಧಲಿಂಗ ಮಹಾಸ್ವಾಮಿಗಳ ಮೇಲೆ ನಡೆದ ದಾಂಧಲೆ ಮಾನವಂತರೆಲ್ಲರು ತಲೆತಗ್ಗಿಸುವಂತೆ ಮಾಡಿದೆ. ಅಷ್ಟಕ್ಕೂ ಗದುಗಿನ ಶ್ರೀಗಳು ಹೇಳಿದ ಮಾತುಗಳಲ್ಲಿ ಜಟಾಪಟಿ ಆಗುವಂಥ ವಿಷಯವೇನಾದರೂ ಇತ್ತೆ? ಎಂದು ಪರಾಂಭರಿಸಿ ನೋಡಿದರೆ ವಿಷಾದ ಮಡುಗಟ್ಟಿ ನಿಲ್ಲುತ್ತದೆ.

ಶಿವಯೋಗಮಂದಿರಕ್ಕೆ ನೂರು ವರ್ಷಗಳು ತುಂಬಿದ ಸಂದರ್ಭದಲ್ಲಿ ನಡೆದ ಕಾರ್ಯಕ್ರಮ ಅದ್ದೂರಿಯಾಗಿಯೇನೋ ಸಿದ್ಧಗೊಂಡಿದೆ. ಆದರೆ ಆ ಅದ್ದೂರಿತನಕ್ಕೆ ಕಾರಣೀಕರ್ತರಾಗಬೇಕಾಗಿರುವ ಜನರೆ ಇಲ್ಲವೆಂದ ಮೇಲೆ ಇದನ್ನು ಮಾಡುವ ಅವಶ್ಯಕತೆಯಾದರೂ ಏನಿತ್ತು? ಜೊತೆಗೆ ಶಿವಯೋಗಮಂದಿರಕ್ಕೆ ನೂರು ವರ್ಷಗಳಾಗಿವೆ ಎಂದು ಹೇಳುವುದು ದೊಡ್ಡದಲ್ಲ, ನೂರು ವರ್ಷವೇನು ಇನ್ನೂರು-ಮುನ್ನೂರು ವರ್ಷವೂ ಘಟಿಸಬಹುದು. ಆದರೆ ಈ ಸಂದರ್ಭದಲ್ಲಿ ಅದು ಎಷ್ಟು ಜನಪರವಾಗಿದೆ? ಈ ಮೂಲಕ ಅದು ಸಮಾಜದ ಎಷ್ಟು ಜನಗಳಿಗೆ ತಲುಪಿದೆ? ಎಂಬುದು ಬಹುಮುಖ್ಯ.

ಲಿಂಗಾಯತ ಸಮುದಾಯದ ಜನಗಳನ್ನು ಎಂದೂ ಆಕರ್ಷಿಸದ ಕೇವಲ ಜಂಗಮವಟುಗಳಿಗೆ ಮಾತ್ರ ಧರ್ಮದೀಕ್ಷೆ ನೀಡುವ ಇಂಥ ಸಂಸ್ಥೆಯ ಮುಖ್ಯಸ್ಥರಾದ ಸಂಗನಬಸವ ಸ್ವಾಮಿಗಳು ಯೋಚಿಸಬೇಕು. ಕಾಲಕ್ಕೆ ತಕ್ಕಂತೆ ಅನ್ನುವ್ರುದಕ್ಕೂತ ಬಸವಾದಿ ಶರಣರ ವಿಚಾರಗಳನ್ನು ಇಂಬಿಟ್ಟುಕೊಂಡು ನಡೆಯದೆ ಹೋದರೆ ಶಿವಯೋಗಮಂದಿರ ಇದ್ದಲ್ಲಿಯೆ ನಶಿಸಿ ಹೋಗುತ್ತದೆ ಎಂದು ಹೇಳಿದ ಗದುಗಿನ ತೋಂಟದಾರ್ಯರ ಮಾತು ನೂರಕ್ಕೆ ನೂರು ಸತ್ಯವಾದ ಮಾತಾಗಿದೆ.

ಬಸವಾದಿ ಶರಣರು ಕಟ್ಟಿದ ಲಿಂಗವಂತ ಸಮಾಜವನ್ನು ತಮ್ಮ ಕುತಂತ್ರಗಳ ಮೂಲಕ ಆಳುತ್ತ ಹೊರಟಿರುವ ಪಂಚಾಚಾರ್ಯರು ಎಲ್ಲರೂ ಬಲ್ಲಂತೆ ಕರ್ಮಠವಾದಿಗಳು. ಜನ್ಮ- ಪ್ರಾರಬ್ಧ- ಕರ್ಮ ಸಿದ್ಧಾಂತಗಳಲ್ಲಿ ಅಪಾರವಾದ ನಂಬಿಕೆ ಇಟ್ಟವರು. ಜ್ಯೋತಿಷ್ಯ ಶಾಸ್ತ್ರವನ್ನು ನಂಬುವವರು. ವಾರ-ದಿನಗಳಲ್ಲಿ ಒಳ್ಳೆಯವು-ಕೆಟ್ಟವು ಇವೆ ಎಂಬ ಇರಾದೆ ಉಳ್ಳವರು. ನಮ್ಮ ಇಂದಿನ ಜನ್ಮವು ಹಿಂದಿನ ಜನ್ಮದ ಪಾಪ-ಪುಣ್ಯದ ಫಲ ಎಂದು ಸಾರುತ್ತಿರುವವರು. ಈ ಜೀವನವೆಲ್ಲ ಸುಳ್ಳು, ಪರವೊಂದೆ ಸತ್ಯ ಎಂದು ಹೇಳುತ್ತ ಲಿಂಗಾಯತರನ್ನು ದಿಕ್ಕು ತಪ್ಪಿಸಿದವರು. ಗುಡಿ ಗುಂಡಾರಗಳನ್ನು ಕಟ್ಟುತ್ತ ಭಕ್ತರಿಂದ ದಕ್ಷಿಣೆಯ ವಸೂಲಿಗಾಗಿ ಲಕ್ಷ ದೀಪೋತ್ಸವ, ಕುಂಭಾಭಿಷೇಕ -ಕ್ಷೀರಾಭಿಷೇಕ ಎಂದು ತಾವು ಮೆರೆದವರು. ತಾವು ಅಡ್ಡ ಪಲ್ಲಕ್ಕಿಯಲ್ಲೋ, ಉದ್ದಪಲ್ಲಕ್ಕಿಯಲ್ಲೋ ಸುಖಾಸೀನರಾಗಿ ಆಶೀರ್ವಾದ ಮಾಡಿದರೆ ಸಮಾಜ ಉದ್ಧಾರವಾಗುತ್ತದೆ ಎಂದು ಹೇಳಿದವರು.

ಹೀಗೆ ಸಂಪೂರ್ಣ ಬಸವಾದಿ ಶರಣರು ಕಟ್ಟಿದ ಸಮಾಜದ ಕಲ್ಪನೆಯನ್ನು ಉಲ್ಲಂಘಿಸಿ ಹೊರಟಿರುವ ಪಂಚಾಚಾರ್ಯರು ಯಾರು? ಎಲ್ಲಿದ್ದರು? ಹೇಗೆ ಲಿಂಗವಂತ ಸಮಾಜವನ್ನು ತಮ್ಮ ಬುಟ್ಟಿಯಲ್ಲಿ ಹಾಕಿಕೊಂಡರು? ಅವರ ಅಜೆಂಡಾಗಳು ಏನೇನು? ಎಂದು ಕೆದಕುತ್ತ ಹೊರಟರೆ ಇವರ ಹೂರಣ ಬಯಲಿಗೆ ಬೀಳುತ್ತದೆ. ಶತಶತಮಾನಗಳಿಂದ ಅಮಾಯಕರಾದ ಲಿಂಗಾಯತ ಜನಗಳನ್ನು ನಂಬಿಸಿ ನಡೆಸಿರುವ ಹಗಲುದರೋಡೆ ಕಣ್ಣಿಗೆ ರಾಚುತ್ತದೆ.


'ಕೆಟ್ಟಿತ್ತು ಕಲ್ಯಾಣ ಹಾಳಾಯಿತ್ತು ನೋಡಾ......' ಎಂಬ ಬಸವಣ್ಣನವರ ವಚನ ಲಿಂಗವಂತ ಸಮಾಜ ಏರು ಸ್ಥಿತಿಯಲ್ಲಿದ್ದಾಗ ಒಮ್ಮಿಂದೊಮ್ಮೆ ಬಂದೆರಗಿದ ಆಪತ್ತಿ(ಬಿಜ್ಜಳನ ಕೊಲೆ)ನಿಂದ ಕಂಗೆಟ್ಟು ಹೋಗುತ್ತದೆ. ಶರಣರೆಲ್ಲ ಅಲ್ಲಮಪ್ರಭುಗಳ ಆಣತಿಯಂತೆ ಉಳವಿಯ ಕಡೆ ಚೆನ್ನಬಸವಣ್ಣ ಕದಳಿಯ ವನದತ್ತ ಅಕ್ಕಮಹಾದೇವಿ, ಮಡಿವಾಳ ಮಾಚಿದೇವಿ, ಅಕ್ಕನಾಗಮ್ಮ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯತ್ತ ಸಾಗಿಹೋಗುತ್ತಾರೆ. ಹೀಗೆ ಹೋಗುವಾಗ ಅವರು ತಮ್ಮೊಟ್ಟಿಗೆ ವಚನದ ಕಟ್ಟುಗಳನ್ನು ಹೊತ್ತೊಯ್ದಿದ್ದರು. ಆದರೆ ಹೇಗಾದರೂ ಮಾಡಿ ವಚನಕಾರರನ್ನು ಹಾಗೂ ಅವರು ಬರೆದಿರುವ ವಚನಗಳನ್ನು ನಾಶ ಮಾಡಲೆಬೇಕೆಂದು ಪಣ ತೊಟ್ಟಿರುವ ಪುರೋಹಿತ ವರ್ಗ ಅವರನ್ನು ಬೆನ್ನಟ್ಟಿಹೋಗುತ್ತದೆ. ಅಕ್ಷರಶಃ ಕ್ರಾಂತಿಯ ಗಂಗೋತ್ರಿ ಎಂದೆ ಕರೆಸಿಕೊಂಡಿರುವ ಅಕ್ಕನಾಗಮ್ಮ ಗಂಡುಗಚ್ಚೆ ಹಾಕಿ ಅಂಥವರ ವಿರುದ್ಧ ಹೋರಾಟವೂ ಮಾಡಿದ್ದಾಳೆ.

ಇಂಥ ವಿಪ್ಲವಗೊಂಡ ಸಮಾಜವನ್ನು ಹೇಗಾದರೂ ಮಾಡಿ ತಮ್ಮ ಬುಟ್ಟಿಯಲ್ಲಿ ಹಾಕಿಕೊಳ್ಳಬೇಕೆಂದು ಹೊರಟಿದ್ದ ಪ್ರತಿಗಾಮಿ ಶಕ್ತಿಗಳು ಇದರ ಲಾಭ ಪಡೆಯುತ್ತಾರೆ. ಹನ್ನೆರಡನೆಯ ಶತಮಾನ ಹುಟ್ಟು ಹಾಕಿದ್ದ ಮನುಷ್ಯ ಸರಿಸಮಾನತಾ ತತ್ವವನ್ನು ಅದು ಇಂಚಿಂಚೆ ನುಂಗಿ ಹಾಕುತ್ತ ಪ್ರವಾಹದಂತೆ ಮುನ್ನುಗ್ಗಿ ಸಾಗುತ್ತದೆ. ಆಗ ವ್ಯವಸ್ಥಿತವಾಗಿ ಹುಟ್ಟಿಕೊಂಡವರೆ ಚತುರಾಚಾರ್ಯರು. ಮೂಲತಃ ಆಂಧ್ರದವರಾದ ಚತುರಾಚಾರ್ಯರು ಶೈವ ಪಂಥದ ಆರಾಧಕರು. ರಂಭಾಪುರಿಯ ರೇಣುಕ (ಮೂಲತಃ ರೇವಣಸಿದ್ಧ: ಕುರುಬ ಜನಾಂಗದವನು), ಉಜ್ಜಯನಿಯ ಮರುಳಸಿದ್ಧ (ನಾಥ ಪರಂಪರೆಗೆ ಸೇರಿದ ವ್ಯಕ್ತಿ, 17ನೇ ಶತಮಾನದಲ್ಲಿ ರಚಿತವಾದ ಇಲ್ಲಿನ ದೇವಾಲಯವನ್ನು ಮಲ್ಲಿಕಾರ್ಜುನ ದೇವಾಲಯವೆಂದು ಕರೆಯುತ್ತಿದ್ದರೆಂದು ಇದೇ ದೇವಸ್ಥಾನದ ಎರಡು ಕಂಬಗಳ ಶಾಸನದಲ್ಲಿ ಉಲ್ಲೇಖವಾಗಿದೆ (ಬಳ್ಳಾರಿ ಜಿಲ್ಲೆಯ ಶಾಸನಗಳು: ಹಂಪಿ ಕನ್ನಡ ವಿಶ್ವವಿದ್ಯಾಲಯ), ಕೇದಾರದ ಭೀಮಾಶಂಕರಲಿಂಗ, ಶ್ರೀಶೈಲದ ಪಂಡಿತಾರಾಧ್ಯರೇ ಇದಕ್ಕೆ ಮೊದಲಿಗರಾಗುತ್ತಾರೆ. ಕಾಗಕ್ಕ ಗುಬ್ಬಕ್ಕನ ಕತೆಗಳನ್ನು ಹೇಳುತ್ತಾ ಶಾಸ್ತ್ರದ-ವೇದದ ಮಾತುಗಳನ್ನು ಉದ್ಧರಿಸುತ್ತ ತಮ್ಮ ಪೀಠವನ್ನು ಗಟ್ಟಿಗೊಳಿಸಿಕೊಳ್ಳುತ್ತಾರೆ. ಹಲವಾರು ಕಡೆ ಇವರು ಸಾರಿ ಸಾರಿ ಹೇಳುವಂತೆ ರೇಣುಕಾಚಾರ್ಯರು ಬಸವಾದಿ ಶರಣರಿಗಿಂತ ಮೊದಲು ಇದ್ದವರಲ್ಲ, ಒಂದು ವೇಳೆ ಇವರು ಹೇಳಿದ್ದೆ ಸತ್ಯವಾಗಿದ್ದರೆ, ಸಮಾಜೋಧಾರ್ಮಿಕ ಕಾರ್ಯಕ್ರಮ ಕೈಗೊಂಡಿದ್ದೆ ಆದರೆ ಬಸವಾದಿ ಶರಣರು ಅದನ್ನು ತಮ್ಮ ವಚನಗಳಲ್ಲಿ ಉಲ್ಲೇಖಿಸದೆ ಇರುತ್ತಿರಲಿಲ್ಲ.

ತಮ್ಮದು ಸನಾತನವಾದ, ಪುರಾತನವಾದ ಪರಂಪರೆ, ತಾವು 'ಲಿಂಗೋದ್ಭವರು' ಎಂದು ಹೇಳುತ್ತ ಲಿಂಗವಂತ ಸಮಾಜದ ಮೇಲೆ ಸವಾರಿ ಮಾಡುತ್ತಾರೆ. ಹದಿನಾರನೆಯ ಶತಮಾನದಲ್ಲಿ ತಮ್ಮ ಬೇರುಗಳನ್ನು ಇನ್ನಷ್ಟು ಗಟ್ಟಿಗೊಳಿಸಿಕೊಳ್ಳಲು 'ಸಿದ್ಧಾಂತ ಶಿಖಾಮಣಿ' ಎಂಬ ಗ್ರಂಥ ರಚನೆಯನ್ನು ಮಾಡಿಸುತ್ತಾರೆ. ಹೋಗಲಿ, ಈ ಗ್ರಂಥವಾದರೂ ಹದಿನಾರನೆಯ ಶತಮಾನದಲ್ಲಿ ರಚಿತವಾದ ಗ್ರಂಥವೆ? ಎಂದು ಪರಾಂಬರಿಸಿ ನೋಡಿದರೆ ಅಲ್ಲೂ ಇವರ ಭ್ರಷ್ಟ ಮುಖ ಗೋಚರವಾಗುತ್ತದೆ. ಡಾ. ಹಿರೇಮಲ್ಲೂರ ಈಶ್ವರನ್ ಎಂಬ ಭಾಷಾ ತಜ್ಞರು ಈ ಗ್ರಂಥವನ್ನು ಕೂಲಂಕಷವಾಗಿ ಅಧ್ಯಯನಕ್ಕೆ ಒಳಪಡಿಸಿ, ಇಲ್ಲಿ ಬಳಕೆಯಾಗಿರುವ ಭಾಷೆಯನ್ನು ಅಭ್ಯಸಿಸಿ ಇದು ಕೇವಲ ಹದಿನಾರನೆಯ ಶತಮಾನದಲ್ಲಿ ರಚಿತವಾದ ಕೃತಿ ಅಲ್ಲ ಎಂದು ಅಭಿಪ್ರಾಯಪಡುತ್ತಾರೆ. ಮೈಸೂರಿನ ಇಮ್ಮಡಿ ಶಿವಬಸವ ಸ್ವಾಮಿಗಳು ರಚಿಸಿದ 'ಶ್ರೀಕರ ಭಾಷೆಯ ನಿಜದ ನಿಲುವು' ಎಂಬ ಸಂಶೋಧನಾ ಕೃತಿ ಕೂಡ ಪಂಚಾಚಾರ್ಯರು ಯಾವ ಕಾಲದವರು ಎಂದು ಸ್ಪಷ್ಟವಾಗಿ ಹೇಳುತ್ತದೆ. ಮೊದಮೊದಲು ಈ ಚತುರಾಚಾರ್ಯರು ತಮ್ಮದು ಭಾರದ್ವಾಜ ಗೋತ್ರವೆಂದು ನಂತರ ತಾವು ಶಿವಗೋತ್ರದವರೆಂದು, ಮತ್ತೆ ಕೆಲವು ಕಾಲ ತಮ್ಮದು ನಂದಿ, ವೃಷಭ ಹಾಗೂ ವೀರಭದ್ರನ ಗೋತ್ರವೆಂದು ಹೇಳುತ್ತ ಜನಸಾಮಾನ್ಯನ ಒಳಗಡೆ ಪ್ರವೇಶ ಪಡೆದವರು.

ತಮ್ಮದು ದೊಡ್ಡ ಪರಂಪರೆ ಎಂದು ಹೇಳುತ್ತ ತಮ್ಮ ಗುರುಗಳು ಎಲ್ಲರಂತೆ ಹುಟ್ಟಿದವರಲ್ಲ, ಅವರು 'ಅಯೋನಿಜರು', ಅಂದರೆ ತಂದೆ - ತಾಯಿಯ ಸಂಪರ್ಕ ಇಲ್ಲದೆ ಲಿಂಗದಲ್ಲಿ ಹುಟ್ಟಿದ ಲಿಂಗೋದ್ಭವರು ಎಂದು ಸಾರುತ್ತ ಹೊರಟರು. ತಮ್ಮ ಅನುಕೂಲಕ್ಕೆ ಎಷ್ಟು ಬೇಕೋ ಅಷ್ಟಷ್ಟೆ ಶರಣರ ವಚನಗಳನ್ನು ಬಳಸಿಕೊಂಡು ಜನರ ಮೇಲೆ ಒಂದು ನಮೂನೆಯ ಮೋಡಿಯನ್ನೆ ಮಾಡಿದವರು. ಜನರ ಅಜ್ಞಾನವನ್ನೆ ತಮ್ಮ ಬಂಡವಾಳ ಮಾಡಿಕೊಂಡು ಸಂಸ್ಕೃತದ ನಾಲ್ಕೆಂಟು ಸುಳ್ಳು ಸೊಟ್ಟುಗಳನ್ನು ಹೇಳುತ್ತ ಜನ ಬೆಕ್ಕಸಬೆರಗಾಗುವಂತೆ ಮಾಡಿದವರು. ಜನರೆಲ್ಲ ಬಾಯ್ದೆರೆದು ತಿಳಿಯದ ಇವರ ಉಪದೇಶ ಕೇಳುತ್ತ ಅವಕ್ಕಾದಾಗ ಅವರಿಗೆ ಅರಿವಿಲ್ಲದೆ ಅವರನ್ನು ದೋಚಿದವರು. ಇವರು ಅಂದಿನಿಂದ ಇಂದಿನವರೆಗೆ ಮಾಡಿದ್ದೆಂದರೆ ಲಿಂಗವಂತರನ್ನು ಕರ್ಮಠಿಗಳಾಗುವಂತೆ ಕುಲಗೆಡಿಸಿದ್ದು ಮಾತ್ರ. ದಯವೇ ಧರ್ಮದ ಮೂಲ ಎಂದು ಹೇಳುವ ಬದಲು ಭಯವೆ ಧರ್ಮದ ಮೂಲ ಎಂದು ಮಾಂತ್ರಿಕರಂತೆ, ಕಣ್ಕಟ್ಟು ವಿದ್ಯೆ ಕಲಿತು ಜನರನ್ನು ಮರುಳು ಮಾಡಿದವರು. ಲಿಂಗಾಯತರ ಜಗದ್ಗುರುಗಳೆಂದು ಹೇಳುತ್ತ ಹೇಳುತ್ತ ಜಾಗದ ಗುರುಗಳಾದವರು.

ಇವರ ಪಂಚಪೀಠಗಳ ಮೂಲ ಸ್ಥಳದಲ್ಲಿ ಇರುವ ಲಿಂಗಾಯತರು ಎಷ್ಟು? ಅವರೆಲ್ಲ ಈ ಜಾಗದ ಗುರುಗಳಿಂದ ಎಷ್ಟು ಪ್ರಭಾವಿತರಾಗಿದ್ದಾರೆ? ಎಂದು ನೋಡಿದರೆ ಇವರ ಇಬ್ಬಂದಿತನ ಬಟಾಬಯಲಾಗುತ್ತದೆ. ಕರ್ನಾಟಕ ಅದರಲ್ಲೂ ಉತ್ತರ ಕರ್ನಾಟಕದ ಲಿಂಗಾಯತರನ್ನು ಮೂಲವಾಗಿಟ್ಟುಕೊಂಡು ಹುಟ್ಟಿಕೊಂಡ ಈ ಚತುರಾಚಾರ್ಯರು ಪಂಚಾಚಾರ್ಯರಾದದ್ದು 17ನೇ ಶತಮಾನದಲ್ಲಿ ಎಂದು ಇತಿಹಾಸ ಸ್ಪಷ್ಟವಾಗಿ ಹೇಳುತ್ತದೆ. ಕಾಶಿಯ ಗೋಸಾವಿ ಮಠಕ್ಕೆ ಮಲ್ಲಿಕಾರ್ಜುನ ಎಂಬ ಲಿಂಗಾಯತ ವ್ಯಕ್ತಿಯೊಬ್ಬ ಗುರುವಾಗಿ ನೇಮಕವಾಗಿದ್ದ ಆತನ ನಂತರ ಈ ಕುತಂತ್ರಿಗಳು ಮತ್ತೇನೇನೋ ತಂತ್ರಗಳನ್ನು ಹೂಡಿ ಕಾಶಿಯ ಜಂಗಮವಾಡಿ ಮಠವನ್ನು ತಮ್ಮ ಕಬ್ಜಾಕ್ಕೆ ತೆಗೆದುಕೊಂಡು ಪಂಚಾಚಾರ್ಯರಾದರು.


ಪಂಚಪೀಠಿಗಳು

ಆಂಧ್ರದ ಆರಾಧ್ಯರ ಜಂಗಮರ ಹಿಡಿತದಲ್ಲಿ ಕರ್ನಾಟಕದ ಶರಣ ಜಂಗಮರು ಸಿಕ್ಕು ಸಂಪೂರ್ಣ ತಮ್ಮ ಅಸ್ತಿತ್ವವನ್ನು ಕಳಕೊಂಡರು. ತಮ್ಮ ಮೂಲ ತತ್ವಗಳನ್ನು ಮರೆಮಾಚಿ ಮತ್ತದೆ ಪುರೋಹಿತಶಾಹಿಯ ಬೇರುಗಳನ್ನು ಬೆಳೆಸುತ್ತ ನಡೆದರು. ಬಾಡಿಗೆಗಾಗಿ ಕೆಲವು ದಿನ ಇರುತ್ತೇನೆಂದು ಸಂಧಾನದಿಂದ ಬಂದ ಈ ಆರಾಧ್ಯರು ಮನೆಯೆ ತಮ್ಮದೆಂದು ತಮ್ಮ ಕಬ್ಜಾಕ್ಕೆ ತೆಗೆದುಕೊಂಡು ಈಗ ತಕರಾರು ಶುರುಹಚ್ಚಿಕೊಂಡಿದ್ದಾರೆ. ಇವರು ತುಂಬಿದ ಕೊಡದಲ್ಲಿ ಒಂದು ಹನಿ ತೀರ್ಥ ಹಾಕಿ ಇಡೀ ಕೊಡವೇ ತಮ್ಮದೆಂದು ಹೇಳುವ ಹುನ್ನಾರ ನಡೆಸಿದ್ದಾರೆ. ಮತ್ತೊಂದು ಚೋದ್ಯದ ಸಂಗತಿಯೆಂದರೆ ರೇವಣಾರಾಧ್ಯನ ಅಷ್ಟೋತ್ತರ ಶತನಾಮಾವಳಿಯನ್ನು ಓದುವಾಗ ಇಂದಿಗೂ ಕೂಡ ಈ ಆರಾಧ್ಯ ಜಂಗಮರು "ಲಿಂಗಯಜ್ಞೋಪವೀತಿಯೆವೇ ನಮಃ" ಎಂದು ಹೇಳುತ್ತಾರೆ. ಈ ಸ್ತುತಿಯೇ ಸಾಕು ಇವರು ಲಿಂಗವನ್ನೂ, ಜನಿವಾರವನ್ನೂ ಎರಡೂ ಒಟ್ಟೊಟ್ಟಿಗೆ ಧರಿಸುತ್ತಿದ್ದರೆಂಬುದು ತಿಳಿಯುತ್ತದೆ.

ಅಷ್ಟೆಲ್ಲ ಏಕೆ? ಇಡೀ ಕರ್ನಾಟಕದಲ್ಲಿ ಕೇವಲ ಒಂದು ಶತಮಾನಗಳ ಆಚೆ ಕರ್ನಾಟಕದ ಬಹುತೇಕ ಮಠಗಳಿಗೆ ಲಿಂಗಾಯತ ಅಂದರೆ ಭಕ್ತರಾಗಿರುವ ಎಲ್ಲರೂ ಮಠಾಧೀಶರಾಗಿರುತ್ತಿದ್ದರು. ಹನ್ನೆರಡನೆಯ ಶತಮಾನದ ವಚನಕಾರರಲ್ಲಿ ಬರುವ 'ಜಂಗಮ' ಪದ ಒಂದು ಜಾತಿವಾಚಕ ಪದವಾಗಿರಲಿಲ್ಲ, ಅವರೆಲ್ಲ ಸಮಾಜವನ್ನೆ ಜಂಗಮವೆಂದು ಕರೆದಿದ್ದರು. ಬಹುತೇಕ ವಚನಕಾರರ ವಚನಗಳಲ್ಲಿ ಜಂಗಮವು 'ನಪುಂಸಕಾರ್ಥ'ದಲ್ಲಿ ಕೆಲವು ಕಡೆ 'ಪುಲ್ಲಿಂಗಾರ್ಥ'ದಲ್ಲಿ ಬಳಕೆಯಾಗಿರುವುದೆ ಈ ಮಾತಿಗೆ ಸಾಕ್ಷಿಯನ್ನು ಒದಗಿಸುತ್ತದೆ.

'ಜಂಗಮದೊಳಗೆ ಲಿಂಗಯ್ಯನಿದ್ದಾನೆ', 'ಲಿಂಗದ ಬಾಯಿ ಜಂಗಮ', 'ಜಂಗಮದ ಮುಖಲಿಂಗವಾದ ಕಾರಣ ಜಂಗಮಕ್ಕಲ್ಲದೆ ಮಾಡೆನು ಧನವನು', 'ಪರಸೇವೆಯ ಮಾಡುವೆನಯ್ಯ ಜಂಗಮ ದಾಸೋಹಕ್ಕೆಂದು' ಎಂಬ ವಾಕ್ಯಗಳಲ್ಲಿಯ 'ಜಂಗಮ' ಪದ ಸಂಪೂರ್ಣ ಸಮಾಜವನ್ನು ಸೂಚಿಸುತ್ತದೆ. ಆದರೆ ಇಂದು 'ಜಂಗಮ'ವೆಂಬುದು ಒಂದು ಜಾತಿಯೆಂದೆ ಬಿಂಬಿತವಾಗುತ್ತ ನಡೆದಿರುವುದು ಲಿಂಗಾಯತರ ಅಧಃಪತನಕ್ಕೆ ಕಾರಣವಾಗಿದೆ. ಹಾಗೆ ನೋಡಿದರೆ ಹನ್ನೆರಡನೆಯ ಶತಮಾನದಲ್ಲಿ ಇದ್ದ ಜಂಗಮರು ಯಾರೂ ಜಂಗಮ ಜಾತಿಯ ಮೂಲದವರಾಗಿರಲಿಲ್ಲ, ಹಳ್ಳಿಗೆ ಏಕರಾತ್ರಿ ಪಟ್ಟಣಕ್ಕೆ ಪಂಚರಾತ್ರಿ ಎಂದು ತಿರುಗಾಡುತ್ತ ಧರ್ಮಬೋಧೆಯನ್ನು ನಡೆಸುತ್ತಿದ್ದ ಸಮಾಜದ ಆರೋಗ್ಯವನವನ್ನು ತಮ್ಮ ಕಾಯಕದೊಂದಿಗೆ ನಡೆಸಿಕೊಂಡು ಹೊರಟಿದ್ದ ಜನಗಳಿಗೆ ಜಂಗಮವೆಂದು ಕರೆದಿದ್ದರು. "ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ ಹಾಸನಿಕ್ಕಿ ಸಾಲಿಗನಾದ. ವೇದವನೋದಿ ಹಾರುವನಾದ"- ಎಂಬ ವಚನದ ಸಾಲುಗಳೆ ಇದನ್ನು ಸಾರಿ ಹೇಳುತ್ತವೆ. ಅಷ್ಟೇ ಏಕೆ? 'ಜಂಗಮ ಪುಂಗವನೆಂದು' ಎಲ್ಲರಿಂದಲೂ ಕರೆಯಿಸಿಕೊಂಡಿದ್ದ ಅನುಭವ ಮಂಟಪದ ಅಧ್ಯಕ್ಷರೆ ಆಗಿದ್ದ ಅಲ್ಲಮಪ್ರಭುಗಳು ನಟವರ ಜಾತಿಗೆ ಸೇರಿದವರು.

ಹೀಗೆ ವಿಶಾಲ ಅರ್ಥದಲ್ಲಿ ಬಳಕೆಯಾಗಿದ್ದ ಜಂಗಮ ಎಂಬ ಶಬ್ದ ಬರುಬರುತ್ತ ಜಡವಾಗುತ್ತ ಹೋಯಿತು. ಯಾವುದನ್ನೆಲ್ಲ ವಿರೋಧಿಸಿಕೊಂಡು ಲಿಂಗಾಯತ ಧರ್ಮ ಹುಟ್ಟಿಕೊಂಡಿತ್ತೋ ಅವೆಲ್ಲ ಜೊಳ್ಳುಗಳು ಮತ್ತೆ ಬಂದು ಲಿಂಗಾಯತ ಧರ್ಮದಲ್ಲಿ ಸೇರಿಸಲ್ಪಟ್ಟವು. ಹೋಮ-ಹವನ ಮಾಡುವುದು, ವಾರನೋಡುವುದು, ಪಂಚಾಂಗ ಕೇಳುವುದು, ತಿಥಿ ಮಾಡುವುದು, ಒಳ್ಳೆಯ ಘಳಿಗೆ-ಕೆಟ್ಟ ಘಳಿಗೆಯನ್ನು ನಿರ್ಧರಿಸುವುದೆಲ್ಲ ನಡೆದುಬಿಟ್ಟವು.

ಕರ್ನಾಟಕದಾದ್ಯಂತ ಇರುವ ಬಹುತೇಕ ಮಠಗಳಲ್ಲಿ ಅಮರಿಕೊಂಡಿರುವ ಸ್ವಾಮಿಗಳೆಲ್ಲ ಬ್ರಾಹ್ಮಣ್ಯಕ್ಕೆ ಜೋತುಬಿದ್ದ ಮಠಾಧಿಪತಿಗಳೆ ಆಗಿದ್ದಾರೆ. ಅವರ ಮಠದಲ್ಲಿ ಇಂದಿಗೂ ತಾಯಿತ ಕಟ್ಟುವುದು, ಕರಿದಾರ ಮಂತ್ರಿಸಿ ಕೊಡುವುದು, ಸ್ಥಾವರ ಲಿಂಗಗಳಿಗೆ ತುಪ್ಪದ ದೀಪ ಹಚ್ಚುವುದು, ನೈವೇದ್ಯ ನೀಡುವುದು ನಡೆಸಿಕೊಂಡು ಹೊರಟಿದ್ದಾರೆ. ತಮ್ಮಲ್ಲಿಗೆ ಬಂದ ಭಕ್ತಾದಿಗಳನ್ನು ಮರುಳು ಮಾಡಲು ಸಂಸ್ಕೃತದ ನಾಲ್ಕಾರು (ಬಾಯಿಪಾಠ ಮಾಡಿದ) ಶ್ಲೋಕಗಳನ್ನು ಹೇಳಿ ಅವರನ್ನೆಲ್ಲ ತಬ್ಬಿಬ್ಬುಗೊಳಿಸುತ್ತಿದ್ದಾರೆ. "ವೇದಕ್ಕೆ ಒರೆಯಕಟ್ಟುವೆ ಶಾಸ್ತ್ರಕ್ಕೆ ನಿಗಳವನಿಕ್ಕುವೆ, ತರ್ಕದ ಬೆನ್ನ ಬಾರನೆತ್ತುವೆ" ಎನ್ನುತ್ತಾರೆ ಬಸವಣ್ಣನವರು.

'ಶಾಸ್ತ್ರವೆಂಬುದು ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರಗೋಷ್ಠಿ', 'ಗೀತವ ಹಾಡಿದಡೇನು? ಶಾಸ್ತ್ರ ಪುರಾಣವ ಕೇಳಿದರೇನು? ಮನವರಿದು ಲಿಂಗ- ಜಂಗಮವ ಪೂಜಿಸಲರಿಯದವನೂ, ಎಲ್ಲರೂ ಅನುಭಾವಿಯಾದಡೇನು? ಭಕ್ತಿ ಇಲ್ಲದವರನೊಲ್ಲ', 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂದು ಬಸವಣ್ಣನವರ ವಿಚಾರ ಉತ್ತರ ಮುಖವಾದರೆ ಇವರದು ದಕ್ಷಿಣ ಮುಖ. 'ಅಂದು-ಇಂದು ಮತ್ತೊಂದೆನಬೇಡ, ದಿನವಿಂದೆ ಶಿವಶರಣೆಂಬವಂಗೆ, ದಿನವಿಂದೆ ಹರಶರಣೆಂಬವಂಗೆ' ಎಂದು ಹೇಳಿದ ಶರಣರೆಲ್ಲಿ? ಈ ಜಾತಿಜಂಗಮರೆಲ್ಲಿ? ಈ ಪುರೋಹಿತ ವರ್ಗದ ಪಳಿಯುಳಿಕೆಗಳು ಬಸವಣ್ಣನವರ ಕಾಲದಲ್ಲಿಯೂ ಇದ್ದವು. ಆಗ ಅವರೆಲ್ಲ 'ಲಾಂಛನಕ್ಕೆ ಶರಣೆಂಬೆ. ಅವರ ಅಂತರಂಗ ನೀವೇ ಬಲ್ಲಿರಿ' ಎಂದು ಹೇಳುತ್ತಾರೆ. 'ಮುಂಡೆ ಬೋಳಾದರೇನು? ಮನಬೋಳಾಗದನ್ನಕ್ಕರ? ಶಂಖ ಗಿಣ್ಣಲು ದಂಡಾಗ್ರವ ಹಿಡಿದು ಊರೂರು ತಿರುಗುವ ಗಾವಿಲರ ಜಂಗಮರಾಗಬಹುದೆ?' ಎಂದು ಪ್ರಶ್ನಿಸುತ್ತಾರೆ. ಇದಕ್ಕೂ ಮುಂದೆ ಹೋಗಿ ಚೆನ್ನಬಸವಣ್ಣನವರ ಬಸವಣ್ಣನವರ ಅಭಿಪ್ರಾಯವನ್ನೂ ಕಡೆಗಣಿಸಿ 'ಲಾಂಛನಕ್ಕೆ ಶರಣೆಂಬೆ ಎಂಬ ಭಾವ ಬಸವಣ್ಣನವಗಾಯಿತು ಎನಗಲ್ಲ!' ಎಂದು ಅರ್ಭಟಿಸಿದ್ದಾರೆ.

ಆದ್ದರಿಂದಲೆ ಅಂದು ಕುಂಬಾರರು, ಕಬ್ಬಲಿಗರು, ಮೇದಾರರು, ಹೊಲೆಯರು, ಡೋಹಾರರು, ಬಡಿಗಾರರು ಶೋಷಿತ ಸಮುದಾಯವನ್ನು ಅಪ್ಪಿಕೊಂಡು ಬಂದಿದ್ದ ಶರಣರ ವಿಚಾರಗಳಿಗೆ ಎಳ್ಳುನೀರು ಬಿಟ್ಟು ತಮ್ಮ ಕರ್ಮಠತನವನ್ನು ಸಮಾಜದ ಜನಗಳ ಮೇಲೆ ಹೇರುತ್ತ ಹೊರಟಿರುವ ಬಹುತೇಕ ಮಠ-ಪೀಠಗಳ ಸ್ವಾಮಿಗಳು ಲಿಂಗಾಯತ ಸಮುದಾಯಕ್ಕೆ ಪೀಡಗಳೆ ಹೊರತು, ಅವರು ಗುರುಗಳಾಗಲು ಹೇಗೆ ಸಾಧ್ಯ? ಜಾತ್ಯತೀತ ಸಂಘಟನೆಯಾಗಿದ್ದ ಲಿಂಗಾಯತ ಬರುಬರುತ್ತ ಅದೂ ಒಂದು ಜಾತಿಯಾಗಿ ಮಾರ್ಪಟ್ಟಿದ್ದು ಈ ಅನಿಷ್ಟ ಜಾತಿ ಜಂಗಮ ಮೂಲದ ಸ್ವಾಮಿಗಳಿಂದ ಎಂದು ಅನಿವಾರ್ಯವಾಗಿ ಹೇಳಲೆಬೇಕಿದೆ.

ಇನ್ನಾದರೂ ಲಿಂಗಾಯತರು ತಮ್ಮ ಜಾತಿಗೆ ಕಂಟಕಪ್ರಾಯರಂತೆ ಅಂಟಿಕೊಂಡಿರುವ, ಬಸವ ತತ್ವಗಳಿಗೆ ಸಂಪೂರ್ಣ ತಿಲಾಂಜಲಿ ಇಟ್ಟಿರುವ ಜಾತಿಜಂಗಮರ (ಪಂಚಾಚಾರ್ಯರ) ಪರಲು ಹರಕೊಳ್ಳಬೇಕು. ಇಲ್ಲದೆ ಹೋದರೆ ಬಸವಾದಿ ಶರಣರ ವಿಚಾರಗಳಿಗೆ ಲಿಂಗಾಯತರು ಎಳ್ಳು ನೀರು ಬಿಟ್ಟಂತಾಗುತ್ತದೆ.

• ವಿಶ್ವಾರಾಧ್ಯ ಸತ್ಯಂಪೇಟೆ
satyampet1969@gmail.com

ಗೋವು ಮಾತ್ರ ಶ್ರೇಷ್ಠವೇ? ಕತ್ತೆ ಯಾಕಲ್ಲಾ?

ಕಳೆದ ಶುಕ್ರವಾರ, ಏಪ್ರಿಲ್ 23ರಂದು ಲಂಕೇಶ್ ಪ್ರಕಾಶನದ 'ಗೋವು ಪವಿತ್ರ ಎಂಬ ಮಿಥ್ಯೆ' ಪುಸ್ತಕವನ್ನು ಬಿಡುಗಡೆ ಮಾಡಿದ ಡಾ. ಬರಗೂರು ರಾಮಚಂದ್ರಪ್ಪನವರ ಭಾಷಣವನ್ನು ನಮ್ಮ ಎಲ್ಲಾ ಓದುಗರಿಗಾಗಿ ಇಲ್ಲಿ ನೀಡಿದ್ದೇವೆ.



ಡಿ.ಎನ್.ಝಾರವರ 'ಗೋವು ಪವಿತ್ರ ಎಂಬ ಮಿಥ್ಯೆ' ...ನ್ನು ಅನುವಾದಿಸಿರುವ ನಾ.ದಿವಾಕರ್ ಮತ್ತು ಲಂಕೇಶ್ ...ನದ ಮೂಲಕ ಇದನ್ನು ಪ್ರಕಟಿಸಿರುವ ಗೌರಿ ಲಂಕೇಶ್ ...ೊದಲಿಗೆ ವಿಶೇಷ ಅಭಿನಂದನೆಗಳನ್ನು ಹೇಳುತ್ತೇನೆ. ...ಂತಹ ಪುಸ್ತಕಗಳನ್ನು ವ್ಯಾಪಾರಿ ದೃಷ್ಟಿಯ ಪ್ರಕಾಶಕರು ...ಮಾಡೋದಿಲ್ಲ, ಏಕೆಂದರೆ ಇವು ಅವರಿಗೆ ಮಹತ್ವವಲ್ಲ. ...ವಿವಾದಗಳನ್ನು ಹುಟ್ಟು ಹಾಕೋದರಿಂದ ಅಥವಾ ...ರಿಕ ವಾಗ್ವಾದ ಸೃಷ್ಟಿಸುವುದರಿಂದ ಆ ಗೊಡವೆ ...ಗೆ ಬೇಡ.

...ಈ ಕೃತಿಗೆ ಸಮಕಾಲೀನ ಮಹತ್ವವಿದೆ. 1964ರಿಂದ ...ಹತ್ಯಾ ನಿಷೇಧ ಕಾಯ್ದೆ ಅನ್ನೋದು ನಮ್ಮಲ್ಲಿ ಅಸ್ತಿತ್ವದಲ್ಲಿದೆ. ... ಒಂದು ವಯೋಮಾನದ ನಂತರದ ಜಾನುವಾರು ... ಕೊಂದು ತಿನ್ನಲು ಅವಕಾಶ ಮಾಡಿಕೊಟ್ಟಿತ್ತು. ...ವರ್ಷ ದಾಟಿದ ಜಾನುವಾರುಗಳನ್ನು ಕೊಲ್ಲುವ ...ಶವನ್ನು ಮಾಡಿಕೊಟ್ಟ ಕಾನೂನಿದ್ದರೂ, ಕರ್ನಾಟಕ ...ರ ಮತ್ತೊಂದು ಕಾನೂನನ್ನು ಜಾರಿಗೆ ತರಲು ಹೊರ ... ಅದು ಜಾನುವಾರು ಹತ್ಯೆ ನಿಷೇಧ ಮತ್ತು ಸಂರಕ್ಷಣೆ ...ರ ರೂಪದಲ್ಲಿ ಹೊರಬಂತು. ಬರೀ ಗೋವುಗಳನ್ನಷ್ಟೇ ... ಇತರ ಜಾನುವಾರುಗಳನ್ನೂ ಇದರಲ್ಲಿ ಸೇರಿಸಿದ್ದಾರೆ. ...ದರೆ ಜನ ಏನು ತಿನ್ನಬೇಕು? ಸರ್ಕಾರಕ್ಕೆ ಗೊತ್ತಿದೆ. ...ಷ್ಯರು ಮನುಷ್ಯರನ್ನು ...ಕು ಅಂತ.

...ನುಷ್ಯರನ್ನು ಮನುಷ್ಯರು ...ಂತಹ ಒಂದು ಪರಿಸ್ಥಿತಿ ... ಸೃಷ್ಟಿ ಮಾಡ್ತಿದ್ದೇವೆ, ...ಗಿ ಈ ಮಸೂದೆ ತರ್‍ತಾ ಇದ್ದೇವೆ, ಅಂತಹ ಭೀಕರ ಅನಾಗರಿಕ ...ಯನ್ನು ಹುಟ್ಟುಹಾಕು ...ಅನ್ನೋದು ಸರ್ಕಾರದ ವಿಚಾರ. ಇದನ್ನು ಮುಚ್ಚೋಕೆ ...ವಾರು ಸಂರಕ್ಷಣೆ ಮಾಡ್ತೀವಿ ಅನ್ನೋ ಮುಖವಾಡ ...ದ್ದಾರೆ. ಹೀಗೆ ಇವತ್ತು ಸರ್ಕಾರ ನಡೆದುಕೊಳ್ಳುತ್ತಿರುವಾಗ ...ಪುಸ್ತಕದ ಪ್ರಕಟಣೆ ತೀರಾ ಅಗತ್ಯವಾಗಿತ್ತು.

... ಕೃತಿ ಬರೀ ತರ್ಕಗಳನ್ನ ಆಧರಿಸಿಲ್ಲ. ಇದು ...ಯನಶೀಲ, ಅಧ್ಯಯನ ಯೋಗ್ಯ ಕೃತಿಯಾಗಿದೆ. ಇಲ್ಲಿ ... ಪವಿತ್ರ ಅನ್ನೋ ಹಿಂದೂತ್ವವಾದಿಗಳ ತರ್ಕ ... ನಾನು ಉತ್ತರ ಕೊಡ್ತೇನೆ ಅನ್ನೋದಷ್ಟೇ ಇಲ್ಲ, ...ಗಿ ಇದು ಗೋವುಗಳ ಕುರಿತಾದ ಒಂದು ಆಕರ ...ಂತಿದೆ. ಇಲ್ಲಿ ವಿರೋಧಕ್ಕಾಗಿ ವಿರೋಧ ಅನ್ನುವ ...ತಿಯಿಲ್ಲ, ಎದುರಾಳಿಗಳು ಹೇಳೋ ಒಂದು ಅಂಶ ...ಕೊಂಡು, ಅದನ್ನು ವಿರೋಧಿಸುತ್ತ ತಮ್ಮ ವಾದದ ...ನೆ ಮಾಡಿಕೊಂಡಿಲ್ಲ, ಬದಲಾಗಿ ಈ ಚೌಕಟ್ಟಿ...ನ ಈ ಕೃತಿ ವಿಸ್ತರಿಸಿದೆ. ವಿರೋಧಕ್ಕಾಗಿ ವಿರೋಧ ... ಪ್ರತಿಕ್ರಿಯೆಗಾಗಿ ಪ್ರತಿಕ್ರಿಯೆಯಿರದ ಒಂದು ಪ್ರಜಾ...ಪ್ರಬುದ್ಧ ಕೃತಿ ಇದಾಗಿದೆ. ಇಲ್ಲಿ ಲೇಖಕರು ಹಲವಾರು ...ನಗಳ ಮೂಲಕ ತಲುಪುವ ಪ್ರತಿ ಅಂತಿಮ ...ಯಕ್ಕೆ ಆಧಾರವಾಗಿ ಆಕರಗ್ರಂಥಗಳ ಸಮರ್ಥನೆಯಿದೆ. ...ಶೋಧನೆ, ಇತಿಹಾಸದ ಸಮರ್ಥನೆಯಿದೆ, ಹೀಗಾಗಿ ...ಸಮರ್ಥನೆ, ಸಂಶೋಧನೆಗಳನ್ನು ಒಟ್ಟಿಗೆ ಸೇರಿಸು...ನ ಸಮರ್ಥ ಕೃತಿಯಾಗಿದೆ. ಈ ಕೃತಿ ಗೋವಿನ ಚರಿತ್ರೆಯನ್ನು ಹೇಳುತ್ತದೆ. ಝಾರವರು ಪ್ರಾಚೀನ ಶಾಸನಗಳು, ಕಾವ್ಯಗ್ರಂಥಗಳು, ಸಂಶೋಧನೆಯ ಮೂಲಗಳನ್ನು ಬಳಸಿಕೊಂಡಿದ್ದಾರೆ. ಅನೇಕ ಗ್ರಂಥಗಳನ್ನು ಅಧ್ಯಯನ ಮಾಡಿ ಬರೆದಿದ್ದಾರೆ. ಕೃತಿಯನ್ನು ಓದ್ತಾ ಓದ್ತಾ ಹೋದಂತೆ ಸ್ಪಷ್ಟವಾಗುತ್ತೆ 'ಗೋವು ಪವಿತ್ರ' ಅನ್ನೋದು ಮಿಥ್ಯೆ ಅಂತ.

ಹೆಚ್ಚಾಗಿ ಯಾವುದೇ ಪ್ರತಿರೋಧ ಒಡ್ಡುವಾಗ ಬರೀ ತಮ್ಮ ವಾದದ ಪರ ಇರುವ ಆಕರಗ್ರಂಥಗಳನ್ನು ಅಧ್ಯಯನ ಮಾಡುತ್ತಾರೆ. ಉದಾಹರಣೆಗೆ ಭೈರಪ್ಪನವರ 'ಆವರಣ'ದಲ್ಲಿ ಆಕರಗ್ರಂಥಗಳ ದೊಡ್ಡ ಪಟ್ಟಿಯೇ ಇದೆ. ಆದರೆ ಅದರಲ್ಲಿ ಮಧ್ಯಕಾಲೀನ ಭಾರತದ ಇತಿಹಾಸ ಅಧ್ಯಯನದಲ್ಲಿ ಹೆಸರುವಾಸಿಯಾದ ಇರ್ಫಾನ್ ಹಬೀಬ್ ಅಂತವರ ಆಕರ ಗ್ರಂಥಗಳು ಇಲ್ಲವೇ ಇಲ್ಲ. ಆದರೆ ಇಲ್ಲಿ ಝಾರವರು ಎಲ್ಲ ಬಗೆಯ ಅಂದರೆ ಪರ, ವಿರೋಧ ಇರುವ ಆಕರ ಗ್ರಂಥಗಳನ್ನೆಲ್ಲ ಅಧ್ಯಯನ ಮಾಡಿದ್ದಾರೆ. ಮೊದಲೇ ಒಂದು ತೀರ್ಮಾನಕ್ಕೆ ಬಂದು ನಂತರ ಅಧ್ಯಯನ ಮಾಡುವ ಏಕಮುಖಿ ಅಧ್ಯಯನ ಅಲ್ಲ ಇದು. ಎಲ್ಲ ಸಾಧ್ಯತೆಗಳನ್ನು ಚರ್ಚಿಸುವ ಬಹುಮುಖಿ ಅಧ್ಯಯನವಾಗಿದೆ. ಕೃತಿಯನ್ನು ಓದಿದವರಿಗೆ ಗೋವು ಪವಿತ್ರ ಎನ್ನಲು ಭಾರತದ ಇತಿಹಾಸದಲ್ಲಿ ಯಾವುದೇ ಆಧಾರಗಳಿಲ್ಲ ಎಂಬುದು ಮನದಟ್ಟಾಗುವಂತೆ ಕೃತಿಕಾರರು ಸಮರ್ಥವಾಗಿ ಬರೆದಿದ್ದಾರೆ.

> ಸಿರಿಗಂಧವಷ್ಟೇ ಶ್ರೇಷ್ಠ ಯಾಕೆ, ಜಾಲಿಮರವಲ್ಲವಾ? ಗೋವು ಮಾತ್ರ ಶ್ರೇಷ್ಠ ಯಾಕೆ, ಕತ್ತೆ ಅಲ್ಲಾ? ಎಂಬ ಪ್ರಶ್ನೆಗಳ ಮೂಲಕ ಈ ಸ್ಥಾಪಿತ ಶ್ರೇಷ್ಠ ಕಲ್ಪನೆಗಳನ್ನು ಎದುರಿಸಬೇಕಾಗಿದೆ. ಕೋಮುವಾದಿಗಳಿಗೆ ಪ್ರತಿವಾದ ಹೂಡುವುದಷ್ಟೇ ಅಲ್ಲ ಗೋಹತ್ಯೆಯಂತಹ ವಿಷಯಗಳನ್ನು ಜನರ ಮನಸ್ಸಿಗೆ ತಲುಪಿಸೋ ಕೆಲಸವನ್ನು ನಾವು ಮಾಡಬೇಕಿದೆ. ಜನಗಳ ಮಧ್ಯೆ ಇದ್ದುಕೊಂಡು ಜನ ಈ ವಿಚಾರದ ಕಡೆ ಬರುವಂತೆ ನಾವು ವಿಶಾಲವಾದ ಕಾರ್ಯತಂತ್ರ ರೂಪಿಸಿಕೊಳ್ಳಬೇಕಿದೆ.

ಇಲ್ಲಿ ಋಗ್ವೇದದ ಉಲ್ಲೇಖವೂ ಇದೆ, ಅಥರ್ವಣ ವೇದದ ಉಲ್ಲೇಖವೂ ಇದೆ. 'ಗೋವು ಪವಿತ್ರ' ಎನ್ನುವ ಅನಿಸಿಕೆ ಹೊಂದಿರುವ ಗ್ರಂಥಗಳ ಉಲ್ಲೇಖವೂ ಇದೆ. ಆದರೆ ಅದು ಹಾಗಲ್ಲ ಎಂದು ತೋರಿಸುವ ಸಾಕ್ಷ್ಯಗಳ ಪ್ರಸ್ತಾಪವೂ ಇದೆ. ಗೋವು ತಿನ್ನೋದು ತಪ್ಪಲ್ಲ ಅನ್ನುವ ಮನುಸ್ಮೃತಿಯನ್ನು ಉಲ್ಲೇಖಿಸಲಾಗಿದೆ. ಗೋವು ಪವಿತ್ರ ಅನ್ನೋ ಗ್ರಂಥಗಳನ್ನೂ ಉಲ್ಲೇಖಿಸಲಾಗಿದೆ. ಇಂತಹ ಗ್ರಂಥಗಳಲ್ಲಿ ಗೋವನ್ನು ಎಲ್ಲ ಜಾನುವಾರುಗಳ ಮಾತೆ (ತಾಯಿ) ಎಂಬಂತೆ ಉಲ್ಲೇಖಿಸಲಾಗಿದೆ. ಆದರೆ ಇದು ಕೇವಲ ರೂಪಕವಾಗಿದ್ದು ನಮ್ಮ ಜನ ಇದನ್ನು ಕೇವಲ ವ್ಯಾಚ್ಯವಾಗಿ ಅರ್ಥಮಾಡಿಕೊಂಡು ಗೋವಿಗೆ ಪವಿತ್ರ ಸ್ಥಾನ ನೀಡಿದ್ದಾರೆ. ಗೋವು ಪವಿತ್ರ ಅಂತ ನಂಬಿದವರೂ ಇದ್ದರು. ಅಂತಹ ಗ್ರಂಥಗಳು ಇದ್ದವು ಅನ್ನೋದನ್ನ ಗುರುತಿಸುವ ಲೇಖಕರು ಇಂತಹ ಅಭಿಪ್ರಾಯಗಳನ್ನು ಬೇರೆ ಬೇರೆ ಕಾರಣಗಳಿಗಾಗಿ ಹೇಗೆ ಮೂಡಿಸುತ್ತಾ ಬರಲಾಯ್ತು ಎಂಬುದನ್ನು ಆಧಾರಸಮೇತ ವಿವರಿಸುತ್ತಾರೆ.

ಭಾರತದಲ್ಲಿ ಯಾವ ಕಾಲಘಟ್ಟದಲ್ಲೂ ಇಡೀ ಸಮಾಜ ಒಮ್ಮತದಿಂದ ಗೋವನ್ನು ಪವಿತ್ರ ಅಂತ ನಂಬಿರಲಿಲ್ಲ, ಹೇಗೆ ಗೋವಿಗೆ ಪಾವಿತ್ರ್ಯತೆಯನ್ನು ಕೃತಕವಾಗಿ ಜೋಡಿಸುತ್ತಾ ಬರಲಾಯಿತು ಎಂಬುದನ್ನು ಎತ್ತಿತೋರಿಸುತ್ತಾರೆ.

ಈ ಕೃತಿಯಲ್ಲಿ ಮೂರು ಪ್ರಮುಖ ಉಲ್ಲೇಖಗಳಿವೆ. ಭಾರತೀಯ ಗ್ರಾಂಥಿಕ ಮೂಲಗಳಲ್ಲಿ ಅದರಲ್ಲೂ ಬ್ರಾಹ್ಮಣಶಾಹಿಯ ನೆರಳಿನ ಗ್ರಂಥಗಳಲ್ಲಿ ಗೋವಿನ ಕುರಿತು ಬಹುರೂಪಿ ಅಭಿಪ್ರಾಯಗಳಿವೆ. ಅನೇಕ ಅಸಂಬದ್ಧ ವೈರುಧ್ಯಗಳೂ ಇವೆ. ಹೀಗೆ ಗೋವಿನ ಕುರಿತಾದ ಬಹುರೂಪಿ ಅಂಶಗಳನ್ನು ಒಪ್ಪಿಕೊಳ್ಳುತ್ತಲೇ, ಹೇಗೆ ಗೋವಿಗೆ ಕೃತಕವಾಗಿ ಪಾವಿತ್ರ್ಯತೆಯನ್ನು ಅಂಟಿಸಲಾಯಿತು ಎಂಬುದನ್ನು ವಿವರಿಸುತ್ತಾರೆ. 'ಗೋ ಪವಿತ್ರ' ಎನ್ನುವ ಅಭಿಪ್ರಾಯ ಇತ್ತಾದರೂ ಅದು ಕ್ಷೀಣಧ್ವನಿ ಎಂಬುದನ್ನು ಸಾಬೀತು ಮಾಡುತ್ತಾರೆ. ಹಾಗೆಯೇ ವಿವಿಧ ಗ್ರಂಥಗಳನ್ನು ಉಲ್ಲೇಖಿಸಿ ಗೋಮಾಂಸ ಭಕ್ಷಣೆ ಜಾರಿಯಲ್ಲಿತ್ತು ಎಂಬುದನ್ನು, ಬ್ರಾಹ್ಮಣರೂ ತಿನ್ನುತ್ತಿದ್ದರೆಂಬುದನ್ನು ಸಮರ್ಥವಾಗಿ ನಮ್ಮ ಮುಂದಿಡುತ್ತಾರೆ.

ಭಾರತದಲ್ಲಿ ಇಸ್ಲಾಂ ಆಗಮನದ ನಂತರವೇ ಗೋಮಾಂಸ ಭಕ್ಷಣೆ ಶುರುವಾಯಿತು ಎಂದು ಹಿಂದೂತ್ವವಾದಿಗಳು ವಿಚಾರ ಮಂಡಿಸುತ್ತಾರೆ. ಕೋಮುವಾದಿಗಳ ಈ ಧಾರ್ಮಿಕ ರಾಜಕೀಯ ಕುತಂತ್ರವನ್ನು ಅಲ್ಲಗಳೆಯುವ ಝಾರವರು ಇದನ್ನು ಆಧಾರಸಮೇತ ಸುಳ್ಳು ಎಂದು ಬಯಲು ಮಾಡುತ್ತಾರೆ.

ಕಳೆದ ಶತಮಾನದಿಂದ ಕೋಮುವಾದಿ ಸಂಘಟನೆಗಳು ಈ ಗೋಹತ್ಯೆಯ ವಿಷಯವನ್ನು ಎತ್ತುತ್ತ ಹಿಂದೂಗಳನ್ನು ಮುಸ್ಲಿಮರ ವಿರುದ್ಧ ಎತ್ತಿಕಟ್ಟಲು ನೋಡುತ್ತಿದ್ದಾರೆ. ಗೋಹತ್ಯೆ ಚರ್ಚೆಯ ನಿಜವಾದ ಕೇಂದ್ರ ವಸ್ತು ಇದೇ ಆಗಿದೆ ಅಂತ ನನ್ನ ಅನಿಸಿಕೆ. ಯಾರು ಏನು ತಿನ್ನುತ್ತಾರೆ ಅನ್ನೋದು ಅವರ ಆಹಾರ ಸಂಸ್ಕೃತಿಯ ವಿಷಯ. ಅದವರ ಆಹಾರ ಸ್ವಾತಂತ್ರ್ಯದ ವಿಚಾರ. ಒಬ್ಬರು ಗೋವು ತಿನ್ನಬಹುದು, ಹಂದಿ ತಿನ್ನಬಹುದು ಅಥವಾ ಕೆಲವರು ಮಾಂಸಾಹಾರವನ್ನು ತಿನ್ನದೇ ಇರಬಹುದು.

ಯಾವ ಮನುಷ್ಯ ಯಾವ ಆಹಾರ ತಿನ್ನೋಕೆ ಆರಂಭಿಸಿದ ಅನ್ನೋದು ಆಗಿನ ಪರಿಸರಕ್ಕೆ ಸಂಬಂಧಪಟ್ಟಿದ್ದು. ಸಂಸ್ಕೃತಿ ವಿಕಾಸವನ್ನು ಪರಿಶೀಲಿಸಿದಾಗ ಅಂದಂದಿನ ಸಮಾಜೋ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಅಂದಿನ ಆಹಾರ ಸಂಸ್ಕೃತಿ ರೂಪುಗೊಂಡಿದೆ ಎಂಬುದು ಅರ್ಥವಾಗುತ್ತದೆ. ಒಬ್ಬ ಮನುಷ್ಯನ ಆಹಾರ ಕ್ರಮವು ಅಂದಿನ ಸನ್ನಿವೇಶದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅಂತರ್‌ಸಂಬಂಧದಿಂದ ರೂಪುಗೊಂಡಿರುತ್ತೆ. ಆಹಾರ ಸ್ವಾತಂತ್ರ್ಯ ಮನುಷ್ಯನ ವೈಯಕ್ತಿಕ ಸ್ವಾತಂತ್ರ್ಯ ಮಾತ್ರವಲ್ಲ ಅದು ಸಮುದಾಯದ ಸ್ವಾತಂತ್ರ್ಯ... ಆಹಾರದಲ್ಲಿ ಶ್ರೇಷ್ಠ ಕನಿಷ್ಠ ಅನ್ನೋದೇ ಮೂರ್ಖತನ. ನಿಸರ್ಗದೊಂದಿಗೆ ಮುಖಾಮುಖಿಯಾಗುತ್ತಾ ತನ್ನ ಅಸ್ತಿತ್ವ ಕಾಪಾಡಿಕೊಳ್ಳುತ್ತ ಬಂದ ಮನುಷ್ಯ ಆಯಾಕಾಲಘಟ್ಟದ ಅಗತ್ಯಕ್ಕನುಗುಣವಾಗಿ ತನ್ನ ಆಹಾರಕ್ರಮ ರೂಪಿಸಿಕೊಂಡ. ಆಹಾರಕ್ರಮ ಮತ್ತು ಸಂಸ್ಕೃತಿಯ ವಿಚಾರ ಮಾಡೋದು ಬಿಟ್ಟು, ಆಹಾರಕ್ರಮಕ್ಕೆ ಧಾರ್ಮಿಕ ವಿಷಯಗಳನ್ನು ಜೋಡಿಸಿ ಜನರನ್ನು ಒಡೆಯೋದು ಇದೆಯಲ್ಲ, ಅದು ನಿಜವಾದ ಅಪರಾಧ. ಗೋಮಾಂಸ ತಿನ್ನೋದು ಅಪರಾಧವಲ್ಲ, ಈ ವಿಷಯವನ್ನು ರಾಜಕೀಯಕ್ಕೆ ಬಳಸೋದು ಮಹಾಪರಾಧ ಎಂದು ಝಾ ಅಭಿಪ್ರಾಯ ಪಡುತ್ತಾರೆ.


ಈಗ ಕರ್ನಾಟಕದಲ್ಲಿ ಇಂತಹ ರಾಜಕೀಯ ಕುತಂತ್ರ ನಡೆಯುತ್ತಿದೆ. ಅದನ್ನು ಪ್ರತಿಭಟಿಸುವುದು ನಮ್ಮ ಜವಾಬ್ದಾರಿಯಾಗಿದೆ. ಜನರ ಬದುಕಿಗೆ ಅಗತ್ಯವಾದ ಆದ್ಯತೆಗಳನ್ನು ಪೂರೈಸಲಾಗದ ಬಿಜೆಪಿ ಅಥವಾ ಆಳುವ ವರ್ಗಗಳು ಅಂತಹ ಆದ್ಯತೆಗಳನ್ನು ಮರೆಮಾಚಲು ಇಂತಹ ವಿಷಯವನ್ನು ಮುಂಚೂಣಿಗೆ ತರುತ್ತವೆ. ಬಿಜೆಪಿಯಂತಹ ಪಕ್ಷದ ಹಿಡನ್ ಅಜೆಂಡಾ ಜಾರಿಗೆ ತರಲು ಇಂತಹ ಸನ್ನಿವೇಶವನ್ನು ಬಳಸಿಕೊಳ್ಳುತ್ತೆ. ಹೀಗೆ ಆದ್ಯತೆಯ ಪಲ್ಲಟ ಮಾಡಿರುವ ಬಿಜೆಪಿ ಕೋಮುವಾದಿ ಅಜೆಂಡಾವನ್ನು ಗೋವಿನ ಮೂಲಕ ತರಲು ಹೊರಟಿದೆ. ಇಲ್ಲಿ ಗೋವು ನಿಜವಾದ ಬಲಿಪಶು. ನಿಜವಾಗಿ ಗೋವನ್ನು ಕೊಂದೋರು ಅಂದ್ರೆ ಈ ಕೋಮುವಾದಿಗಳು. ಇವರು ಗೋವಿಗೆ ಅವಮಾನ ಮಾಡ್ತಾ ಇದ್ದಾರೆ. ಗೋವನ್ನು ರಾಜಕೀಯ ದಾಳವನ್ನಾಗಿ ಮಾಡಿಕೊಳ್ತಾ ಇದ್ದಾರೆ.

ಇದಕ್ಕೆ ನಾವೇನು ಮಾಡಬೇಕು? ಕೋಮುವಾದ ವಿರೋಧಿಗಳಲ್ಲಿ ಮೂರು ಮಾದರಿಗಳಿವೆ.

ಒಂದು, ಅವರು ಯಾವುದೇ ಜಾತಿ, ಧರ್ಮಕ್ಕೆ ಸೇರಿರಲಿ, ಅದನ್ನು ಮೀರಿ ಸೈದ್ಧಾಂತಿಕವಾಗಿ ವಿರೋಧ ಮಾಡೋರು.. ಇನ್ನೊಂದು, ನಮ್ಮಲ್ಲಿ ಒಂದು ಗಿಲ್ಟ್ ಇರುತ್ತೆ, ಹೆಚ್ಚಾಗಿ ಬ್ರಾಹ್ಮಣರಲ್ಲಿ... ಅದನ್ನು ಮೀರೋಕೆ ಅಗತ್ಯಕ್ಕಿಂತ ಹೆಚ್ಚಾಗಿ ಅಲ್ಪಸಂಖ್ಯಾತರ ಪರ ನಿಲ್ಲೋ ಗುಂಪೂ ಇದೆ. ಮೂರನೆಯ ವಲಯ ಕೋಮುವಾದ ಅಂದರೆ ಬ್ರಾಹ್ಮಣವಾದ ಅಂತ ತಪ್ಪಾಗಿ ಭಾವಿಸಿರುವ ವಲಯವಾಗಿದೆ. ಇದರಲ್ಲಿ ಪ್ರಗತಿಪರರು ಅನಿಸಿರೋ ಕೆಲ ಲಿಂಗಾಯತ ಮಠಾಧೀಶರು ಮುಂಚೂಣಿಯಲ್ಲಿದ್ದಾರೆ. ಕೋಮುವಾದ ಅನ್ನೋದು ಬ್ರಾಹ್ಮಣವಾದವನ್ನು ಒಳಗೊಂಡ, ಅದನ್ನು ಮೀರಿರುವ ಒಂದು ಪ್ರತಿಗಾಮಿ ಸಿದ್ಧಾಂತ ಎಂಬುದನ್ನು ಎಲ್ಲರೂ ಮನಗಾಣಬೇಕಿದೆ.


ಹೀಗೆ ಈ ಮೂರು ವಲಯಗಳು ಗೋಹತ್ಯೆ ನಿಷೇಧ ಮಸೂದೆ ವಿರುದ್ಧ ಮೂರು ದಾರಿಯಲ್ಲಿ ಪ್ರತಿಭಟಿಸ್ತಾ ಇವೆ. ಈ ವಿಷಯವನ್ನು ಕೇವಲ ಬ್ರಾಹ್ಮಣ ಶೂದ್ರರ ವಿಷಯವಾಗಿ, ಬ್ರಾಹ್ಮಣ ಅಲ್ಪಸಂಖ್ಯಾತರ ವಿಷಯವಾಗಿ, ಬ್ರಾಹ್ಮಣ-ದಲಿತರ ವಿಷಯವಾಗಿ ಸಂಕುಚಿತಗೊಳಿಸಬಾರದು ಅಂತ ನಾನು ಹೇಳ್ತೀನಿ.

ಹೀಗೆ ಸಂಕುಚಿತ ದೃಷ್ಟಿಯಲ್ಲಿ ಹೋದರೆ ಇದು ಒಂದು ಹಂತದವರೆಗೆ ಸರಿ ಇರ್ತದೆ. ಆದರೆ ಅದರಾಚೆಯ ಸತ್ಯಗಳು ಮರೆಯಾಗ್ತವೆ. ಬ್ರಾಹ್ಮಣ-ಶೂದ್ರ, ಬ್ರಾಹ್ಮಣ-ದಲಿತ, ಬ್ರಾಹ್ಮಣ-ಅಲ್ಪಸಂಖ್ಯಾತರ ನಡುವಿನ ಪ್ರಶ್ನೆ ಅನ್ನೋದು ಆಂಶಿಕ ಸತ್ಯ. ಈ ಆಂಶಿಕ ಸತ್ಯವನ್ನು ಒಪ್ಪಿಕೊಂಡು, ಅದರಾಚೆಗೂ ನಮ್ಮ ಪರಿಭಾಷೆಯನ್ನು ವಿಸ್ತರಿಸಿಕೊಂಡು ಪ್ರತಿಭಟನೆ ನಡೆಸುವುದು ಇಂದಿನ ಅಗತ್ಯವಾಗಿದೆ.



ಸಿರಿಗಂಧವಷ್ಟೇ ಶ್ರೇಷ್ಠ ಯಾಕೆ, ಜಾಲಿಮರವಲ್ಲವಾ? ಗೋವು ಮಾತ್ರ ಶ್ರೇಷ್ಠ ಯಾಕೆ, ಕತ್ತೆ ಅಲ್ಲಾ? ಎಂಬ ಪ್ರಶ್ನೆಗಳ ಮೂಲಕ ಈ ಸ್ಥಾಪಿತ ಶ್ರೇಷ್ಠ ಕಲ್ಪನೆಗಳನ್ನು ಎದುರಿಸಬೇಕಾಗಿದೆ. ಕೋಮುವಾದಿಗಳಿಗೆ ಪ್ರತಿವಾದ ಹೂಡುವುದಷ್ಟೇ ಅಲ್ಲ ಗೋಹತ್ಯೆಯಂತಹ ವಿಷಯಗಳನ್ನು ಜನರ ಮನಸ್ಸಿಗೆ ತಲುಪಿಸೋ ಕೆಲಸವನ್ನು ನಾವು ಮಾಡಬೇಕಿದೆ. ಜನಗಳ ಮಧ್ಯೆ ಇದ್ದುಕೊಂಡು ಜನ ಈ ವಿಚಾರದ ಕಡೆ ಬರುವಂತೆ ನಾವು ವಿಶಾಲವಾದ ಕಾರ್ಯತಂತ್ರ ರೂಪಿಸಿಕೊಳ್ಳಬೇಕಿದೆ.

ಇಂತಹ ಸಂದರ್ಭದಲ್ಲಿ ಗೋವು ಪವಿತ್ರ ಅನ್ನೋದು ಸುಳ್ಳು ಎಂದು ಅಧ್ಯಯನಶೀಲತೆ ಸಂಶೋಧನೆಗಳ ಮೂಲ ರುಜುವಾತು ಮಾಡುವ ಝಾರವರ ಈ ಪುಸ್ತಕವನ್ನು ಹೊರತಂದಿದ್ದಕ್ಕಾಗಿ ಮತ್ತೊಮ್ಮೆ ಗೌರಿ ಲಂಕೇಶರಿಗೆ, ನಾ.ದಿವಾಕರ್‌ರವರಿಗೆ ಅಭಿನಂದನೆ.



ಕಾಡು ದಾರಿಯಲ್ಲಿ ಸಾಲು ನಡಿಗೆ



ಜಂಗಲ್‌ನಾಮ

ಮಾವೋವಾದಿ ಗೆರಿಲ್ಲಾ ವಲಯದೊಳಗೆ...

3

ಮೂಲ: ಸತ್ನಾಮ್ ಕನ್ನಡಕ್ಕೆ: ಕುಮಾರ್

ಕಳೆದ ರಾತ್ರಿ ಒಂದು ಗಂಟೆಯ ವಿಶ್ರಾಂತಿಯಲ್ಲಿ ನಾನು ಬಹಳ ಕಡಿಮೆಯಾಗಿದ್ದರೂ ಪರವಾಗಿಲ್ಲ ಗಾಢ ನಿದ್ರೆ ಮಾಡಿದೆ. ಆದರೆ, ಎಚ್ಚರದಿಂದಿದ್ದು ಕಾವಲು ಕಾಯುವ ಕೆಲಸದಿಂದ ನನ್ನನ್ನು ಮುಕ್ತಗೊಳಿಸುವ ಮೂಲಕ ಅವರಿಬ್ಬರೂ ನನ್ನ ಮೇಲೆ ಹೊರೆಹೊರಿಸಿದ್ದರು.

"ಬಸು... ಕಳೆದ ರಾತ್ರಿಯ ಸಾಲವನ್ನು ನಾನು ಹೇಗೆ ತೀರಿಸಲಿ?"

"ಅಂದರೆ, ಪಹರೆ ಕೆಲಸವನ್ನು ಮಾಡದೇ ಇದ್ದುದಕ್ಕಾ?"

"ಹೌದು."

"ಆದರೆ ಅದು ನಮ್ಮ ಜವಾಬ್ದಾರಿ."

ಬಸು ಮತ್ತು ಆತನ ಸಂಗಾತಿಯ ಬಳಿ ಯಾವುದೇ ಶಸ್ತ್ರಾಸ್ತ್ರಗಳಿರಲಿಲ್ಲ, ಆದರೂ ಅವರು ಕಾವಲು ಕಾದರು. ನಗರಗಳಿಗೆ ತಾವು ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡು ಹೋಗುವುದಿಲ್ಲ ಎಂದು ಬಸು ಸ್ಪಷ್ಟಪಡಿಸಿದ. ಕಳೆದ ರಾತ್ರಿ ಏನಾದರೂ ಗಂಭೀರ ಅಪಾಯ ಎದುರಾಗಿದ್ದರೆ ಓಡಿಹೋಗುವ ಮೂಲಕ ಮಾತ್ರವೇ ನಮ್ಮ ಜೀವಗಳನ್ನು ಕಾಪಾಡಿಕೊಳ್ಳಬಹುದಿತ್ತಷ್ಟೆ. ವಾಸ್ತವದಲ್ಲಿ ಜಾಗರೂಕವಾಗಿರುವುದಕ್ಕೆ ಕಾವಲು ಕಾಯುತ್ತಾರೆ. ಅಲ್ಲದೇ ಅದು ಮುಂದೆ ಜರುಗಬಹುದಾದ ಅಪಾಯವನ್ನು ಮೊದಲೇ ಗುರುತಿಸಿ ತಡೆಯುವುದಕ್ಕಾಗಿನ ಒಂದು ಮುನ್ನೆಚ್ಚರಿಕೆಯ ಕ್ರಮವೂ ಹೌದು. ರಾತ್ರಿ ಸಮಯದಲ್ಲೂ ಕೂಡ ಆತ ಸ್ವಲ್ಪ ಹೊತ್ತು ಬಿಟ್ಟು ಬಿಟ್ಟು ಬಹಳ ಎಚ್ಚರಿಕೆಯಿಂದ ಶಬ್ದಗಳನ್ನು ಕೇಳಿಸಿಕೊಳ್ಳುತ್ತಾ, ಸುತ್ತಮುತ್ತ ಜಾಗರೂಕತೆಯಿಂದ ನೋಡುತ್ತಾ, ಆಗಾಗ ?ಹ್ಲಾಂ...? ಎಂದು ಉಚ್ಚರಿಸುತ್ತಾ ನಡೆಯುತ್ತಿದ್ದ. ಆತನ ಕಿವಿಗಳು ಬೇಟೆಗಾರನ ಕಿವಿಗಳಷ್ಟೇ ಸೂಕ್ಷ್ಮವಾಗಿದ್ದವು; ಅಸ್ಪಷ್ಟವಾದ ಶಬ್ದಗಳನ್ನು ಹೆಕ್ಕಿಕೊಂಡು ಅವು ಎಲ್ಲಿಂದ ಹೊರಟ ಶಬ್ದಗಳು ಎಂದು ತರ್ಕಿಸಿ ವಿಭಾಗಿಸುವ ಸಾಮರ್ಥ್ಯ ಆತನಿಗಿತ್ತು. ನಮ್ಮ ಕಾಡುದಾರಿ ಕವಲೊಡೆದಾಗಲೆಲ್ಲಾ ಒಂದುಕ್ಷಣ ತನ್ನ ಟಾರ್ಚ್‌ಲೈಟ್ ಹೊತ್ತಿಸಿ, ಕ್ಷಣಾರ್ಧದಲ್ಲಿ ಸರಿಯಾದ ದಾರಿಯನ್ನು ಆಯ್ದುಕೊಳ್ಳುತ್ತಿದ್ದ. ಕೇವಲ ಒಮ್ಮೆ ಮಾತ್ರವೇ ಆತ ತಪ್ಪಿಸಿಗಿದ್ದ; ಆಗಲೂ ಆತ ಹದಿನೈದು - ಇಪ್ಪತ್ತು ಹೆಜ್ಜೆ ಮುಂದೆ ಹೋಗಿ ನಿಂತು, ಕತ್ತಲ ಕಾಡನ್ನೊಮ್ಮೆ ಸೂಕ್ಷ್ಮವಾಗಿ ದಿಟ್ಟಿಸಿ, ತಕ್ಷಣವೇ ನೆಲಕ್ಕೆ ಟಾರ್ಚ್‌ಲೈಟ್ ಹಿಡಿದು, ದಾರಿ ತಪ್ಪಿರುವುದನ್ನು ಖಾತ್ರಿಮಾಡಿಕೊಂಡು ಹಿಂತಿರುಗಿ ಸರಿದಾರಿ ಹಿಡಿದ. ಆ ಕಾಡುದಾರಿಗಳಲ್ಲಿ ಆತ ನಿತ್ಯವೂ ನಡೆಯುತ್ತಾನೆಯೋ ಎಂಬಂತೆ ಕತ್ತಲಲ್ಲೂ ಕಾಡುದಾರಿಗಳ ಜಾಡನ್ನು ಹಿಡಿಯುವ ಅವನ ಕುಶಲತೆಯನ್ನು, ಕಾಡಿನೊಂದಿಗಿನ ಆತನ ನಿಕಟತೆಯನ್ನು ಕಂಡು ನನಗೆ ಪರಮಾಶ್ಚರ್ಯವಾಗುತ್ತಿತ್ತು.

ಬಸು ನಗರದಿಂದ ಸ್ವಲ್ಪ ಆಹಾರ ತೆಗೆದುಕೊಂಡು ಬಂದಿದ್ದ: ಮೂರು ಜನಕ್ಕೆ ಎರಡು ಹಿಡಿ ಅನ್ನ, ಉಪ್ಪಿನಕಾಯಿ ಮತ್ತು ಕೆಲವು ಬಿಸ್ಕೆಟ್‌ಗಳು. ಆತ ನನಗೆ ರಾತ್ರಿ ಭೇಟಿಯಾದಾಗ ಕೇಳಿದ ಮೊದಲ ಪ್ರಶ್ನೆ ಎಂದರೆ:

"ನಿಮ್ಮ ಹತ್ತಿರ ಟಾರ್ಚ್ ಇದೆಯಾ"

ಟಾರ್ಚ್ ಇಲ್ಲದೇ ನಾವಿಬ್ಬರೂ ಒಬ್ಬರನ್ನೊಬ್ಬರು ಭೇಟಿಯಾಗುವುದಕ್ಕೇ ಸಾಧ್ಯವಾಗುತ್ತಿರಲಿಲ್ಲ, ಪ್ರಯಾಣಕ್ಕೆ ಅದು ಕಡ್ಡಾಯವಾಗಿ ಅವಶ್ಯಕ.

ಈ ಯಾವುದೇ ರಾತ್ರಿಯಲ್ಲಿ ನಾವು ಎರಡು ತಾಸುಗಳಿಗಿಂತ ಹೆಚ್ಚು ಮಲಗುವಂತಿರಲಿಲ್ಲ; ಆದರೆ ಬಹಳ ನಿತ್ರಾಣಗೊಂಡಿದ್ದೆವು. ಕಾಡಿನೊಳಗೆ ಪ್ರವೇಶಿಸುತ್ತಿದ್ದಂತೆಯೇ ಖಂಡಿತವಾಗಿಯೂ ಅದರ ರಮಣೀಯತೆಯಲ್ಲಿ ಮುಳುಗಬೇಕೆನಿಸುತ್ತದೆ; ಅದರ ಸಸ್ಯರಾಶಿಯ ಸೊಬಗನ್ನು ಆಸ್ವಾದಿಸಬೇಕೆನಿಸುತ್ತದೆ; ಅಲ್ಲಿರುವ ಪ್ರಾಣಿ-ಪಕ್ಷಿಗಳ ಒಡನಾಡಿಯಾಗಬೇಕೆನಿಸುತ್ತದೆ; ಎಲ್ಲಕ್ಕಿಂತ ಮುಖ್ಯವಾಗಿ ಅಲ್ಲಿ ನೆಲೆಸಿರುವ ಅನನ್ಯ ಅರಣ್ಯವಾಸಿಗಳನ್ನು ಭೇಟಿ ಮಾಡಬೇಕು, ಅವರನ್ನು ಅರ್ಥಮಾಡಿಕೊಳ್ಳಬೇಕು ಎನಿಸುತ್ತದೆ. ಮೊದಲ ಮೂರು ದಿನಗಳಲ್ಲಿ ಇದ್ಯಾವುದನ್ನೂ ಮಾಡುವುದಕ್ಕೆ ನನಗೆ ಅವಕಾಶ ಸಿಗಲಿಲ್ಲ, ಯಾವುದೇ ಅರಣ್ಯವಾಸಿಯನ್ನೂ ಭೇಟಿಯಾಗಲಿಲ್ಲ, ಏಕೆಂದರೆ ನಟ್ಟನಡುವಿನ ದಟ್ಟಾರಣ್ಯವನ್ನು ತಲುಪುವ ತನಕ ನಾವು ಅರಣ್ಯವಾಸಿಗಳ ಹಳ್ಳಿಗಳನ್ನು ಬಹುದೂರದಿಂದಲೇ ಬಳಸಿ ಬರುತ್ತಿದ್ದೆವು. ಜನರು ಸಾಮಾನ್ಯವಾಗಿ ಬಳಸದ ಕಾಡುದಾರಿಯಲ್ಲಿ ಹಾದುಬಂದಿದ್ದೆವು. ಇದು ನನಗೆ ಆಶ್ಚರ್ಯವನ್ನುಂಟುಮಾಡಿದ್ದಲ್ಲದೇ ನನ್ನ ಕುತೂಹಲವನ್ನು ಇನ್ನಷ್ಟು ಕೆರಳಿಸಿತ್ತು. ಜನ ಎಲ್ಲಿದ್ದಾರೆ, ಹೇಗಿದ್ದಾರೆ, ಏನು ತಿನ್ನುತ್ತಾರೆ, ಏನನ್ನು ಉಟ್ಟುಕೊಳ್ಳುತ್ತಾರೆ, ಹೇಗೆ ಬದುಕುತ್ತಾರೆ? ಬಹಳ ಆಶ್ಚರ್ಯ ಎಂದರೆ ಇಷ್ಟು ದಿನ ಈ ಕಾಡಿನಲ್ಲಿ ಯಾರೊಬ್ಬರೂ ಕಣ್ಣಿಗೆ ಬಿದ್ದಿರಲಿಲ್ಲ, ಸಹಜವಾಗಿಯೇ ಇದು ನನ್ನ ಕುತೂಹಲವನ್ನು ತೀವ್ರವಾಗಿ ಕೆರಳಿಸಿತ್ತು. ವಿಶ್ರಾಂತಿರಹಿತ ನಿರಂತರ ನಡಿಗೆ ನನ್ನ ನಿತ್ರಾಣ ಮತ್ತು ನೋವುಗಳನ್ನು ಎಷ್ಟೊಂದು ಸಹಜಗೊಳಿಸಿಬಿಟ್ಟಿತ್ತೆಂದರೆ ನಾನು ಮೊದಲಿನಂತೆ ಸಹಜ ನಡಿಗೆಗೆ ಮರಳಿಬಿಟ್ಟಿದ್ದೆ.

ತಕ್ಷಣವೇ ಗುಡ್ಡಬೆಟ್ಟಗಳಿಂದ ಸುತ್ತುವರಿದ ಭತ್ತದ ಗದ್ದೆಯಲ್ಲಿ ಒಬ್ಬ ವ್ಯಕ್ತಿ ನಿಂತಿರುವುದು ಕಾಣಿಸಿತು. ಸೊಂಟದಲ್ಲಿ ತುಂಡು ಬಟ್ಟೆಯನ್ನು ಬಿಟ್ಟರೆ ಅಕ್ಷರಶಃ ಬೆತ್ತಲೆಯಾಗಿದ್ದ ಆ ವ್ಯಕ್ತಿ ಹಕ್ಕಿಗಳನ್ನು ಬೆದರಿಸಿ ಓಡಿಸುವುದಕ್ಕಾಗಿ ಕೈಯಲ್ಲೊಂದು ಕೋಲು ಹಿಡಿದುಕೊಂಡಿದ್ದ. ಕಾಡಿನೊಳಗಿನ ನಮ್ಮ ಅಲೆದಾಟ ಮೂರು ದಿನಗಳನ್ನು ಪೂರೈಸುವ ಮೊದಲೇ ನಾವು ಕಾಡಿನಲ್ಲೊಬ್ಬ ಮನುಷ್ಯನನ್ನು ಕಂಡೆವು.

"ಬಸು, ಅಲ್ಲಿ ನೋಡು. ಬಹುಶಃ ನಾವು ಯಾವುದೋ ಹಳ್ಳಿಯ ಹತ್ತಿರ ಬರುತ್ತಿದ್ದೇವೆ ಅನ್ನಿಸುತ್ತೆ."

"ಹೌದು, ಈಗಾಗಲೇ ನಾವು ಅನೇಕ ಹಳ್ಳಿಗಳನ್ನು ಬಹಳ ಹತ್ತಿರದಿಂದಲೇ ದಾಟ ಬಂದಿದ್ದೇವೆ. ಅವು ಗಿಡಮರಗಳ ನಡುವೆ ಅವಿತಿರುವುದರಿಂದ ಕಾಣಲಿಲ್ಲ ಅಷ್ಟೆ."

"ಬಹುಶಃ ಜನ ನಮ್ಮನ್ನು ನೋಡಿರಬಹುದು. ನೋಡು, ಆ ಮನುಷ್ಯ ಕೂಡ ನಮ್ಮನ್ನೇ ನೋಡುತ್ತಿದ್ದಾನೆ."

"ಹೌದು, ಆತ ನಮ್ಮನ್ನು ಚೆನ್ನಾಗಿ ಬಲ್ಲ. ಆದರೆ ಅವನಿನ್ನೂ ನಮ್ಮ ಸಹಾನುಭೂತಿಪರ ಬೆಂಬಲಿಗನಾಗಿಲ್ಲ. ನಾವು ಇಲ್ಲೇ ಹಾದು ಹೋಗುತ್ತೇವೆಂಬುದು ಆತನಿಗೆ ಗೊತ್ತು, ಆದರೆ ಅದನ್ನು ಆತ ಯಾರಿಗೂ ಹೇಳೋದಿಲ್ಲ. ನಾವೂ ಕೂಡ ನಮ್ಮನ್ನು ಬೆಂಬಲಿಸುವಂತೆ ಅವನನ್ನು ಕೇಳುವುದಿಲ್ಲ. ಇಲ್ಲಿಯತನಕ ನಾವು ಈ ಪ್ರದೇಶವನ್ನು ನಮ್ಮ ಕೆಲಸಕ್ಕಾಗಿ ಆಯ್ದುಕೊಂಡು ಗಮನ ಕೇಂದ್ರೀಕರಿಸಿಲ್ಲ. ಇಲ್ಲಿಗೆ ಹತ್ತಿರದಲ್ಲೇ ನಗರವಿದೆ. ವಿನಾಕಾರಣ ಪೊಲೀಸರೊಂದಿಗೆ ಪ್ರಮುಖ ಹಣಾಹಣಿಯಾಗದಂತೆ ನೋಡಿಕೊಳ್ಳುತ್ತಿದ್ದೇವೆ."

ಅಲ್ಲಿಯತನಕ ನಿರ್ಭೀತಿಯಿಂದ ಈ ಪ್ರದೇಶವನ್ನು ಹಾದುಹೋಗುತ್ತಿದ್ದೆವು. ಆದರೆ, ಯಾವಾಗ ಬಸು ಈ ಪ್ರದೇಶವಿನ್ನೂ ಅವರ ಕಾರ್ಯಕ್ಷೇತ್ರವಾಗಿಲ್ಲ ಎಂದು ಹೇಳಿದನೋ ಒಂದುಕ್ಷಣ ತುಸು ಚಿಂತೆಗೀಡಾದೆ.

ನಮ್ಮ ಮೇಲೆ ಪೊಲೀಸರು ಮಿಂಚಿನ ದಾಳಿ ಮಾಡಿಬಿಟ್ಟರೆ ನಮ್ಮನ್ನು ರಕ್ಷಿಸಿಕೊಳ್ಳುವುದಕ್ಕೆ ನಮ್ಮ ಹತ್ತಿರ ಏನೂ ಇರಲಿಲ್ಲ, ಹಿಡಿಯಷ್ಟು ಅಕ್ಕಿ ಒಂದಿಷ್ಟು ಬಿಸ್ಕೆಟ್‌ಗಳು ಮಾತ್ರವೇ ಉಳಿದಿದ್ದವು; ಜೊತೆಗೆ ಎಲ್ಲರ ಹತ್ತಿರವೂ ಒಂದೊಂದು ಪೆನ್. ಶತ್ರುವಿನೊಂದಿಗೆ ಮುಖಾಮುಖಿಯಾದರೆ ನಮ್ಮಲ್ಲಿದ್ದ ಪೆನ್‌ಗಳನ್ನೇ "ಗನ್"ಗಳೆಂದು ಹಾಗೂ ಬಿಸ್ಕೆಟ್‌ಗಳನ್ನು "ವಶಪಡಿಸಿಕೊಂಡ ಕಾಟ್ರೀಜ್"ಗಳೆಂದು ಘೋಷಿಸಿಬಿಡುತ್ತಾರೆ; ನನ್ನ ಕಿಟ್‌ನಲ್ಲಿ ಒಂದಿಷ್ಟು ಸಿಹಿಯಾದ ಕಾಂಡಿಗಳಿದ್ದವು. ಅವುಗಳನ್ನವರು ಸುಲಭವಾಗಿ "ಬುಲೆಟ್"ಗಳೆಂದು ಹೇಳಿಬಿಡುತ್ತಾರೆ.

ಇದನ್ನು ಕೇಳಿ ಬಸು ಜೋರಾಗಿ ನಕ್ಕ. "ನಮ್ಮ ಪಕ್ಷ ಈ ಪ್ರದೇಶದಲ್ಲಿ ಸಂಘಟನೆ ಮಾಡುವುದಕ್ಕಾಗಿ ಸದ್ಯಕ್ಕೆ ಪ್ರಯತ್ನಗಳನ್ನು ಹಾಕುತ್ತಿಲ್ಲ ಅನ್ನೋದು ನಿಜವೆ. ಹಾಗೆಂದ ಮಾತ್ರಕ್ಕೆ ಇಲ್ಲಿ ಶತ್ರುದಾಳಿಯ ಅಪಾಯವಿದೆ ಎಂದೇನೂ ಅರ್ಥಮಾಡಿಕೊಳ್ಳುವ ಅವಶ್ಯಕತೆಯಿಲ್ಲ, ಇಲ್ಲೂ ಕೂಡ ಜನ ಗೆರಿಲ್ಲಾಗಳನ್ನು ಬೆಂಬಲಿಸುತ್ತಾರೆ. ಈ ಪ್ರದೇಶದಲ್ಲೇನಾದರೂ ಪೊಲೀಸರ ಚಟುವಟಿಕೆ ಕಂಡುಬಂದರೆ ಮುಂಚಿತವಾಗಿಯೇ ನಮ್ಮನ್ನು ಎಚ್ಚರಿಸುತ್ತಾರೆ" ಆತ ಹೇಳಿದ.

ಅಷ್ಟುಹೊತ್ತಿಗೆ ಹೊಲದಲ್ಲಿ ನಿಂತಿದ್ದ ಆದಿವಾಸಿ ಕಣ್ಮರೆಯಾಗಿದ್ದ. ಆತನನ್ನು ಹಿಂದೆಬಿಟ್ಟು ನಾವೇ ಮುಂದೆ ಬಂದಿದ್ದೆವು. ಯಥಾಪ್ರಕಾರ ನಾವು ಒಬ್ಬರ ಹಿಂದೆ ಒಬ್ಬರಂತೆ ಸಾಲುಗಟ್ಟಿ ನಡೆಯುತ್ತಿದ್ದೆವು. ಗೆರಿಲ್ಲಾಗಳ ನಿಯಂತ್ರಣದಲ್ಲಿರುವ ಪ್ರದೇಶದಲ್ಲೂ ಅವರು ಇದೇ ರೀತಿ ನಡೆಯುತ್ತಾರೆ. ಅದು ಅವರು ರೂಢಿಸಿಕೊಂಡಿರುವ ಸಂಪ್ರದಾಯ; ಅದು ಅವರ ಮಿಲಿಟರಿ ಪದ್ಧತಿ. ಈ ಹೊತ್ತೂ ಕೂಡ ನನ್ನದು ಸಾಲಿನ ಮಧ್ಯದ ಸ್ಥಾನ. ನಾನು ಜಂಗಲ್‌ನಲ್ಲಿ ಇರುವಷ್ಟೂ ದಿನ ನನ್ನ ಸ್ಥಾನ ಮಾತ್ರ ಮಧ್ಯದ್ದೇ ಆಗಿತ್ತು; ನಮ್ಮ ಸಂ... ಮೂರಾಗಿರಲಿ ಅಥವಾ ಹದಿಮೂರಾಗಿರಲಿ ನನ್ನ ಸ್ಥಾನ ಮಾತ್ರ ಮಧ್ಯದ್ದೇ ಆಗಿರುತ್ತಿತ್ತು. ಮಿಲಿಟರಿ ದೃಷ್ಟಿಯಿಂದ ಸಾಲಿನ ಮಧ್ಯದಲ್ಲಿರುವುದು ಸುರಕ್ಷಿತ ಎಂದು ಅವರು ಪರಿಭಾವಿಸಿರುವುದರಿಂದ ಹೊರಗಿನಿಂದ ಜಂಗಲ್‌ಗೆ ಬಂದ ಹೊಸಬರಿಗೆ ಯಾವಾಗಲೂ ಮಧ್ಯದ ಸ್ಥಾನವನ್ನೇ ಕೊಡಲು ಪ್ರಯತ್ನಿಸುತ್ತಾರೆ.

ಮಧ್ಯಾಹ್ನದ ಸುಮಾರಿಗೆ ಬಸು ನಮ್ಮನ್ನು ದ... ಗಿಡಮರಗಳ ಪ್ರದೇಶದಲ್ಲಿ ಬಿಟ್ಟು ಊಟ ಸಂಗ್ರಹಿಸಿಕೊಂಡು ಬರುವುದಕ್ಕಾಗಿ ಹತ್ತಿರದ ಆದಿವಾಸಿ ಹಳ್ಳಿಗೆ ಹೋದ. ಸುಮಾರು ಒಂದು ತಾಸಿನ ನಂತರ ಆತ ಆದಿವಾಸಿ... ಅಚ್ಚುಮೆಚ್ಚಿನ ಊಟವಾದ ಅನ್ನ-ಮೀನುಗಳನ್ನು ತೆಗೆದು... ಕೊಂಡು ವಾಪಸ್ಸು ಬಂದ. ಅತ್ಯಂತ ಕಳಪೆ ಅಕ್ಕಿನುಚ್ಚಿನಿಂದ ಮಾಡಿದ ಆ ಅನ್ನದ ತುಂಬಾ ಚಿಕ್ಕ ಚಿಕ್ಕ ಕಲ್ಲುಹರಳುಗಳು ತುಂಬಿದ್ದವು. ಅದೊಂದು ರೀತಿ ಅನ್ನ-ಕಲ್ಲು ಎರಡು ಒಂದೇ ಎಂಬಂತೆ, ಹಸಿವನ್ನು ನೀಗಿಸುವಲ್ಲಿ ಎರಡೂ ಸರಿಸಮಾನವಾದ ಪಾತ್ರ ನಿರ್ವಹಿಸುತ್ತವೆ ಎಂಬಂತೆ ಇದ್ದ... ಒಣಮೀನನ್ನು ತಿನ್ನುವುದು ಅಷ್ಟೊಂದು ಸುಲಭವಾಗಿರಲಿ... ಅದರಲ್ಲೂ ವಿಶೇಷವಾಗಿ ಯಾವಾಗಲೂ ತಾಜಾ ಮೀ... ಗಳನ್ನು ತಿನ್ನುವವರಿಗಂತೂ ತುಂಬಾ ಕಷ್ಟ. ಅತ್ಯಂತ ... ಪರಿಸ್ಥಿತಿ ಎಂದರೆ ನನಗಂತೂ ಅದು ಸೇರುತ್ತಲೇ ಇರಲಿ... ಎರಡು ತಿಂಗಳ ನನ್ನ ಕಾಡುವಾಸದಲ್ಲೂ ನನಗದು ಹಿ... ಲಿಲ್ಲ. ನಮಗಾಗಿ ಊಟ ಕಳಿಸಿಕೊಟ್ಟವರಿಗೆ ಧನ್ಯವಾ... ಗಳನ್ನು ಅರ್ಪಿಸುತ್ತಲೇ ಅನ್ನವನ್ನು ತಿಳಿ ಮೀನುಸಾರಿ... ಅದ್ದಿಕೊಂಡು ಬಾಯಿಗೆ ಹಾಕಿಕೊಂಡು ಜಗಿಯು... ಬದಲು ನೇರವಾಗಿ ಗುಳುಂ ಅಂತ ನುಂಗಿಬಿಡು... ಅಸಲಿಗೆ ಅನ್ನದಲ್ಲಿದ್ದ ಸಹನೀಯವಲ್ಲದ ಕಲ್ಲುಗಳಿ... ಪರಾರಿಯಾಗುವುದಕ್ಕೆ, ಇದು ಅತ್ಯುತ್ತ... ಮಾರ್ಗವಾಗಿತ್ತು, ಹಲ್ಲುಗಳ ನಡುವೆ ಚಿಕ್ಕ ಕ... ಸಿಕ್ಕಿಕೊಂಡರೆ ಬಹಳ ಕಷ್ಟಪಟ್ಟು ಹೊರತೆಗೆಯುತ್ತಿ... ಆದರೆ, ಬಸು ಮತ್ತು ಇನ್ನೊಬ್ಬ ಗೆರಿಲ್ಲಾ ಮ... ಅದ್ಯಾವುದನ್ನೂ ಲೆಕ್ಕಿಸದೇ ಊಟವನ್ನು ಖುಷಿಯಿ... ಆಸ್ವಾದಿಸುತ್ತಾ ತಿನ್ನುತ್ತಿದ್ದರು. ನಂತರ ಅವರು ಹೇ...ದ್ದೇನೆಂದರೆ ಅವರು ಊಟವನ್ನು ಜಾಸ್ತಿ ಜಗಿಯುವುದ... ಹೋಗುವುದಿಲ್ಲವಂತೆ; ಹಲ್ಲಿನಲ್ಲಿ ಸಿಕ್ಕಿಹಾಕಿಕೊಂಡಿದ... ಹೊರತೆಗೆದು ಎಸೆಯುವುದೂ ಇಲ್ಲವಂತೆ! ಗೆರಿಲ್ಲಾ... ಆದಿವಾಸಿಗಳನ್ನು ಗೌರವಿಸುತ್ತಾರೆ; ಅವರ ಊಟವ... ಎಂದೂ ಕೀಳಾಗಿ ಕಾಣುವುದಿಲ್ಲ, ಅಂಥ ಊಟವ... ಸರಾಗವಾಗಿ ಉಣ್ಣುವುದನ್ನು ಅವರು ಅಭ್ಯಾಸ ಮಾ... ಕೊಂಡುಬಿಟ್ಟಿದ್ದಾರೆ.

ರಾತ್ರಿ ಮತ್ತೆ ನಮ್ಮ ಪ್ಲಾಸ್ಟಿಕ್ ಶೀಟ್‌ಗಳನ್ನು ನೆ... ಮೇಲೆ ಹರಡಿಕೊಂಡು ಮಲಗಿದೆವು. ನಗರದಿ... ಇಷ್ಟೊಂದು ದೂರ ಸಾಗಿಬಂದಿದ್ದರೂ ನಿಯಮದ ಪ್ರ... ಅವರು ಎಚ್ಚರದಿಂದಿದ್ದು ಪಹರೆ ಕಾಯುವ ಕೆಲಸ... ಮಾಡುತ್ತಿದ್ದರು. ಕಾವಲು ಕಾಯುವುದು ಮಿಲಿ... ಜೀವನಶೈಲಿಯ ಅವಿಭಾಜ್ಯ ಅಂಗ; ಅದನ್ನವರು ಆನಂ... ತ್ತಾರೆ. ಆದರೂ ನನಗೆ ವಿಶ್ರಾಂತಿಯ ಅವಶ್ಯಕತೆಯಿದೆ... ಅವರಿಗೆ ಅನ್ನಿಸಿದ್ದರಿಂದ ನನಗೆ ಮಾತ್ರ ಈ ಆನಂದ... ಸವಿಯುವುದಕ್ಕೆ ಅವಕಾಶ ಮಾಡಿಕೊಡಲಿಲ್ಲ.

ಕಳೆದ ರಾತ್ರಿಯಷ್ಟು ಚುರುಕಾಗಿಯಲ್ಲದಿದ್ದರೂ ಈಗ ಸಾಕಷ್ಟು ವೇಗವಾಗಿ ನಡೆಯಲಾರಂಭಿಸಿದ್ದೆ. ಇದನ್ನು ಗಮನಿಸಿದ ಬಸು ನನ್ನನ್ನು ವಾಪಸ್ಸು ನಗರಕ್ಕೆ ಕಳುಹಿಸುವ ಅವಶ್ಯಕತೆಯ ಬಗ್ಗೆ ಮತ್ತೆ ಮಾತನಾಡಲಿಲ್ಲ. ಅವರು ನನ್ನ ಬಾಟಲ್ ಎತ್ತಿಕೊಂಡರು. ಆದರಿಂದ ಸುಮಾರು ಒಂದು ಕೆ.ಜಿಯಷ್ಟು ತೂಕ ಕಡಿಮೆಯಾಯಿತು; ಆದರೆ, ಅದು ನನಗೆ ಹತ್ತು ಕೆ.ಜಿ.ತೂಕ ಕಡಿಮೆಯಾದುದಕ್ಕೆ ಸಮ ಎಂಬಂತೆ ಭಾಸವಾಯಿತು. ಕೆಲ ಸಮಯ ನಡೆಯುತ್ತಲೇ ಹೋದೆವು; ಒಮ್ಮೊಮ್ಮೆ ನಾನು ಸಮತಟ್ಟವಲ್ಲದ ಮೇಲ್ಮೈ ಮೇಲೆ ಅಥವಾ ಚಿಕ್ಕ ಕಲ್ಲಿನ ಮೇಲೆ ಕಾಲಿಟ್ಟಾಗ ಬಹಳವಾಗಿ ನೋವುಂಟಾಗುತ್ತಿತ್ತು. ಸೂರ್ಯ ಮೇಲೇರುತ್ತಿದ್ದಂತೆಯೇ ನನ್ನ ಪಾದವೂ ಬಿಸಿಯಾಗುತ್ತಿತ್ತು, ಅದಕ್ಕೆ ನಿರಂತರ ನಡಿಗೆ ಕಾರಣವಾಗಿತ್ತೇ ಹೊರತು ಬಿಸಿಲಲ್ಲ ಎಂಬುದೂ ನಿಜವೆ. ಆದರೂ, ಬಿಸಿಲು ನನ್ನ ನಡಿಗೆಗೆ ಬಹಳಷ್ಟು ಸಹಕಾರಿಯಾಗಿದ್ದುದು ನಿಜ. ಮೊದಲ ವಿಶ್ರಾಂತಿ ಸಮಯದಲ್ಲಿ ಹತ್ತು ನಿಮಿಷಗಳಿಗೆ ಬದಲಾಗಿ ಅರ್ಧ ಗಂಟೆಯೇನಾದರೂ ವಿಶ್ರಾಂತಿ ಪಡೆದುಕೊಂಡಿದಿದ್ದರೆ ನಿಜಕ್ಕೂ ತೊಂದರೆಗೆ ಬೀಳುತ್ತಿದ್ದೆವು; ಅಲ್ಲೆಲ್ಲೂ ಸಮತಟ್ಟಾದ ನೆಲವೇ ಇರದಿದ್ದುದರಿಂದ, ಕತ್ತಲು ಕವಿದಿದ್ದುದರಿಂದ, ಅಂತಹ ಪರಿಸ್ಥಿತಿಯಲ್ಲಿ ನಡೆಯುವುದಕ್ಕೆ ನನ್ನ ಧೈರ್ಯವೇ ಹೊರಟುಹೋಗುತ್ತಿತ್ತು.

ಹಾಯ್ಕು


ಸುಡು ಬಿಸಿಲು
ಅಜ್ಜಿಯ ದೇಹವನ್ನು
ಬೇಗಬೇಗ ಮುಚ್ಚುತ್ತೇನೆ

ಮರ
ಮೈ ತೆರೆದು ನಿಂತಿದೆ
ಖಾಲಿ ಹಾಳೆ

ಇಬ್ಬನಿ
ಹಸಿರು ಗರಿಕೆಯ ಮೇಲೆ
ಪಿಯಾನೋ ಸ್ವರಗಳು

ಮಳೆಯ ಜೊತೆ
ಅವಳ ಮಾತು
ಜೀರುಂಡೆಗಳು ಸ್ತಬ್ಧ

ಸುರಿವ ಚಳಿ
ಒಂದು ಸ್ಪರ್ಶಕ್ಕಾಗಿ ಕಾಯುತ್ತಿದೆ
ಮುಟ್ಟಿದರೆ ಮುನಿ



• ಡಾ. ಸಿ. ರವೀಂದ್ರನಾಥ್

...ಂಚಾತಿ ಯಲಕ್ಸನ್ನಿಗೂ ಯಬೆಟ್ಟಿಗೂ ಏನು ಸಮುಂದ!

...ಬೆಗ್ಗೆ ಎದ್ದ ಜುಮ್ಮಿ, ತನ್ನ ಜೊತೆ ಕ್ಯಾನುವಾಸಿಗೆ ...ವರಿಗೆಲ್ಲಾ ಉಪ್ಪಿಟ್ಟು ಮಾಡಿ, ಒಂದು ಹಂಡೆ ...ಯಿಸಿ, ನಂತರ ತಾನೂ ಶೃಂಗಾರ ಮಾಡಿಕೊಂಡು ...ವನಿಗೆ ಹೇಳಿ ಹೋಗಲು ಹೋಟೆಲ್ ಬಳಿ ...

...ಳನ್ನು ನೋಡಿದ ಉಗ್ರಿ,

...ಯ ಲು ಸೀ ಮೆ

...ಪ್ಪೆಪುರಾಣ

►ಬಿ. ಚಂದ್ರೇಗೌಡ

...ಗೋಳಿಗಿಂತ ಅಲೇನಳ್ಳಿಲಿ ಮಾಡಿದರಲ್ಲ, ಅಂಗೆ ...ಯ್ಯಂಗೇ?" ಎಂದ.

...ಲೇನಳ್ಳಿಲೇನು ಮಾಡಿದ್ರೂ?"

...ಊರು ಜನ ಪಂಚಾತಿ ಮೆಂಬ್ರು ಐದೂವರ ...ಊಂಡಿದ್ದರಂತೆ."

...ದೇನು ಸರಿಯಾಗೇಳ್ಳೆ."

...ಊರು ಜನ ಮೆಂಬ್ರು ಗೆದ್ದು ಬರಬೇಕಲವೇನೆ? ...ಜನ ಸೇರಿ ಐದೂವರ ಲಕ್ಷ ಕೊಡಿ, ಯಲಕ್ಷನ್ನೆ ...ಪಂಚಾತಿಗೋಗಿ ಅಂತ ಸೀಟನೆ ಹರಾಜಾಕಿದ್ದರಂತೆ."

...ಗೋಳೊ, ಅಂಗೂ ಮಾಡ್ತರೇನ್ನ?" ಎಂದ ಸೀರ.

...ವಾದದೇನೂ, ಆಗ್ಲೆ ಬಟಾವಡೆನೂ ಆಗ್ಗದಂತೆ ...ಊರು ದೇವುಸ್ಥಾನ ಕಟ್ಟಕ್ಕೆ ಊರೋರ್ಗಲ್ಲ ಸೇರಿ ...ಪಾರ ಮಾಡಿದಂಗೆ ಮಾಡಿ ಮಡಿಗ್ಯವುರೆ."

...ನಜೀರ ಸಾಬ ತಂದು ಮಡಗಿದ ರಾಜಕಾರಣ ...ಒಂದು ನಿಂತಗತ್ತು ನೋಡು" ಎಂದ ಕಾಳಮಾವ. ...ಜೀರ್ ಸಾಬರು ಚನ್ನಾಗೇ ಮಾಡಿದ್ರು ಕಣಮಾವ. ...ನಮುಸ್ಸೆನ ನಿಮ್ಮೂರ ಪಂಚಾತಿಲೇ ಬಗೆಹರಿಸಿಗಳಿ ...ಮುಂಡ್ಸು ಪಂಚಾತಿ ತಂದ. ಆದ್ರೆ ಇವುರು ...ಗಳನೆ ಮಾರ್ರೆ, ಕೊಂಡಕತ್ತರೆ ಅನ್ನದು ಅವುರಿಗೇನು ... ಅಂತೂ ಮಂಡ್ಯ ಜಿಲ್ಲೆ ಮಾನವ ಅಲೇನಳ್ಳಿ ...ರಾಜಾಕಿದ್ರು" ಎಂದ ಉಗ್ರಿ.

... ಬಿಜೆಪಿ ನನಮಕ್ಕಳಿಂದ್ಲೆ ಕಂಡ್ರ ಇದ್ಕಲ್ಲ ...ಗಿದ್ದು" ಎಂದ ಸೀರ.

...ದು ನಿಜವೆ ಬುಡು. ಯಾವತ್ತು ಮುವ್ವತ್ತು ...ಕೊಟ್ಟು ಜಗ್ಗೇಸನ್ನ ಕೊಂಡಕೊಂಡ್ರೋ ಅವತ್ತೇ ...ಬರಿಯಾದಲ್ಲಿ ಯಾಪಾರ ಸುರುವಾದದ್ದು."

... ಜಗ್ಗೇಸನ್ನ ನೋಡಿದ್ರೆ ಗದ್ದೆ ಬದ ಹಗದು ಇಲಿ ...ನೇನಂಗೆ ಕಾಣ್ತನೆ. ಅವುನಿಗೆ ಮುವ್ವತ್ತು ಕೋಟಿ ಕೊಟ್ರು ಅಂತಿಯಲ್ಲ, ನಿಜವೇನ್ನ?" ಎಂದ ಕಾಳಮಾವ.

"ನಿಜವೋ, ಸುಳ್ಳೊ ಕಾಂಗ್ರೆಸ್ನೋರು ಮನೆತಕ್ಕೋದಾಗ ಮನೆ ಮ್ಯಾಲಾನಿ ಹಾರಿ ಮುಸಿಯ ಹೋದಂಗೆ ಓಡಿದ್ದು ನೋಡಿದೋರು ಅಂಗಂದ್ರು ಕಣಮಾವ."

"ಅಲ್ಲಾ, ಯಲಕ್ಷನ್ನಲಿ ನಮಿಗೆ ಬೇಕಾದೋರಿಗೆ ಓಟು ಮಾಡಿ ಗೆಲ್ಲಸೋದ್ಯಂಗದೆ. ಅದು ಬುಟ್ಟು ಮೆಂಬರನೆ ಖರೀದಿ ಮಾಡಿದ್ರು ಅಂದ್ರೆ ಏನ್ಲೇಳನ?"

"ಆ ನನ ಮಕ್ಕಳಿಗೆ ಯಲಕ್ಷನ್ನು, ಪ್ರಜಾಪ್ರಭುತ್ವ, ಜನಪ್ರತಿನಿಧಿ ಅಂದ್ರೇನು ಅಂತ ಗೊತ್ತಿಲ್ಲ ಕಣಮಾವ. ದುಡ್ಡು ಕೊಟ್ರೆ ಏನಾದ್ರು ಸಿಗತದೆ ಅನ್ನೊ ರೆಡ್ಡಿಗಳ ತರದೋರು. ಅದ್ಕೆ ಪಂಚಾತಿ ಮೆಂಬರನೇ ಕೊಂಡವುರೆ."

"ಹಿಂಗಾದ್ರೆ ಬಡಬಗ್ಗರು ಯಲಕ್ಷನ್ನಿಗೆ ನಿಲ್ಲಕಾದತೇನ್ನ?" ಎಂದಳು ಜುಮ್ಮಿ.

"ಲೋಕಸಭೆ, ವಿಧಾನಸಭೆ ವಿಷಯದಲ್ಲಿ ಈಗಾಗ್ಲೆ ಅದೂ ನ್ಯಡಿತಲ್ಲೇ. ಇಪ್ಪತ್ತೈದು ಕೋಟಿ ಇದ್ದೋನು ಯಮ್ಮೆಲ್ಗೆಗೆ ನಿಂತಗಬವುದು. ಯಪ್ಪತ್ತೈದು ಕೋಟಿ ಇದ್ದೋನು ಲೋಕಸಭೆಗೆ ನಿಂತಗಬವುದು. ಯೋಗ್ಯತೆ ಇದ್ದು ಕಾಸಿಲ್ಲದೋರು ಮನೆಲಿರಬವುದು ಅನ್ನದು ಸಾಬೀತಾಯ್ತಲ್ಲ ಹೇಳು."

"ಅಲ್ಲಾ, ದೇವುಸ್ಥಾನ ಕಟ್ಟದಾದ್ರೆ ಭಕ್ತಾದಿಗಳಿಂದ ಕಾಣಿಕೆ ಈಸಗಂಡು ಕಟ್ಟ ಬೇಕಪ್ಪ. ಅದು ಬುಟ್ಟು, ಯಲಕ್ಷನ್ನಿಗೆ ನಿಂತೋರತ್ರ ಕಾಸೀಸಗತ್ತವೆ ಅಂದ್ರೆ ಅವಿನ್ನಂತ ಗತಿಗ್ಗಟ್ಟವುಲ, ಥೂ" ಎಂದು ಸೀರ ನೆಲಕ್ಕೆ ತುಪ್ಪಿದ.

"ಅದೂ ಜನಮರಳೊ ಜಾತಿ ಮರಳೊ, ಶಂಬೂಲಿಂಗನ ಶಪ್ಪಮರಳೊ ಅಂತ ಶಂಬೂಲಿಂಗನ ಗುಡಿ ಜೀರ್ಣೋದ್ಧಾರ ಮಾಡಕ್ಕೋಗಿ ಊರು ಜನ ಮಾನ ಕಳಕಂಡ್ರು. ಅವುರ ಸುದ್ದಿ ಬುಡು, ಜುಮ್ಮಿ ಗೆಲ್ಸದ ಯೋಚನೆ ಮಾಡು."

"ಜುಮ್ಮಿ, ಯಾವ ಪಾರ್ಟಿಯಿಂದ ನಿಂತಿದ್ದಿಲೆ?" ಎಂದ ಸೀರ.

"ಪಾರಟಿ ಅಂತ ಇಲ್ಲ, ಸುಮ್ಮನೆ ನಿಂತಿದ್ದಿನಿ."

"ನಿನ್ನತ್ರ ಮುಚಗಂಡೇನೊ, ಕಾಂಗ್ರೆಸ್ ಪಾರ್ಟಿಯಿಂದ ನಿಂತವುಳೆ."

"ದಳದಲಲವೆ ಇದ್ದಿದ್ದು ನೀನು?"

"ಕಾಂಗ್ರೆಸ್ ದಳ ಅಂತ್ಲೆ ಏಳಕ್ಕ, ಒಟ್ಟು ಜುಮ್ಮಿ ಗೆಲ್ಲಬೇಕು. ಅವುಳೇನಾರ ಗೆದ್ರೆ ಹ್ಯಾಟ್ರಿಕ್ ವಡದಂಗೆ" ಎಂದ ಉಗ್ರಿ. ಆಗ ದಿಗ್ಗನೆದ್ದ ಜುಮ್ಮಿ,

"ನಡಿಲ, ಒತ್ತಾಯ್ತು ಹೋಗನ" ಎಂದಳು.

"ಆ ವಾಟಸ್ಸೆ ಬತ್ತಾ ಅವುನೆ ಕರಕಂಡೋಗನ ಇರೆ."

"ಲೇ ವಾಟಸ್ಸೆ, ಓಟು ಕೇಳನ ನಡಿಲ."

"ಸಾರಿ ಕಣಕ್ಕ, ಸದ್ಯದ ಸಿಚುಯೇಶನ್ನಲ್ಲಿ ನಾನು ಯಾರ ಜೊತೆಲೂ ಕಾಣಿಸಿಗಳದಿಲ್ಲ, ನೀವು ಹೋಗಿಬನ್ನಿ."

"ಇವುನ ಕರಕಂಡೋದ್ರೆ ಬರ ಓಟೂ ಬರದಿಲ್ಲ, ನಡಿಯೆ ಹೋಗನ."

"ಮಿಸ್ಟರ್ ಉಗ್ರಿ, ನಾನು ಬಂದ್ರೆ ಬರ ಓಟು ಬರದಿಲವೆ? ನಮ್ಮಕ್ಕ ನಿಂತಿರದ್ರಿಂದ ನಾನು ಚಾಲೆಂಜ್ ಮಾಡಕ್ಕೋಗದಿಲ್ಲ. ಆದ್ರೆ ನನ್ನ ಪರಿಸ್ಥಿತಿ ಏನಾಗಿದಿಯಪ್ಪ ಅಂದ್ರೆ, ನಿಂತಿರೊ ಯಲ್ಲಾ ಕ್ಯಾಂಡೇಟ್‌ಗಳಿಗೂ ನಾನು ಬೇಕಾದೋನು. ಅದ್ಕೆ ಈ ಚುನಾವಣೆಲಿ ಅಂಗೇ ಇದ್ದುಬುಡ್ತಿನಿ."

"ನಿಂತಿರೊ ಯಲ್ಲಾ ಕ್ಯಾಂಡೇಟ್‌ಗಳಿಗೂ ನಾನು ಬೇಕಾದೋನು ಅಂದ್ರೇನರ್ಥ? ಯಲ್ಲಾ ಕ್ಯಾಂಡೇಟ್‌ಗಳತ್ರನೂ ಈಸಗತ್ತಿನಿ ಅಂತ ತಾನೆ?"



"ಆ ಮಾತ ವಾಪಸ್ ತಗೊ ಉಗ್ರಿ. ಪಂಚಾತಿ ಯಲಕ್ಷನ್ನಿಗೆ ನಿಂತಿರೊ ಕ್ಯಾಂಡೇಟ್‌ಗಳತ್ರ ಕಾಸೀಸಗಳೊ ಮಟ್ಟಕೆ ನಾನಿಲ್ಲ. ನಾನೇ ಬೇಕಾದ್ರೆ ಕೊಡ್ತಿನಿ. ಆದ್ರೆ ಯಾರ ಪರನೂ ಕ್ಯಾನ್‌ವಾಸ್ ಮಾಡದಿಲ್ಲ."

"ಓಹೊಹೋ, ಕೃಷ್ಣ ಪರಮಾತ್ಮ ಅನ್ನು."

"ಎಜ್ಯಾಟ್ಲಿ ಕರಟ್. ಕೃಷ್ಣ ಈ ಯುದ್ಧದಲ್ಲಿ ಶಸ್ತ್ರಾಸ್ತ್ರ ಹಿಡಿಯದಿಲ್ಲ ಅಂದ. ಆದ್ರೆ ಹಿಡಿದೆಯಿರದಕಿಂತ ಹೆಚ್ಚಾಗೆ ಮಾಡಿದ. ಅಶ್ವತ್ಥಾಮ ಹತಾ ಕುಂಜರ ಅಂದ. ದ್ರೋಣ ನ್ಯಗುದುಬಿದ್ದ. ಮುಳಗದಕ್ಕೆ ಮದ್ಲೆ ಸೂರ್ಯನ್ನ ಮರೆಮಾಡಿದ. ಜಯದ್ರತನ ತಲೆ ಹಾರ್ಕ್ಯೋಯ್ತು. ಭೀಷ್ಮನೆದ್ರಿಗೆ ಶಿಖಂಡಿ ನಿಲ್ಲಿಸಿದ. ಆ ಮುದಿಯ ಗ್ಯಾತಯಸ್ತ. ಇನ್ನ ಕರ್ಣನ್ನ ಮೋಸದಿಂದ್ಲೆ ಕೊಲ್ಲಿಸ್ತ. ಕೌರವ ತ್ವಡೆ ಮುರಕಳೊ ಪ್ಲಾನ್ ಮಾಡಿದೋನೂ ಇವುನೆಯ. ಪಾಪ ಕೌರವ ಕಾಲು ಮುರಕಂಡು ಮನಗಿರುವಾಗ ಹತ್ರೋಗಿ ಮಾತನಾಡು ದುರ್ಯೋಧನ ಅಂತನೆ. ಕೃಷ್ಣನ್ನ ಬ್ರಾಂಬ್ರು ಯಾಕೆ ಮೆಚ್ಚಗಂಡು ಪೂಜೆ ಮಾಡ್ತರೆ ಅಂತ ಗೊತ್ತಾಯ್ತೇನಕ್ಕ?"

"ಯಾಕ್ ಪೂಜೆ ಮಾರ್ಡ್ತರ್ಲ?"

"ಅವುರಿವುರ ಕೈಲಿ ಅವುರಿವರ ವಡಿಸಿ ತಾನು ಮಾತ್ರ. ದೂರ ನಿಂತಿರತನಲ್ಲ, ಅದ್ಕೆ ಬ್ರಾಂಬ್ರು ಕಲ್ತಗಂಡಿರದು."

"ಅವುರದಿರಲಿ, ಈ ಯಲಕ್ಷನ್ನಲಿ ನನಿಗೇನು ಮಾಡ್ತಿ ಹೇಳ್ಳ."

"ನೋಡಕ್ಕ, ನಿನೆದ್ರಿಗೆ ನಿಂತಿರೊ ಕಾಂಡೇಟ್‌ಗಳು ಯಬೆಟ್ಟಿನವು. ಅಂಗೆ ನೋಡಿದ್ರೆ ಇಡೀ ಕರ್ನಾಟಕದಲ್ಲಿ ಪಂಚಾಯ್ತಿ ಯಲಕ್ಷನ್ನಿಗೂ, ಯಬೆಟ್ಟಿಗೂ ಏನೋ ಸಂಬಂಧ ಇರಬೇಕು. ಇಲ್ಲ ಅಂದ್ರೆ ಇಷ್ಟೊಂದು ಜನ ಯಬೆಟ್ಟುಗಳು ನಿಂತಗತಿರಲಿಲ್ಲ, ಊರಲ್ಲಿದ್ರೊ ಎಜುಕೇಟೆಡ್‌ಗಳು ಊರಿಗೇ ಹೆಡ್ಡೇಕ್ ಆಗಿದ್ದವೇ ವರತು, ಪಂಚಾಯ್ತಿಗೋಗಿ ಮಾದರಿ ಪಂಚಾಯ್ತಿ ಮಾಡನ ಅಂತ ವಚ್ಚೆ ವಬ್ಬು ಯೋಚನೆ ಮಾಡಿಲ್ಲ."

"ಆ ಪುಲಾರ ಇರ್ಲಿ, ಮುಂದಿಂದೇಳ್ಳ."

"ಅದೇ ಕಣಕ್ಕ, ಸಿಚುಯೇಶನ್ ನೋಡಿ ರಾಜಕಾರಣ ಮಾಡ್ತಿನಿ. ಆದ್ರೆ ನಿನ್ನ ಕಣ್ಣಿಗೆ ಕಾಣಿಸಿಗಳದಿಲ್ಲ, ಈಗ ಕುಂತಿರೊ ಜಾಗದಲ್ಲೇ ಇಪ್ಪತ್ತು ಓಟಿನ ಮೇಲಾಕುಸ್ತಿನಿ."

"ಅದೆಲ್ಲಿ ಇಪ್ಪತ್ತಿದ್ದವುಲ?"

"ಇನ್ನು ಜಾಸ್ತಿನೆ ಅವೆ ಕಣಕ್ಕ, ಇದೇ ನಮ್ಮ ದೊಡಪ್ಪನ ಮನೆಲಿ ಟೋಟಲಿ ಹದುಮೂರು ಓಟವೆ. ಉಗ್ರಿ ಅವುರವ್ವ ಸೇರಿದ್ರೆ ಒಟ್ಟು ಹದುನೈದಾಯ್ತು. ಇನ್ನ ಚಿಕ್ಕಣ್ಣನ ಮನೆ ಗಂಡ ಹೆಡತಿ ಮಕ್ಕಳು ಸೇರಿ ಐದವೆ. ಅಲ್ಲಿಗೆ ಇಪ್ಪತ್ತಾದೊ. ಇನ್ನ ಸೀರ ಚಿಗಪ್ಪನ ಮನೆ ಏಳೋಟು. ನನ್ನವು ಯರಡು. ಹಿಂಗೇ ಲಕ್ಕ ಹಾಯ್ಕಂಡು ಕ್ಯಾನವಾಸ್ ಮಾಡಿದ್ರೆ ಯಲಕ್ಷನ್ ಟೇಮಿಗೆ ಲೀಡಿನ ಕ್ಯಲಸ ಮಾಡಬವುದು. ಈಗ ಸದ್ದಿಕೆ ಒಂದು ಪೈವಂಡ್ರೆಡ್ ಇದ್ರೆ ಕೊಡಕ್ಕ."


"ಐನೂರಿಲ್ಲ, ಇನ್ನೂರದೆ ತಗ."

"ರಿಯಲಿ ನಮ್ಮಕ್ಕ, ಇಷ್ಟು ದೊಡ್ಡ ಅಮವುಂಟ ಇದೇ ಪಸ್ಟು ಕೊಡ್ತಾಯಿರದು. ಅಮ್ಯಾಲೆ ಇನ್ನೊಂದು ಸೂಚನೆ ಕಣಕ್ಕ, ಮನೆ ತುಂಬ ಜನ ಸೇರಿಸಿಗಂಡು ಊಟ ಹಾಕಬ್ಯಾಡ. ಚುನಾವಣೆ ಕಮಿಷನ್‌ನೋರು ವಾಚ್ ಮಾಡ್ತಾಯಿದ್ದರಂತೆ. ಬಂದ್ರೂ ಬರಬವುದು."

"ಬರ್ಲಿ ಬುಡ್ಡ. ನನ್ನ ಮನೆಲಿ ನಾನು ಜನಕನ್ನಾ ಹಾಕಿದ್ರೆ ನೀನ್ಯಾರ್ಲ ಕೇಳಕ್ಕೆ ಅಂತ ಮಕ್ಕುಗುದು ಕಳುಸ್ತಿನಿ. ಓಟಾಕೋರಿಗೆ ಊಟನೂ ಹಾಕಬಾರ್ದು ಅಂತ ಯಾವನ್ನ ಹೇಳಿರೋನು?"

"ಆಯ್ತು, ಅವುರೇನಾರ ಬಂದ್ರೆ ಊಟ ಇಕ್ಕಿ ಕೂಲ್ ಡ್ರಿಂಕ್ಸ್ ಕೊಟ್ಟು ಕಳುಸಕ್ಕ." ●

...ೂರವಾದ ಗೆಳೆಯ



...ನ್ನಲ್ಲಿರುವ ಸ್ಟೆಥಾಸ್ಕೋಪನ್ನು ಸುಮಾರು ಒಂದು ವರ್ಷ ಕಾಲ ಬಳಸಿರಲಿಲ್ಲ; ...ತ್ತಡ ನೋಡಲು ಈ ಸ್ಟೆಥಾಸ್ಕೋಪ್ ಮತ್ತು ರಟ್ಟೆಗೆ ಕಟ್ಟುವ ಬಟ್ಟೆ, ಮೀಟರ್-...ೂರರ ಒಂದು ಯೂನಿಟ್ ಇರುತ್ತದೆ. ಅದನ್ನು ನಾಲ್ಕು ವರ್ಷದ ಹಿಂದೆ ...ಕೊಂಡ ಹೊಸದರಲ್ಲಿ ಸಂಭ್ರಮವೋ ಸಂಭ್ರಮ; ರಕ್ತದೊತ್ತಡ ನೋಡಿದ್ದೇ ...ದ್ದು! ಆಮೇಲೆ ಆ ಕಡೆ ಗಮನ ಹರಿಯಲಿಲ್ಲ. ಇತ್ತೀಚೆಗೆ ವೈದ್ಯರನ್ನು ನೋಡಿದೆ. ...ಡಿ "ಎಲ್ಲ ಸರಿ ಇದೆ; ರಕ್ತದೊತ್ತಡ ಮಾತ್ರ ಸ್ವಲ್ಪ ಜಾಸ್ತಿ ಇದೆ. ನೀವು ಸಿಗರೇಟ್ ...ಳ್ಳೆಯದು" ಅಂದರು. "ಸಿಗರೇಟ್ ಸೇದಿದರೂ ರಕ್ತದೊತ್ತಡ ಹತೋಟಿಯಲ್ಲಿಡಬಲ್ಲ ...ಲ್ಲವೇ?" ಅಂದೆ. "ಇದೆ. ಆದರೆ ಮತ್ತೆ ಜಾಸ್ತಿಯಾದರೆ ತುಂಬ ತೊಂದರೆ, ...ಕೆಲಸ ಮಾಡಿ. ಸಿಗರೇಟ್ ಕೊಳ್ಳುವಾಗ ಒಂದು ಪ್ಯಾಕ್ ಪೂರ್ತಿ ಕೊಳ್ಳುವ ... ಒಂದು ಸಿಗರೇಟ್ ಮಾತ್ರ ಕೊಳ್ಳಿ, ಮತ್ತೆ ತರಿಸುವ ರಗಳೆಯಿಂದಲಾದರೂ ...ದು ಕಮ್ಮಿಯಾಗುತ್ತೆ" ಅಂದರು.

... ಏನೆಂದರೆ... ಸಿಗರೇಟ್ ನನಗೆ ತುಂಬ ಖುಷಿ ಕೊಟ್ಟಿದೆ. ಕಳೆದ ಮೂವತ್ತು ವರ್ಷದಿಂದ ಸೇದಿದ್ದೇನೆ. ಎಲ್ಲ ...ಖ, ಸಮಸ್ಯೆ, ಬಿಕ್ಕಟ್ಟು, ಒಬ್ಬಂಟಿತನ, ಜೊತೆಗಾರಿಕೆ... ಎಲ್ಲದರ ನಡುವೆ ಮೂವತ್ತು ವರ್ಷದಿಂದ ...ಗಿರುವ ಸಿಗರೇಟ್ ಬಿಟ್ಟುಬಿಡುವುದು ಕಷ್ಟ. ಇದು ಹೇಗೆಂದರೆ, ಕಥೆ ಬರೆಯುವ, ಲೇಖನ ಬರೆಯುವ, ... ಮಾಡುವ, ಪತ್ರಿಕೆ ರೂಪಿಸುವ, ಎಳೆಯರನ್ನು ಪ್ರೋತ್ಸಾಹಿಸುವ, ಎಲ್ಲರೊಂದಿಗೆ ಜೀವಸೆಲೆಗಳಿಗಾಗಿ ...ವ—ಇವುಗಳಲ್ಲಿ ಯಾವುದಾದರೂ ಗುಣ ಬಿಟ್ಟುಬಿಡು ಅಂದಹಾಗೆ. ತುಂಬಾ ಕಷ್ಟ. ಯಾವುದಾದರೊಂದು ...ಪುಸ್ತಕ ಓದುತ್ತಿದ್ದಾಗ ಆಯಕಟ್ಟಿನ ವಾಕ್ಯಕ್ಕೆ ಬಂದೊಡನೆ ಅದನ್ನು ಓದಿ ಸಿಗರೇಟ್ ಹಚ್ಚಿ ನಮ್ಮ ಕಚೇರಿಯ ...ಓಡಾಡುತ್ತೇನೆ; ಸಿನಿಮಾ ಮಾಡುವಾಗ ಒಂದು ಸಮಸ್ಯೆ ಪರಿಹರಿಸಬೇಕೆಂದರೆ ಸಿಗರೇಟ್ ಹಚ್ಚಿ ಕಣ್ಣುಮುಚ್ಚಿ ...ಕಾರ್ಧದಲ್ಲಿ ಸಮಸ್ಯೆ ಬಗೆಹರಿಯುತ್ತಿತ್ತು; ಮತ್ತೆ ಇಂಥ ನೂರಾರು ಸಂದರ್ಭ ಹೇಳಬಲ್ಲೆ.


...ಕ್ಟರೇ, ನಿಮ್ಮನ್ನೊಂದು ಪ್ರಶ್ನೆ ಕೇಳ್ತೀನಿ. ದಯವಿಟ್ಟು ಬೇಜಾರು ಮಾಡಿಕೊಳ್ಬೇಡಿ. ನಾನು ಸಿಗರೇಟ್ ... ನಿಮ್ಮ ಮಾತ್ರೆ ತೆಗೆದುಕೊಳ್ತಾ ಇದ್ರೆ ಈ ಘಟ ಇನ್ನೆಷ್ಟು ವರ್ಷ ಉಳಿಯಬಹುದು? Can't you ...the thing just going for a few more years?"

...ದು ನಕ್ಕರು. ವೈದ್ಯರು ಎಲ್ಲದಕ್ಕೆ ಪರಿಹಾರ ನೀಡಬಲ್ಲರು ಎಂದು ನಾವು ತಿಳಿದಿರುತ್ತೇವೆ. ಮುಂಬೈನ ಸುಪ್ರಸಿದ್ಧ ಕ್ಯಾನ್ಸರ್ ವೈದ್ಯ ಜುಸ್ಸಾವಾಲಾ ಅವರು ಎಲ್ಲರಿಗೆ ಸಿಗರೇಟ್ ಸೇದದಿರಲು ಹೇಳುತ್ತಾರೆ; ರೋಗಿ ಕಣ್ಮರೆಯಾದೊಡನೆ ಪಕ್ಕದ ಕೋಣೆಗೆ ಹೋಗಿ ಸಿಗರೇಟ್ ಹಚ್ಚುತ್ತಾರೆ! ಅದೇ ಇಲ್ಲಿಯ ದ್ವಂದ್ವ. ತೊಂಭತ್ತು ವರ್ಷದ ರೋಗಿಯೊಬ್ಬ ಸಿಗರೇಟ್ ಸೇದುತ್ತಿದ್ದಾಗ ಹುಟ್ಟುಹಬ್ಬದ ಶುಭಾಶಯ ಹೇಳಲು ಬಂದಿದ್ದವರು, "ಈಗಲೂ ಸಿಗರೇಟ್ ಸೇದ್ತೀರಲ್ಲ, ನಿಮ್ಮ ಡಾಕ್ಟರ್ ಆಕ್ಷೇಪಿಸುವುದಿಲ್ಲವೇ?" ಅಂದರು. ಆತ ಹೇಳಿದ, "ಡಾಕ್ಟರ್ ಸತ್ತು ಬಹಳ ವರ್ಷವಾಯಿತು."

–ನನ್ನ ಪ್ರಶ್ನೆ ಕೇಳಿ ಡಾಕ್ಟರ್ ನಕ್ಕು "ಹಾಗಲ್ಲ ಭರವಸೆ ಕೊಡೋದು ಕಷ್ಟ. ದೇಹ ಎಷ್ಟು ವರ್ಷ ತಡೆಯುತ್ತೆ ಅಂತ ಊಹಿಸಿ ಹೇಳೋದೂ ಕಷ್ಟ. ಪರೀಕ್ಷಿಸಿ ಹೇಳೋದೂ ಕಷ್ಟ. ನೀವು ಸಿಗರೇಟ್ ಬಿಟ್ಟರೆ ಒಳ್ಳೆಯದು" ಅಂದರು.

"ಅದು ತುಂಬ ದೊಡ್ಡ ಅಪೇಕ್ಷೆ" ಎಂದು ಹೇಳಿ ಬಂದೆ. ಅವರು ಕೊಟ್ಟ ಮಾತ್ರೆ ಕೆಲಸ ಮಾಡುತ್ತಿತ್ತು, ಆದರೆ ಅದರ Side-effectsನಿಂದಾಗಿ ಮೈಕೈನೋವು, ಸುಸ್ತು ಹೆಚ್ಚಾಯಿತು. ಮಾತ್ರೆಯನ್ನು ಬಿಟ್ಟು ನೋಡಿದೆ. ರಕ್ತದೊತ್ತಡ ಜಾಸ್ತಿಯಾಗಿದ್ದು ಮಾತ್ರವಲ್ಲ, ಒಂದು ರೀತಿಯ ಅಸ್ವಾಸ್ಥ್ಯ ತಹತಹ ಹೆಚ್ಚಾಯಿತು. ನನಗೆ ನನ್ನ ಛಲದ ಬಗ್ಗೆ ಹೆಮ್ಮೆ; ಯಾವುದೇ ಒಂದು ತೀರ್ಮಾನಕ್ಕೆ ಬಂದರೆ ಆಯಿತು, ಅದರಂತೆ ನಡೆಯುವುದು ಕಷ್ಟವಲ್ಲ. ಸಿಗರೇಟ್ ಬಿಟ್ಟರೆ ಬೇಸರ ಶುರುವಾಗುತ್ತೆ, ಕಾಯಿಲೆಯಾಗುತ್ತೆ ಎಂದು ಕೆಲವರು ಹೆದರಿಸಿದರು. ನಾನು ಒಂದು ಮಧ್ಯಾಹ್ನ ನನ್ನಲ್ಲಿದ್ದ ಹನ್ನೊಂದು ಸಿಗರೇಟ್‌ಗಳನ್ನು ಬೇರೆಯವರಿಗೆ ಕೊಟ್ಟು ಸುಮ್ಮನಾದೆ.


ಇದನ್ನೆಲ್ಲ ಸಿಗರೇಟ್ ಇಲ್ಲದೆ ಬರೆಯುತ್ತಿದ್ದೇನೆ. ಓದುವಾಗ, ಬರೆಯುವಾಗ ಹೊಗೆಯಾಗಿ ಮಾಯವಾಗುತ್ತಿದ್ದ ಸಿಗರೇಟ್ ಇಲ್ಲ, ಅವುಗಳ ಬಗ್ಗೆ ಅಂತಹ ವಿರಹವೇದನೆಯೂ ಇಲ್ಲ. (ಅಂದಹಾಗೆ, ನನ್ನೆದುರಿರುವ ಹೇಮಾ ಅವರ ಕವನ ಸಂಕಲನದ ಹೆಸರು 'ವಿರಹೋತ್ಸವ!' ಹೆಸರು ಕೃತಕವಾದರೂ ಒಳ್ಳೆ ಮಜವಾಗಿದೆ. ಅಲ್ಲವೇ?)



– ಸೆಪ್ಟೆಂಬರ್ 15, 1993

ಮಂತ್ರಿ ಕಳೆದುಹೋಗಿದ್ದಾರೆ

ಅಣಕ



▸ ಎಚ್.ಎಲ್. ಕೇಶವಮೂರ್ತಿ

'ಕ್ಯಾಬಿನೆಟ್ ಸಚಿವರೆಲ್ಲಿ? ಅವರೇನು ಮಾಡುತ್ತಿದ್ದಾರೆ? ಅವರ ಮುಖಾನೇ ನೋಡಿಲ್ಲವಲ್ಲ' ಅಂತೆಲ್ಲ ಓರ್ವ ಕ್ಯಾಬಿನೆಟ್ ಸಚಿವರನ್ನ ಕುರಿತು ಕೇಳುವುದು ಯಶವಂತ ಸಿನ್ಹ ಅಂತಹ ಹಿರಿಯ ನಾಯಕರಿಗೆ ತರವಲ್ಲ ಬಿಡಿ. ಅವರ ಮಾತಿನ ಜಾಡಿನಲ್ಲೇ ವಿಪಕ್ಷಗಳು ಆರ್ಭಟಿಸುವುದನ್ನ ಕೇಳಲಾರದೆ 'ಇವೇನೋ ನಿನ್ನ ನೋಡ್ಬೇಕು ಅಂತವೆ. ಲೋಕಸಭೆಗೆ ಬಂದು ಮುಖ ತೋರಿಸು ದೊರೆ' ಎಂದು ಹೇಳುವಂತಿಲ್ಲ. ಹೇಳಿಕೇಳಿ ಅವರು ಪ್ರಭಾವಿ ನಾಯಕರ ಸುಪುತ್ರರು. 'ಇವರೇ ಕಣ್ರಿ ಅವರು ನೋಡ್ಕಳಿ' ಅಂತ ಅವರ ಫೋಟೋ ತೋರಿಸಬಹುದಾಗಿತ್ತು; 'ಬೇಕಾದರೆ ಕ್ಯಾಬಿನೆಟ್ ಸಚಿವರು ಕಳೆದುಹೋಗಿದ್ದಾರೆ ಅಂತ ಜಾಹೀರಾತು ಕೊಡ್ರೋಗ್ರಿ' ಎಂದು ಅಧಿಕಾರದ ಧಿಮಾಕಿನಿಂದ ಹೇಳಬಹುದಾಗಿತ್ತು; ಇಲ್ಲ ಈತರ ಅಡಚಣೆ ಆಗಿದೆ ಎಂದು ಇರುವ ವಸ್ತುಸ್ಥಿತಿ ವಿವರಿಸಬಹುದಾಗಿತ್ತು. ಆದರೆ ಇದು ರಾಜಕೀಯ ತಂತ್ರ ಅನ್ನಿಸಿಕೊಳ್ಳಲ್ಲ. ನಾವು ಹಿಡಿದ ಕಾಗೆಗೆ ಮೂರು ಕಾಲಿದೆ ಅನ್ನೋದ ಸಾಧಿಸಕ್ಕೆ ಆಗದೇ ಇದ್ದರೆ ಹೆಂಗೋ ತಿಪ್ಪೆ ಸಾರಿಸಿ ಬಿಡೋದು ಲಾಗಾಯ್ತಿನಿಂದ ಬಂದಿರೋ ಪದ್ಧತಿ. ಅದನ್ನೇ ಅವರೂ ಮಾಡಿದರು.

ಏನಾಗಿತ್ತು ಅಂದರೆ ಲೋಕಸಭೆಯಲ್ಲಿ ರಾಸಾಯನಿಕ ಬಳಕೆ ಕುರಿತ ಪ್ರಶ್ನೆ ಒಂದಿತ್ತು. ಅದಕ್ಕೆ ಕ್ಯಾಬಿನೆಟ್ ಸಚಿವರು ಉತ್ತರ ನೀಡಬೇಕಾಗಿತ್ತು. ಸಂಪ್ರದಾಯದಂತೆ ಅವರು ಗೈರುಹಾಜರಾಗಿದ್ದರು. ರಾಜ್ಯ ಸಚಿವರು ಉತ್ತರ ನೀಡಲು ನಿಂತಾಗ ಇದೆಲ್ಲ ಹಗರಣ ಆಯಿತು.

ಈ ಗೈರುಹಾಜರಿ ಕ್ಯಾಬಿನೆಟ್ ಸಚಿವರು ಯಾರು ಅಂತೀರಿ, ಡಿಎಂಕೆ ಪಿತಾಮಹ ಕರುಣಾನಿಧಿಯವರ ಸುಪುತ್ರ ಅಳಗಿರಿ ಸಾಹೇಬರು. ಪಾಪ ಇದರಲ್ಲಿ ಅವರದ್ದೇನೂ ತಪ್ಪಿಲ್ಲ. ತಮಿಳಿನಲ್ಲಿ ಭರ್ಜರಿಯಾಗಿ ಭಾಷಣ ಬಿಗೀತಾರೆ. ಆದರೆ ಹಿಂದಿ ತಿಳಿವಲ್ರು, ಇಂಗ್ಲಿಷ್ ಬರುವಲ್ದು. ಲೋಕಸಭೇಯೋ ಹಾಳಾದವರು ಈ ತಿಳೀದ ಭಾಷೆನಲ್ಲೇ ಮಾತಾಡ್ತವೆ. ಇದು ತಿಳಿದೇ 'ನಾ ಇಂಗೇ ಇರುಕ್ಕೆ' ಅಂದ್ರು ಅಪ್ಪನೊಂದಿಗೆ. 'ನೀ ಅಂಗೆ ಪೋ' ಅಂದ್ರು ಅಪ್ಪ. ಅವರ ಕಷ್ಟಾನೂ ಅರ್ಥ ಮಾಡಿಕೋಬೇಕು. ಮಕ್ಕಳಿಬ್ಬರೂ ತಮಿಳುನಾಡಿನಲ್ಲೇ ಉಳಿದರೆ ಡಿಎಂಕೆ ಗಾದಿಗೆ ನಾಯಿ ನರಿ ಹಂಗೆ ಕಚ್ಚಾಡ್ತವೆ ಅನ್ನೊ ಸಂಕಟ ಅವರದ್ದು. ಒಬ್ಬನ್ನ ಡೆಲ್ಲಿಗೆ ತಳ್ಳಿ ಇನ್ನೊಬ್ಬನ್ನ ಚೆನ್ನೈನಲ್ಲಿಟ್ಟುಕೊಂಡ್ರು. ಹಿಂಗಾಗಿ ಅಳಗಿರಿ ಡೆಲ್ಲಿ ಸೇರಬೇಕಾಯ್ತು.

ಸೇರಿ ಆಯಿತಲ್ಲಾ.... ಮಂತ್ರಿ ಆಗಿದ್ದೀನಲ್ಲ ಅನ್ನೊ ಸಂಕಟಕ್ಕೆ ಸಂಸತ್ತಿಗೆ ಹೋದರೆ ಅವರ ಆಡೊ ಭಾಷೆ ತಿಳೀವಲ್ದು. ಕೈಬಾಯಿ ಆಡಿಸೋದ್ನೆ ಎಷ್ಟು ಹೊತ್ತು ಅಂತ ನೋಡೋಕೆ ಸಾಧ್ಯ ಹೇಳಿ. ಎಂತಹವರಿಗಾದರೂ ನಿದ್ರಾದೇವಿ ಆಲಂಗಿಸ್ತಾಳೆ. ಆಗ ನೋಡಿ ಎಲ್ಲಿರ್ತಾರೋ ಟಿವಿಯವರು ಹಾಳಾದೋರು ನಿದ್ರಾಭಂಗೀನ ಸೆರೆ ಹಿಡಿದು 'ಗಹನ ಚರ್ಚೆಯಲ್ಲಿ ಸಂಸದ ಗೊರಕೆ' ಅಂತ ದೇಶಕ್ಕೆಲ್ಲ ತೋರಿಸಿ ಅವಮಾನ ಬೇರೆ ಮಾಡ್ತಾರೆ. ಇವೆಲ್ಲ ತಾಪತ್ರಯ ಯಾಕೆ ಅಂತ ಮಾನ್ಯರು ಸಂಸತ್ತಿಗೆ ಹಾಜರೇ ಆಗುತ್ತಿರಲಿಲ್ಲ!

ಸಂಸತ್ತಿಗೇನೋ ಹಾಜರಾಗುತ್ತಿರಲಿಲ್ಲ. ಕಚೇರಿಗೆ? ಕ್ಯಾಬಿನೆಟ್ ಮೀಟಿಂಗಿಗೆ? ತಿಳಿಯದು. ಆರ್‌ಟಿಐನಲ್ಲಿ ಕೇಳಬಹುದಲ್ಲಾ? ಕೇಳಬಹುದು. ಆದರೆ ಮಂತ್ರಿವರ್ಯರ ಇಲಾಖೆ ಈ ಸಂಗತಿ ಬಹಿರಂಗಪಡಿಸಲು ನಿರಾಕರಿಸುತ್ತೆ!

ಹಾಗಾದರೆ ಸನ್ಮಾನ್ಯ ಮಂತ್ರಿವರ್ಯರು ಏನು ಮಾಡುತ್ತಾರೆ ಡೆಲ್ಲಿಯಲ್ಲಿ?

ಅಲ್ಲಿ ಇರುವುದೇ ಅಪರೂಪ!

ಇದು ತಿಳಿದದ್ದೂ ಆರ್‌ಟಿಐನಿಂದಲೇ.


ಸನ್ಮಾನ್ಯ ಮಂತ್ರಿವರ್ಯರು ಮೇ 29, 2009 ರಿಂದ ಡಿಸೆಂಬರ್ 2009 ರವರೆವಿಗೆ 61 ಸಲ ಡೆಲ್ಲಿಯಿಂದ ಚೆನ್ನೈ ಅಥವಾ ಮಧುರೈಗೆ ಹಾರಾಡಿದ್ದಾರೆ. ಅಂದರೆ ಸಾಹೇಬರು ಸರಾಸರಿ ಪ್ರತಿ ಮೂರು ದಿನಕ್ಕೆ ಒಮ್ಮೆ ವಿಮಾನ ಪ್ರಯಾಣ ಮಾಡಿದ್ದಾರೆ ಅಂದ ಹಾಗಾಯಿತು!

ಮಾನ್ಯ ಮಂತ್ರಿಗಳು ತಮ್ಮ ಹಿರಿಯರ ಮಾದರಿಯನ್ನು ಅನುಸರಿಸುವಲ್ಲಿ ಸೋತಿದ್ದಾರೆ ಎಂದು ಅನ್ನಿಸುತ್ತೆ. ರೈಲ್ವೆ ಸಚಿವೆ ಮಮತಾ ಬ್ಯಾನರ್ಜಿ ನೋಡಿ ಕಲಿಯಬೇಕಾಗಿತ್ತು. ಅವರು ನೋಡಿ. ಸಚಿವಾಲಯವನ್ನೇ ಕೊಲ್ಕತ್ತಕ್ಕೆ ವರ್ಗಾಯಿಸಿದ್ದಾರೆ! ಅವರಂತೆಯೇ ಅಳಗಿರಿ ತಮ್ಮ ಸಚಿವಾಲಯವನ್ನು ಚೆನ್ನೈಗೋ ಮಧುರೈಗೋ ವರ್ಗಾಯಿಸಿ ಕೊಳ್ಳಬಹುದಾಗಿತ್ತು! ಹಾಗೇ ಮಾಡಿದ್ದರೆ ಕಚೇರಿಗೂ ಹಾಜರಾಗಬಹುದಿತ್ತು, ಅಪವಾದದಿಂದ ಮುಕ್ತವೂ ಆಗಬಹುದಿತ್ತು!

ಅದುಸರಿ. ಎಲ್ಲ ಮಂತ್ರಿಗಳೂ ತಮ್ಮತಮ್ಮ ರಾಜ್ಯಗಳಿಗೆ ತಮ್ಮತಮ್ಮ ಸಚಿವಾಲಯಗಳನ್ನು ಹೊತ್ಕೊಯ್ದರೆ.....!?

ಮನಿ ಎಫೆಕ್ಟ್

ಐಪಿಎಲ್ ಪಂದ್ಯಾವಳಿಗಳನ್ನು ಒಮ್ಮೆಯಾದರೂ ಟಿವಿಯಲ್ಲಿ ನೋಡಿದ್ದರೆ ಇದು ಕಂಡಿರಲೇಬೇಕು. ಯಾವುದು ಅಂದರೆ ಕ್ರಿಕೆಟ್ ಆಟಗಾರನೊಬ್ಬ ಫೀಲ್ಡ್ ಮಾಡ್ತಾ ಇರ್ತಾನೆ. ಒಂದು ಬಾಲು ಎತ್ತರಕ್ಕೆ ಹಾರುತ್ತೆ, ಅದನ್ನು ಹಿಡಿಯಲು ಸಿದ್ಧನಾಗಿರ್ತಾನೆ. ಅಷ್ಟರಲ್ಲಿ ಏನಾಗುತ್ತೆ ಅಂದರೆ ಒಂದು ಯುವತಿಯರ ಗುಂಪು ಅವನನ್ನು ಕೆಡವಿ ಮೇಲೆ ಬಿದ್ದು ಒದ್ದಾಡುತ್ತೆ, ಹಿಂದಿನಿಂದ ಕಾಮೆಂಟ್ರಿ ಬರುತ್ತೆ 'ದಿಸ್ ಈಸ್ ಅನ್‌ಬಲೀವಬಲ್. ದಿಸ್ ಶುಡ್ ಬಿ ದಿ ಏಕ್ಸ್ ಎಫೆಕ್ಟ್'! ಅಂದರೆ AXEನ ಮೈಗೆ ಹೊಡೆದುಕೊಂಡರೆ ಹುಡುಗೀರು ಮೇಲೆ ಬೀಳ್ತಾರೆ ಅಂದಹಾಗಾಯಿತು!



ಗ್ರಾಮ ಪಂಚಾಯ್ತಿಯ ಚುನಾವಣೆಗಳು ನಡೀತಾ ಇರೋ ಭರಾಟೆ ನೋಡಿ ಇದು ನೆನಪಾಯಿತು. ಚುನಾವಣೆಗಳ ಅಂತರಂಗವನ್ನೇ ಅರೆದು ಕುಡಿದಿದ್ದಾರೆ ನಮ್ಮ ಹಳ್ಳಿಯವರು. ಹಿಂದೆಲ್ಲ ಚುನಾವಣೆ ಬಂತು ಅಂದರೆ ಸಾಕು. ಅಭ್ಯರ್ಥಿ ಆದವನು ಹಣ ಹಂಚಬೇಕು, ಹೆಂಡ ಕುಡಿಸಬೇಕು, ಬಾಡು ಬೇಯಿಸಬೇಕು. ಅದು ಅವನ ಕರ್ತವ್ಯ ಅಂತಾನೆ ಮತದಾರ ಮಹಾಪ್ರಭು ನಂಬಿದ್ದ. ಎಲ್ಲರೂ ಇದನ್ನ ಮಾಡುತ್ತಾ ಇದ್ದುದರಿಂದ ಓಟು ಖಾತರಿ ಅಂತ ಹೇಳೋ ಹಂಗೆ ಇರಲಿಲ್ಲ. ಮತದಾನ ಮುಗಿಯುವವರೆವಿಗೂ 'ನೀನೇ ನನ್ನ ಪಾಲಿನ ದೇವರು' ಅಂತ ಹೇಳ್ತಾ ಬೆಣ್ಣೆ ಹಚ್ಚುವುದು ಅನಿವಾರ್ಯ ಆಗಿತ್ತು. ಇದನ್ನು ನೋಡಿ ಜನರಿಗೆ ಚುನಾವಣೆ ಅಂದರೆ 'ವ್ಯಾಪಾರ' ಎಂಬ ಮರ್ಮ ತಿಳೀತು.

ಕಳೆದ ಗ್ರಾಮ ಪಂಚಾಯ್ತಿ ಚುನಾವಣೇಲಿ ಕೆ.ಆರ್. ಪೇಟೆಯ ಒಂದು ಹಳ್ಳೀಲಿ ಸದಸ್ಯತ್ವವನ್ನು ಹರಾಜು ಹಾಕಿದರು. ಇದೂ ನ್ಯಾಯವೇಯ. ಚುನಾವಣೇಲಿ ನಿಲ್ಲಬೇಕು ಅಂದ್ರೆ ತಾಕತ್ತು ಇರಬೇಕು. ದುಡ್ಡಿಲ್ಲ ಕಾಸಿಲ್ಲ ಅಂದ್ರೆ ಕಾಂಜಿಪಿಂಜಿಗಳೆಲ್ಲ ನಿಂತ್ಕತವೆ. ಹರಾಜು ಹಾಕಿದರೆ ದಮ್ಮಿದ್ದೋನು ಆಯ್ತನೆ ಅಂತಾವ. ಹಿಂಗೆ 'ಹರಾಜು ನಂಬ್ರು' ಆದವನ ಮೇಲೆ ಕಾನೂನಿನ ಕ್ರಮ ಅಂತೇನೂ ತಗೊಂಡಂಗಿಲ್ಲ. ಯಾವುದೋ ಒಂದು ಊರಿಗೆ ಸೀಮಿತ ಆಗಿದ್ದ 'ಹರಾಜು ನಂಬ್ರು' ಸಾಂಕ್ರಾಮಿಕವಾಗಿ ಎಲ್ಲ ಕಡೆಗೂ ಹರಡ್ತಾ ಇದೆ. ಮುಖ್ಯ ಮಂತ್ರಿ ಯಡ್ಯೂರಪ್ಪನವರೇ ಯಾವುದೇ ಗ್ರಾಮ ಪಂಚಾಯತಿಯಲ್ಲಿ ಎಲ್ಲ ಸದಸ್ಯರನ್ನು ಅವಿರೋಧವಾಗಿ ಆಯ್ಕೆ ಮಾಡಿದರೆ ಆ ಗ್ರಾಮ ಪಂಚಾಯ್ತಿಗೆ ಹದಿನೈದು ಲಕ್ಷ ರೂಪಾಯಿ ಕೊಡ್ತೀನಿ ಅಂತ ಸಾರಿದ್ದಾರೆ. ಅಂದರೇನಾಯ್ತು ಎಲ್ಲ ಸದಸ್ಯರೂ 'ಹರಾಜು ನಂಬ್ರು' ಆದರೆ ಹಣ ಕೊಡ್ತೀನಿ ಅಂದ ಹಾಗಾಯಿತು!

ಇದು ಅಕ್ರಮ, ಪ್ರಜಾಪ್ರಭುತ್ವದ ಕೊಲೆ ಅಂತ ಕೆಲವರು ಕೂಗಾಡ್ತಾ ಬದ್ದವೆ. ಅಯ್ಯೋ ರಾಮನೆ ಕೊಲೆ ಇವತ್ತು ಆಯ್ತೇನ್ರಿ.... ಆಪರೇಷನ್ ಕಮಲ ಆದಾಗಲೆ **operation success but democracry died.....** ಆಗಲಿಲ್ವಾ... ಸತ್ತೋದದ್ದನ್ನು ಮತ್ತೆ ಸಾಯಿಸೋಕೆ ಆಗುತ್ತಾ....

ಚುನಾವಣಾ ಆಯೋಗಕ್ಕೆ ದೂರು ಕೊಡ್ತೀವಿ ಅಂತಾವೆ. ಅವರ್ಗೇನು ತಿಳೀದ ಸಂಗತೀಯ ಇದು. ಕೊಡಿ. ಆಗವರೇನು ಮಾಡ್ತಾರೆ... 'ಈ ರೀತಿಯ ಅಕ್ರಮಗಳು ನಡೆದದ್ದೆ ಆದಲ್ಲಿ ಕೂಡಲೆ ಕಾನೂನಿನ ಕ್ರಮ ಕೈಗೊಳ್ಳುತ್ತೇವೆ' ಅಂತ ಹೇಳಿಕೆ ಕೊಡ್ತಾರೆ... ಅಷ್ಟೇ ತಾನೆ....

This should be money effect ಅನ್ನೋದು ನ್ಯಾಯವಾಗಿದೆ ಅಲ್ವಾ.....

ತಂತ್ರಗಾರಿಕೆಯ ಇತಿಹಾಸ ಮರುಕಳಿಸುತ್ತಿದೆಯೇ?

ಹೊಗಳಿಕೆ ತೆಗಳಿಕೆ

ಈ ಸಲ 'ಲಿಂಗಾಯತರ ಒಳಜಗಳ' ಓದಿದೆ. ಚೆನ್ನಾಗಿದೆ. ವೈದಿಕಶಾಹಿ ಮನಸ್ಸು ಬಸವ ಧರ್ಮವನ್ನು ಆಕ್ರಮಿಸಿ ಹೊಸಕಿಹಾಕುವ ಹುನ್ನಾರ ನಡೆಸಿದೆ. ಆದರೆ ಆ ಹುನ್ನಾರವನ್ನು ಅರ್ಥಮಾಡಿಕೊಳ್ಳಲಾಗದಷ್ಟು ಅಜ್ಞಾನ ಲಿಂಗಾಯತರನ್ನು ಆವರಿಸಿದೆ. ಅದರಲ್ಲೂ ವೀರಣ್ಣ ಚರಂತಿಮಠನಂಥ ಬುದ್ಧಿ ಇಲ್ಲದವರು ಬಿಜೆಪಿಯ ಗುಲಾಮರಾಗಿದ್ದಾರೆ. ಬಿಜೆಪಿ ಕೂಡ ವೈದಿಕ ಪುರೋಹಿತ ಶಾಹಿಯ ಉದ್ದೇಶಿತ ಕಾರ್ಯಸೂಚಿಯನ್ನು ಜಾರಿಗೊಳಿಸಲೆಂದೇ ಇರುವ ರಾಜಕೀಯಪಕ್ಷ ತಾನೇ?! ಹೀಗಾಗಿ ಗದುಗಿನ ತೋಂಟದಾರ್ಯ ಸ್ವಾಮಿಗಳಂತ ಬಸವ ತತ್ವನಿಷ್ಠರನ್ನು ಗುರಿಯಾಗಿರಿಸಿಕೊಂಡ ಹೀನ ಕೃತ್ಯವನ್ನು ಶಿವಯೋಗಮಂದಿರಲ್ಲಿ ತೋರಿದೆ. ಈ ಹಿನ್ನೆಲೆಯಲ್ಲಿ ಕೋ.ಚೆನ್ನಬಸಪ್ಪನವರ ಮತ್ತು ಭಾಲ್ಕಿ ಸ್ವಾಮಿಗಳ ಸಂದರ್ಶನದ ವಿಚಾರಗಳು ಬೆಳಕು ನೀಡಿವೆ. ಒಳ್ಳೆಯ ಚರ್ಚೆಯನ್ನು ಹುಟ್ಟುಹಾಕಿದ. ನಿಮಗೆ ಅಭಿನಂದನೆಗಳು. ಪತ್ರಿಕೆ ಚೆನ್ನಾಗಿ ಬರುತ್ತಿದೆ. ಶುಭಾಶಯಗಳು. ಅಂದಹಾಗೆ ಈ ಸಲ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಹಂಚಿಕೆಯಲ್ಲೂ ಆರೆಸ್ಸೆಸ್ ವಾಸೀಲಿ ಎದ್ದು ಕಾಣುತ್ತಿದೆ. ಆ ಕುರಿತು ಒಂದು ತನಿಖಾ ವರದಿ ಪ್ರಕಟಿಸಿರಿ. ವಂದನೆಗಳು

ಹುರುಕಡ್ಲಿ ಶಿವಕುಮಾರ, ಬಳ್ಳಾರಿ

ಈ ಲೋಕದ ಒಡಲಾಳದ ನೋವನ್ನು, ತಳಮಳವನ್ನು ಕಾವ್ಯವಾಗಿಸಿದ ಎಸ್.ಕೆ.ಹನುಮಂತಯ್ಯರು ತಮ್ಮನ್ನು ತಾವೇ ಕೊಂದುಕೊಂಡಿದ್ದು ಅಕ್ಷಮ್ಯ. ನಗರವಾಸಿ ಹಂಬಲಗಳ ಹಿಂದೆ ಬಿದ್ದ ಹನುಮಂತಯ್ಯ ಪ್ರೀತಿಸಿ ವಿವಾಹವಾದ ಶೈಲಜಾರಿಗೆ ಅನ್ಯಾಯ ಮಾಡಿದ್ದು ದುರದೃಷ್ಟಕರ.

-ನಾರಾಯಣಸ್ವಾಮಿ, ಕೋಲಾರ

ಜನಗಣತಿಯ ಹೆಸರಲ್ಲಿ, ಭದ್ರತೆಯ ಹೆಸರಲ್ಲಿ ಆಳುವ ವರ್ಗಗಳು ಜನರ ನಡುಮನೆಗೆ ನುಗ್ಗುತ್ತಿರುವುದು ಖಂಡನೀಯ. ವಿಶ್ವಬ್ಯಾಂಕ್, ಐಎಮ್‌ಎಫ್‌ಗಳ ಅಣತಿಯಂತೆ ಪ್ರತಿವರ್ಷ ಪಡಿತರ ವ್ಯವಸ್ಥೆಯಲ್ಲಿ ನೀಡುವ ಆಹಾರ ಧಾನ್ಯಗಳ ಪ್ರಮಾಣವನ್ನು ಕಡಿತ ಮಾಡುತ್ತಿದೆಯಲ್ಲದೇ, ಯಾವುಯಾವುದೋ ಹೊಸ ಮಾನದಂಡಗಳನ್ನು ಸೃಷ್ಟಿಸಿ ಬಡವರನ್ನು ಪಡಿತರ ವ್ಯವಸ್ಥೆಯಿಂದ ಹಂತಹಂತವಾಗಿ ಹೊರಹಾಕಲಾಗುತ್ತಿದೆ.

ಮೊದಲು ಎಲ್ಲ ಬಡವರಿಗೆ ಅವಶ್ಯವಿರುವ ಆಹಾರಧಾನ್ಯ ಪೂರೈಸುವುದನ್ನು ಬಿಟ್ಟು, ಜನಗಣತಿಯ ನೆಪದಲ್ಲಿ ಬೇಹುಗಾರಿಕೆ ಕೆಲಸಕ್ಕಿಳಿದಿರುವುದರ ವಿರುದ್ಧ ಜನಪರ ಸಂಘಟನೆಗಳು ಧ್ವನಿ ಎತ್ತಬೇಕಿದೆ.

-ಸುಭಾಷ್ ಪ್ಯಾಟಿ, ಗುಲ್ಬರ್ಗಾ

ಏಪ್ರಿಲ್ 28ರ ಲಂಕೇಶ್‌ನಲ್ಲಿ ಓದುಗರೊಬ್ಬರು ಅಂದುಕೊಂಡಂತೆ ಈ ಚಾಣಕ್ಯವಾದಿಗಳ (ಕು)ತಂತ್ರಗಾರಿಕೆ ಎಷ್ಟರಮಟ್ಟಿಗೆ ವ್ಯಾಪಿಸುತ್ತಿದೆಯೆಂದರೆ, ಪುರೋಹಿತಶಾಹಿಗಳ ಸುವರ್ಣಯುಗ ಮತ್ತೆ ಮರುಕಳಿಸುವ ಸೂಚನೆಗಳು ಕಾಣತೊಡಗಿವೆ. ವಿವೇಕಾನಂದರ ಅವತ್ತಿನ 'ಹುಚ್ಚರ ನೆಲೆ' (Lunatic asylum) ಕೇರಳದಿಂದ ಬಂದ ನಾರಾಯಣ ಗುರುಗಳು ಬ್ರಿಟಿಷರೇ ನನ್ನ ಗುರುಗಳು ಎಂದಿದ್ದರು. ಅಬ್ರಾಹ್ಮಣರೆಲ್ಲರನ್ನು ವಿದ್ಯೆಯಿಂದ ವಂಚಿತ (ಆರಂಭ ಕಾಲದಲ್ಲಿ ಸ್ತ್ರೀಯರನ್ನು ಸೇರಿ ಎಲ್ಲರಿಗೂ ಸಮಾನ ಅವಕಾಶವಿತ್ತು)ರನ್ನಾಗಿಸಿ ಅಜ್ಞಾನದ ಕೂಪದಲ್ಲೇ ಅವರನ್ನ ಉಳಿಸಿ ಮೆರೆದ ವರ್ಗ ಇಂದು ಬೇರೊಂದು ರೀತಿಯಲ್ಲಿ ತನ್ನ ಬೊಗಳೆ ಧಾರ್ಮಿಕ ನಂಬಿಕೆಗಳನ್ನು ಜನಮಾನಸದಲ್ಲಿ ತುಂಬತೊಡಗಿದೆ. ಇವೆಲ್ಲದರ ಹಿಂದಿರುವ ಹುನ್ನಾರ ಒಂದೇ:

ಅದೇ ಕೈತಪ್ಪಿದ್ದ ಹಿಡಿತವನ್ನು ಮರಳಿ ಸ್ಥಾಪಿಸುವುದು. ಈ ಚಾಣಕ್ಯವಾದಿಗಳ ತಂತ್ರಗಾರಿಕೆಯ ಕೆಲ ಸ್ಯಾಂಪಲ್ ನೋಡಿ-

ಆರೆಸ್ಸೆಸ್ ಕಲ್ಲಡ್ಕ ಭಟ್ಟನ ಹಿಡಿತದಲ್ಲಿರುವ ದಕ ಈಗ ಕುಲಗೆಟ್ಟಿದೆ ಅಂದ ರೇಣುಕಾ ಚೌಧುರಿಯ ವಿರುದ್ಧದ ಪ್ರತಿಭಟನೆಯಲ್ಲಿ ಮುಸ್ಲಿಂ ಕ್ರಿಶ್ಚಿಯನ್ನರೂ ಭಾಗಿಗಳೆಂದು ಕೆಲವರನ್ನ ಮುಂದಿಟ್ಟು ಬಿಂಬಿಸಲಾಯ್ತು, ಪುತ್ತೂರಿನಲ್ಲಿ ಗೌರಿ ಲಂಕೇಶರ ವಿರುದ್ಧ ರಾಘವೇಶನ ಚೇಲಾಗಳು ಕೇಸ್ ಹಾಕಿದಾಗಲೂ ಇದೇರೀತಿ ರಾಘವನ ಹಮ್ಮಕರಿಗಿಂತ ಅನ್ಯ ಹಿಂದೂಗಳಿಗೆ ನೋವಾಗಿದೆ ಎಂದು ಬಿಂಬಿಸಲು ಬ್ರಾಹ್ಮಣೇತರರನ್ನ ಮುಂಚೂಣಿಯಲ್ಲಿಡಲಾಯ್ತು.

ಗೋಮಾಂಸಸೇವನೆ ಸೇರಿದಂತೆ ಸಂಸ್ಕೃತ ಭಾಷೆ... ಅವನತಿ, ಬಾಲ್ಯ ವಿವಾಹ, ಸತಿಪದ್ಧತಿ ಮುಂತಾ... ಅನಿಷ್ಟಗಳೆಲ್ಲ ಹಿಂದೂತ್ವದ ಅಕ್ರಮ ಕೂಸುಗಳೇ ಆಗಿದ್ದರೂ ತಮ್ಮ ಮೇಲಿರುವ ಆಪಾದನೆಗಳ ಗಮನ ಬೇರೆ... ಸೆಳೆಯಲು ವ್ಯವಸ್ಥಿತವಾಗಿ ಇವನ್ನೆಲ್ಲ ಅನ್ಯ ಧರ್ಮೀಯ... ತಲೆ ಮೇಲೆ ಕೂರಿಸಿ ತಕ್ಕಮಟ್ಟಿಗೆ ಯಶಸ್ಸನ್ನು ಪಡೆದ...

ಅಂತಾ ತೆರೇಸಾ, ಕಿಟೆಲ್, ಟಿಪ್ಪು, ಜೀಸುದಾ... ರಂತವರನ್ನೇ ಅನ್ಯರು ಎಂಬ ಕಾರಣಕ್ಕೆ... ಅಪನಂಬಿಕೆಯಿಂದ ಕಾಣುವಂತೆ ಮಾಡಲಾಯ್ತು.

ಶಿವಾಜಿ, ಕೃಷ್ಣದೇವರಾಯ ಮುಸಲ್ಮಾ... ವಿರೋಧಿಗಳಲ್ಲದಿದ್ದರೂ ಕೇವಲ ತಮ್ಮ ಬೇಳೆಬೇಯ... ಕೊಳ್ಳೋ ಸಲುವಾಗಿ ಇತಿಹಾಸ ವಿರುದ್ಧವಾಗಿ ಅವ... ಹಿಂದೂತ್ವದ ಪ್ರತಿಪಾದಕರಂತೆ ಬಿಂಬಿಸಲಾಯ್ತು.


ಅರುಣ್ ಶೌರಿ ಅಂಬೇಡ್ಕರ್ ಬಗ್ಗೆ **worshipi... false god** ಎಂದು ಕೀಳಾಗಿ ಬರೆದಾಗ ಒಳಗೊ... ಖುಷಿ ಪಟ್ಟ ಗಿರಾಕಿಗಳು ಈಗ ದಲಿತರನ್ನ ಸೆಳೆಯ... ಅಂಬೇಡ್ಕರರನ್ನು ತಮ್ಮ ಸಮಾರಂಭಗಳಲ್ಲಿ, ಆರೆಸ್... ಬೈಠಕ್‌ಗಳಲ್ಲಿ ತಮ್ಮವರೇ ಎನ್ನುವಂತೆ ಬಿಂಬಿಸಿಕೊಳ್... ನಾಟಕವಾಡತೊಡಗಿದ್ದಾರೆ. ಪಕ್ಕಾ ಜನಪರ ನಿಲು... ನಿಷ್ಠುರಿ ಯಾಗಿದ್ದ ಸ್ವಾಮಿ ವಿವೇಕಾನಂದರೂ ಕೂಡ... ಅವಮಾನಕ್ಕೆ ಹೊರತಾಗಿಲ್ಲ.

ಹುಡುಕುತ್ತಾ ಹೋದರೆ ಈ ಅಭಿನವ ಚಾಣ... ತಂತ್ರಗಾರಿಕೆಯ ಸ್ಯಾಂಪಲ್‌ಗಳು ಸಾವಿರಾರು ಸಿಗು...

-ಎಸ್.ಎಸ್.ಗೇರುಕಟ್ಟೆ, ಬೆಳ...

35 ಸಾವಿರದಲ್ಲಿ

ನವಿಲಾದವರು


ಗಿರಿರಾಜು


ಸಿನಿಮಾ ನಿರ್ಮಾಣಕ್ಕೆ ಕೋಟಿಗಟ್ಟಲೆ ಹಣ
, ವರ್ಷಗಟ್ಟಲೆ ಸಮಯ ಬೇಕು...
ತ್ಯಾದಿ ನಂಬಿಕೆ ಸುಳ್ಳಾಗುವಂತೆ ಒಂದು
ಮಾ ಬಂದಿದೆ.

ಈ ಸಿನಿಮಾದ ಹೆಸರು 'ನವಿಲಾದವರು'.
ಸಾಮಾನ್ಯವಾಗಿ ಸ್ಥಿರ ಫೋಟೋಗಳನ್ನು
ಯಲು ಬಳಸುವ ಸ್ಟಿಲ್ ಕ್ಯಾಮೆರಾದಲ್ಲೇ ಇಡೀ
ವನ್ನು ಶೂಟ್ ಮಾಡಲಾಗಿದೆ. ಆದರೆ ಈ
ಮಾವನ್ನು ನೋಡಿದ ಯಾರಿಗೂ ಇದು
ರಣ ಸ್ಟಿಲ್ ಕ್ಯಾಮೆರಾದಲ್ಲಿ ತೆಗೆದ ಚಿತ್ರ
ು ಗೊತ್ತಾಗುವುದೇ ಇಲ್ಲ.

ಈ ಚಿತ್ರವನ್ನು ನಿರ್ದೇಶಿಸಿರುವ ಯುವಕನ
ು ಬಿ.ಎಂ. ಗಿರಿರಾಜ್. ಇವರು ಮೂಲತಃ
ದವರು. ಹಿಂದೆ ಹಂಸಲೇಖಾ ಮತ್ತು
ಭರಣರೊಂದಿಗೆ ಸಹಾಯಕರಾಗಿ
ದಿರುವ ಗಿರಿರಾಜ್ ಇನ್ನೂ ಇಪ್ಪತ್ತಾರರ
.

ನ್ನಡದ ಮತ್ತೊಬ್ಬ ಕ್ರಿಯಾಶೀಲ ನಿರ್ದೇಶಕ
ಕ್‌ರೊಂದಿಗೆ 'ಸಿಕ್ಸರ್', 'ಮೊಗ್ಗಿನ ಮನಸು'
ು ಈಗಷ್ಟೇ ಚಿತ್ರೀಕರಣ ಪೂರೈಸಿರುವ
ನ್ ಲವ್ ಸ್ಟೋರಿ' ಚಿತ್ರಗಳಿಗೆ ಗಿರಿರಾಜ್
ಯಕರಾಗಿ ದುಡಿದಿದ್ದಾರೆ. ತಾನೊಬ್ಬ
ದೇಶಕನಾಗಿ ಹೆಸರು ಮಾಡಬೇಕು ಎಂಬ
ನ್ನು ಬಯಕೆ ಹೊಂದಿರುವ ಗಿರಿರಾಜ್‌ಗೆ
ಷ್ಟು ಗಾಂಧೀನಗರದ ನಿರ್ಮಾಪಕರು
ಕಾಶ ಕೊಡ್ತೀನಿ'
ು ಕಾಗೆ
ಸಿದ್ದಾರೆ.
ಷ್ಟಂದಷ್ಟು ಜನ
ಮನ್ನಿಟ್ಟುಕೊಂಡು
ಸಿನಿಮಾ
ತಲು ಸಾಧ್ಯವಿಲ್ಲ.
ತಮಿಳಿಗೋ
ಗೋ ಹೋದರೆ
' ಎಂದು ಹೇಳಿ
ಮೂಡಿಸಿದ್ದಾರೆ.
ಸಾಕಷ್ಟು ಅಪಮಾನಗಳನ್ನು ಎದುರಿಸಿರುವ
ಜ್ 'ನಾನೂ ನಿರ್ದೇಶನ ಮಾಡುತ್ತೀನಿ'
ದನ್ನು ತೋರಿಸಬೇಕು ಎಂಬ ಛಲದಿಂದ
ಾದವರು' ಚಿತ್ರವನ್ನು ಸಿದ್ಧಪಡಿಸಿದ್ದಾರೆ.
ದೂ ಬರೀ ಮೂವತ್ತೈದು ಸಾವಿರ
ಯಿಗಳಲ್ಲಿ...

ೊಸದಾಗಿ ಸಿನಿಮಾ ಮಾಡಬೇಕು ಎಂದು
ಟವರು, ಅದೂ ಇತ್ತೀಚಿನ ದಿನಗಳಲ್ಲಿ, ಸಿಟಿ
ಸಬ್ಜೆಕ್ಟ್, ಅಥವಾ ಯಾವುದಾದರೂ
ುಡ ಸೀಳುವ ಕಥೆಗಳನ್ನೇ ಆಯ್ಕೆ
ಕೊಳ್ಳುತ್ತಾರೆ.
ದರೆ ಗಿರಿರಾಜ್ ತಮ್ಮ ಈ ಪುಟ್ಟ ಚಿತ್ರದ
ಕಥೆಗೆ ದೊಡ್ಡ ಸಮಸ್ಯೆಯನ್ನೇ ವಸ್ತುವಾಗಿಸಿಕೊಂಡಿದ್ದಾರೆ. ಕರಾವಳಿಯಲ್ಲಿ ಒಂದು ಮುಸ್ಲಿಂ ಕುಟುಂಬದ ಮೇಲೆ ನಡೆದ ಪೊಲೀಸರ ದೌರ್ಜನ್ಯದ ಸಣ್ಣ ಎಳೆಗೆ ತಮ್ಮ ಕಲ್ಪನೆಯನ್ನು ಓರೆ ಹಚ್ಚಿ, ಎದುರಿಗೆ ಕುಳಿತವರು ಒಂದೂಕಾಲು ಗಂಟೆ ಅತ್ತಿತ್ತ ಅಲ್ಲಾಡದಂಥ ನೈಜವಾದ ಸಿನಿಮಾವನ್ನು ರೂಪಿಸಿದ್ದಾರೆ. ಇಡೀ ಸಿನಿಮಾ ಭಯೋತ್ಪಾದನೆಯ ಸುತ್ತವೇ ತಿರುಗಾಡಿದರೂ ಎಲ್ಲೂ ಅದು ಅತಿರಂಜಕವಾಗಿಲ್ಲ. ಮುಸ್ಲಿಮರೆಲ್ಲಾ ಭಯೋತ್ಪಾದಕರಲ್ಲ ಹಾಗು ಪ್ರೀತಿ ಮತ್ತು ಕ್ಷಮೆಯಿಂದಷ್ಟೇ ಹಿಂಸೆಯನ್ನು ದಮನ ಮಾಡಬಹುದು ಎಂಬುದು ಈ ಚಿತ್ರದ ತಿರುಳು.


ಬಳಕೆಯಾದ ಸ್ಟಿಲ್ ಕ್ಯಾಮರಾ ಮತ್ತು ಛಾಯಾಗ್ರಾಹಕ ಕ್ಸೇವಿಯರ್

ಅಂದಹಾಗೆ ಇದನ್ನು ಕೇವಲ ಹತ್ತೇ ದಿನಗಳಲ್ಲಿ ಚಿತ್ರೀಕರಿಸಲಾಗಿದೆ. ಸ್ಟಿಲ್ ಕ್ಯಾಮೆರಾವನ್ನು ಬಳಸಿ ತೆಗೆದಿರುವ ಈ ಚಿತ್ರಕ್ಕೆ ಲೈಟಿಂಗ್ ಮಾಡಿರುವುದು ಹೇಗೆ ಗೊತ್ತೆ? ಮನೆಯಲ್ಲಿ ಬಳಸುವ ಟೇಬಲ್ ಲ್ಯಾಂಪ್‌ಗೆ ಸಿಲ್ವರ್ ಪೇಪರ್ ಬಳಸಿ ಲೈಟಿಂಗ್ ಮಾಡಿದ್ದಾರೆ. ಸಿನಿಮಾದಲ್ಲಿ ನಟಿಸಿರುವ ಯಾವ ಕಲಾವಿದರೂ ಸಂಭಾವನೆಯನ್ನು ಪಡೆದಿಲ್ಲ. ಊಟ, ತಿಂಡಿ, ಕ್ಯಾಮೆರಾ ಬ್ಯಾಟರಿ ಖರ್ಚು ಎಂದೆಲ್ಲ 28 ಸಾವಿರ ರೂ. ತಗುಲಿದರೆ, ಇನ್ನು ಎಡಿಟಿಂಗ್ ಮಾಡಿ ಡಿವಿಡಿ ಕಾಪಿ ತೆಗೆಯುವಷ್ಟರಲ್ಲಿ ಮೂವತ್ತೈದು ಸಾವಿರ ವ್ಯಯವಾಗಿದೆ.

ಸಣ್ಣ ಪ್ರಮಾಣದ ಬಜೆಟ್ ಹೂಡಿದರೆ ತಾನು ಜನ ನೋಡುವ ಅತ್ಯುತ್ತಮ ಚಿತ್ರವೊಂದನ್ನು ನಿರ್ದೇಶಿಸಬಲ್ಲೆ ಎಂಬುದನ್ನು ಈ ಕಿರುಚಿತ್ರದ ಮೂಲಕ ನಿರ್ದೇಶಕ ಗಿರಿರಾಜ್ ತೋರಿಸಿಕೊಟ್ಟಿದ್ದಾರೆ.


• ಅರುಣ್‌ಜಿ.
arunodayagc@gmail.com

ಥೇಂಬರ್


ತುಂಬಾ ಎಲೆಕ್ಷನ್ ವಾಸನೆ...!

ಮೇ 8ರಂದು ನಡೆಯಲಿರುವ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಚುನಾವಣೆಯ ಬಿಸಿ ಇಡೀ ಗಾಂಧೀನಗರವನ್ನು ಆವರಿಸಿದೆ. ಚುನಾವಣೆಗೆ ಸ್ಪರ್ಧಿಸಿರುವ ಒಬ್ಬೊಬ್ಬರೂ ಒಂದೊಂದು ಬಗೆಯ ಲಾಬಿಗಳಲ್ಲಿ ತೊಡಗಿದ್ದಾರೆ.


ಈ ಬಾರಿ ವಿತರಕರ ಪರವಾಗಿ ಯಾರನ್ನಾದರೂ ಆಯ್ಕೆ ಮಾಡಬೇಕಿರುವುದರಿಂದ ಬಸಂತ್ ಕುಮಾರ್ ಪಟೇಲ್, ಬಿ.ಎನ್. ಗಂಗಾಧರ್, ಎಚ್.ಡಿ. ಗಂಗರಾಜು, ಜಾನಕಿರಾಮ್ ಮತ್ತು 'ಸಿಂಹಾದ್ರಿಯ ಸಿಂಹ' ಚಿತ್ರವನ್ನು ನಿರ್ಮಿಸಿದ್ದ ವಿಜಯ್ ಕುಮಾರ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ.


ಗಂಗಾಧರ್

ಇವರಲ್ಲಿ ಬಹುತೇಕ ಬಿ.ಎನ್. ಗಂಗಾಧರ್ ಅವರೇ ಆಯ್ಕೆಯಾಗುವ ಸಾಧ್ಯತೆಗಳು ಕಾಣಿಸುತ್ತಿವೆ. ಯಾಕೆಂದರೆ, ಗಂಗಾಧರ್ ಚಿತ್ರರಂಗದಲ್ಲಿ ದಶಕಗಳ ಕಾಲ ದುಡಿದವರು, ಇಡೀ ಚಿತ್ರರಂಗದ ಆಳ-ಅಗಲ ತಿಳಿದಿರುವವರು.


ಬಸಂತ್

ಕನ್ನಡ ಚಿತ್ರರಂಗದ ಮೇರು ಪ್ರತಿಭೆಗಳಲ್ಲಿ ಒಬ್ಬರಾದ ಹಂಸಲೇಖ ಅವರಿಗೆ ಆರಂಭದಲ್ಲಿ ಅವಕಾಶ ಕೊಟ್ಟಿದ್ದು, ಶಶಿಕುಮಾರ್ ನಂತರ ನಾಯಕನಟನಾಗಿ ಬೆಳೆದು ನಿಲ್ಲಲು ನೆರವಾಗಿದ್ದು, ಕರಿಬಸವಯ್ಯನಂಥ ರಂಗಭೂಮಿ ಕಲಾವಿದ ಸಿನಿಮಾದಲ್ಲಿ ನೆಲೆ ನಿಲ್ಲಲು ಸಹಕರಿಸಿದ್ದು ಇದೇ ಗಂಗಾಧರ್. ಬರೀ ನಟರು ಮಾತ್ರವಲ್ಲದೆ, ಹಲವಾರು ಛಾಯಾಗ್ರಾಹಕರು, ತಂತ್ರಜ್ಞರಿಗೂ ಅವಕಾಶಗಳನ್ನು ನೀಡಿ ಪ್ರೋತ್ಸಾಹಿಸಿದ ಹೆಗ್ಗಳಿಕೆ ಗಂಗಾಧರ್ ಅವರದ್ದಾಗಿದೆ.


ಗಂಗರಾಜು

ಬಸಂತ್ ಕುಮಾರ್ ಪಾಟೀಲ್ ಈ ಬಾರಿಯ ಅಧ್ಯಕ್ಷಗಾದಿಯನ್ನು ಅಲಂಕರಿಸಲು ತಮ್ಮ ಸಕಲ ವಿದ್ಯೆಗಳನ್ನು ಬಳಸುತ್ತಿದ್ದಾರೆ. ಸುಮಾರು ನಾಲ್ಕು ಸಾವಿರ ಮೆಂಬರ್‌ಗಳನ್ನು ಹೊಂದಿರುವ ವಾಣಿಜ್ಯ ಮಂಡಳಿಯಲ್ಲಿ ಸದಸ್ಯತ್ವವನ್ನು ವರ್ಷಕ್ಕೊಮ್ಮೆ ರಿನೀವಲ್ ಮಾಡಿಕೊಳ್ಳಲು ಐದು ನೂರು ರೂಪಾಯಿಗಳ ಶುಲ್ಕ ಕಟ್ಟಬೇಕು. ಆದರೆ ಬಹುತೇಕ ಸದಸ್ಯರು ತಮ್ಮ ಜೇಬಿನಿಂದ ಹಣವನ್ನು ಕಟ್ಟುವುದೇ ಇಲ್ಲ. ಯಾಕೆಂದರೆ ಎಲೆಕ್ಷನ್‌ಗೆ ನಿಂತ ಪ್ರಭಾವೀ ಸ್ಪರ್ಧಿಗಳೇ ಆ ಶುಲ್ಕವನ್ನು ಪಾವತಿ ಮಾಡಿ ವೋಟುಗಳನ್ನು ಖರೀದಿಸುತ್ತಾರೆ. ಈ ಬಾರಿಯೂ ಹಾಗೇ ಹಾಗಿದೆ. ಬಸಂತ್ ಕುಮಾರ್ ಪಾಟೀಲ್ ಒಬ್ಬರೇ ಸುಮಾರು ಆರುನೂರಕ್ಕೂ ಅಧಿಕ ಸದಸ್ಯರ ವಾರ್ಷಿಕ ಶುಲ್ಕವನ್ನು ಪಾವತಿಸಿದ್ದಾರಂತೆ. ಆದ್ದರಿಂದ ಅವರೆಲ್ಲರ ಮತಗಳೂ ತನಗೇ ಎಂಬ ಲೆಕ್ಕದಲ್ಲಿದ್ದಾರೆ.


ಇನ್ನು ಗಂಗರಾಜು ಅವರ ಫೀಲ್ಡ್‌ವರ್ಕ್ ಚೆನ್ನಾಗಿರುವುದರಿಂದ ಮತ್ತು ಪ್ರೊಡ್ಯೂಸರ್ಸ್ ಸೆಕ್ಟರ್‌ನಲ್ಲಿ ಅವರಿಗೆ ಸಾಕಷ್ಟು ಬೆಂಬಲಿಗರಿರುವುದರಿಂದ ತನ್ನ ಗೆಲುವು ಕಷ್ಟವಲ್ಲ ಎಂಬುದು ಗಂಗಣ್ಣನ ಲೆಕ್ಕ. ಗಂಗರಾಜು ಆಯ್ಕೆಯಾದರೆ ಪರಭಾಷಾ ಸಿನಿಮಾಗಳ ವಿತರಕರಿಗೆ ಮತ್ತು ಪ್ರದರ್ಶಕರಿಗೆ ಯಾವ ಅಡ್ಡಿಯೂ ಎದುರಾಗುವುದಿಲ್ಲ. ನಿಯಮವನ್ನು ಮೀರಿ ಅಧಿಕ ಥಿಯೇಟರುಗಳಲ್ಲಿ ತಮಿಳು, ತೆಲುಗು ಚಿತ್ರಗಳನ್ನು ಬಿಡುಗಡೆ ಮಾಡಿ ಹಣ ಮಾಡಬಹುದು ಎಂಬುದು ಕೆಲ ವಿತರಕ ಮತ್ತು ಪ್ರದರ್ಶಕರ ಬಯಕೆ.

ಇವರೆಲ್ಲರ ಮಧ್ಯೆ ಬಿಜೆಪಿ ಸದಸ್ಯರಾಗಿರುವ ವಿಜಯ್ ಕುಮಾರ್ ರಾಜಕೀಯ ತಂತ್ರ ಬಳಸಿ ಮತಯಾಚಿಸುತ್ತಿದ್ದಾರೆ. ಆದೇನೆಂದರೆ, "ಬಿಜೆಪಿಯ ಪಕ್ಷವೇ ರಾಜ್ಯದಲ್ಲಿ ಅಧಿಕಾರದಲ್ಲಿದೆ. ಯಡಿಯೂರಪ್ಪ ನನಗೆ ಸಿಕ್ಕಾಪಟ್ಟೆ ಕ್ಲೋಸು. ಎಲ್ಲರೂ ಮನಸ್ಸು ಮಾಡಿ ನನ್ನನ್ನು ಆಯ್ಕೆ ಮಾಡಿದರೆ, ಖುದ್ದು ಸಿಎಮ್‌ಗೆ ಹೇಳಿ ಚಿತ್ರರಂಗದವರ ಸಕಲ ಸಮಸ್ಯೆಗಳನ್ನೂ ಒಂದೇ ಏಟಿಗೆ ಬಗೆಹರಿಸಿಬಿಡುತ್ತೇನೆ..." ಎಂದೆಲ್ಲಾ ವಿಜಯ್ ಕುಮಾರ್ ಪುಂಗಿ ಊದುತ್ತಿದ್ದಾರೆ.

ಈಗ ಆಮಿಷಗಳಿಗೆ, ಸಣ್ಣಪುಟ್ಟ ಡೀಲುಗಳ ಆಸೆಗೆ ಬೀಳದೆ ಚುನಾವಣಾ ಕಣದಲ್ಲಿರುವ ಸಭ್ಯರನ್ನು ಆಯ್ಕೆ ಮಾಡಿ ಗಬ್ಬೆದ್ದಿರುವ ಚಿತ್ರರಂಗ ಮತ್ತು ವಾಣಿಜ್ಯ ಮಂಡಳಿಯ ಮರ್ಯಾದೆಯನ್ನು ಕಾಪಾಡುವ ಹೊಣೆ ಥೇಂಬರ್‌ನ ಸದಸ್ಯರ ಮುಂದಿದೆ...


ಕೃಷ್ಣನ್ ಲವ್ ಸ್ಟೋರಿ
ರಾಧಿಕಾ ಪಂಡಿತ್
ಅಜಯ್

ಹರಿಕೃಷ್ಣರ ಚೆನ್ನೈ ಪ್ರೇಮ



ಕನ್ನಡ ಚಿತ್ರರಂಗದ ಸಂಗೀತ ಕ್ಷೇತ್ರದ ದಿಗಂತದಲ್ಲಿ ಉದಯಿಸಿದ ಹೊಸ ಸಂಗೀತ ನಿರ್ದೇಶಕ ಹರಿಕೃಷ್ಣ ಬಗ್ಗೆ ಉದ್ಯಮದಲ್ಲಿ ಅಪಸ್ವರದ ಮಾತುಗಳು ಕೇಳಿಬರುತ್ತಿವೆ. ಹಲವಾರು ವರ್ಷಗಳ ಕಾಲ ಕ್ರೇಜಿ ಸ್ಟಾರ್ ರವಿಚಂದ್ರನ್ ಅವರ ಮನೆಯಲ್ಲೇ ಮೊಕ್ಕಾಂ ಹೂಡಿದ್ದ ಹರಿಕೃಷ್ಣ ದಿನಕರ್ ನಿರ್ದೇಶನದ 'ಜೊತೆಜೊತೆಯಲಿ' ಚಿತ್ರದ ಮುಖಾಂತರ ಸ್ವತಂತ್ರ ಸಂಗೀತ ನಿರ್ದೇಶಕರಾದರು. ಮಾತ್ರವಲ್ಲ, ಅತ್ಯಲ್ಪ ಸಮಯದಲ್ಲೇ ಕನ್ನಡ ಚಿತ್ರರಂಗದ ನಂ.1 ಸಂಗೀತ ನಿರ್ದೇಶಕ ಎನಿಸಿಕೊಂಡರು. ಉದ್ಯಮದ ಜನ ಕೂಡಾ ಹರಿಕೃಷ್ಣರಿಗೆ ಸಂಪೂರ್ಣ ಬೆಂಬಲ ನೀಡಿದರೆ ಪ್ರೇಕ್ಷಕ ಮಹಾಶಯ ಕೂಡಾ ಆತನ ಟ್ಯೂನ್‌ಗಳನ್ನು ಮೆಚ್ಚಿ ಕುಣಿದಾಡಿದ್ದುಂಟು.

ಆದರೆ ಈಗ ಹರಿಕೃಷ್ಣ ಉದ್ಯಮದವರ ಪಾಲಿಗೆ ಗಗನಕುಸುಮವಾಗಿದ್ದಾರೆ. ಅವರು ಮದ್ರಾಸ್‌ನಲ್ಲೊಂದು ಸ್ವಂತ ಸ್ಟುಡಿಯೋವನ್ನು ಆರಂಭಿಸಿದ್ದಾರಂತೆ. ಹೀಗಾಗಿ ಅವರ ಚಿತ್ರದ ಸಂಗೀತದ ಕೆಲಸಗಳನ್ನು ಮದ್ರಾಸಿನಲ್ಲಿರುವ ಸ್ವಂತ ಸ್ಟುಡಿಯೋದಲ್ಲೇ ಮಾಡಲು ಒಲವು ತೋರಿಸುತ್ತಾರಂತೆ. ಇದು ನಿರ್ಮಾಪಕರ ಪಾಲಿಗೆ ನುಂಗಲಾರದ ತುತ್ತಾಗಿದೆ. ದರೆ ಬೆಂಗಳೂರಿನಲ್ಲೇ ಸಾಕಷ್ಟು ಸ್ಟುಡಿಯೋಗಳಿರುವಾಗ ಮದ್ರಾಸಿಗೆ ಹೋಗುವ ಮತ್ತು ಅದಕ್ಕಾಗಿ ಹೆಚ್ಚಿನ ಹಣವನ್ನು ಖರ್ಚು ಮಾಡುವ ಕೇನೆಂಬುದು ಇವರ ಪ್ರಶ್ನೆ.

ಪುಷ ಅಪಾರ ಪ್ರತಿಭೆಯುಳ್ಳ ಹರಿಕೃಷ್ಣ ಅವರ ಬೇಡಿಕೆ ಮುಂಬರುವ ದಿನಗಳಲ್ಲಿ ಈ ಕಾರಣಕ್ಕಾಗಿ ಸ್ವಲ್ಪ ಕುಸಿದರೂ ಆಶ್ಚರ್ಯವಿಲ್ಲ. ಸಮಯ ಮೊದಲೇ ಹರಿಕೃಷ್ಣ ಎಚ್ಚೆತ್ತು ಈ ಬಗ್ಗೆ ಮುತುವರ್ಜಿ ವಹಿಸಿದರೆ ಇನ್ನೂ ಒಂದಿಷ್ಟು ಕಾಲ ನಂ.1 ಪಟ್ಟದಲ್ಲಿ ಮೆರೆಯಬಹುದು.

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 12-05-2010 RNI No. KARKAN2005/14



ಕನಸು ಕಾಣುವ ಮುನ್ನ ರೈ ಜೊತೆ...

ಬೆಳಗ್ಗಿನ ಹೊತ್ತು ಹೈದರಾಬಾದ್‌ನಲ್ಲಿ ಅವರದೇ ನಿರ್ಮಾಣ ಸಂಸ್ಥೆಯ 'ಪಯಣ' ಎಂಬ ಚಿತ್ರದ ಶೂಟಿಂಗ್‌ನಲ್ಲಿ ಭಾಗವಹಿಸುವ ರೈ ಪ್ರತಿದಿನ ಸಂಜೆ ಹೊತ್ತಿಗೆ ಬೆಂಗಳೂರಿಗೆ ವಾಪಸ್ಸಾಗಿ ಮಧ್ಯರಾತ್ರಿ ತನಕ 'ನಾನೂ ನನ್ನ ಕನಸು' ಚಿತ್ರದ ಬಿಡುಗಡೆ ತಯಾರಿಯಲ್ಲಿ ನಿರತರಾಗಿರುತ್ತಾರೆ. ಭಾರತೀಯ ಚಿತ್ರರಂಗದ ದಿಗಂತದಲ್ಲಿ ಈಗಾಗಲೇ ಒಂದು ಸುತ್ತು ಹಾರಾಟ ನಡೆಸಿ ಬಂದಿರುವ ರೈ ಸದ್ಯಕ್ಕೆ ನಿರ್ದೇಶಕನಾಗಿ ಕನ್ನಡ ಚಿತ್ರರಂಗದಲ್ಲಿದ್ದಾರೆ.

ಮೊನ್ನೆ ಪ್ರಕಾಶ್ ರೈ ಜೊತೆ ಮಾತುಕತೆಗೆ ಕುಳಿತಾಗ ಅವರ ನಿರ್ದೇಶನದ 'ನಾನೂ ನನ್ನ ಕನಸು' ಚಿತ್ರಕ್ಕಿಂತ ಬೇರೆ ವಿಷಯಗಳ ಬಗ್ಗೆಯೇ ಹೆಚ್ಚು ಮಾತನಾಡಿದರು. ಜಯಂತ್ ಕಾಯ್ಕಿಣಿಯ ಕಾವ್ಯ, ಐಪಿಎಲ್ ಕ್ರಿಕೆಟ್ ಪಂದ್ಯ, ಲಂಕೇಶರ ಸಿಟ್ಟು, ಬೇಂದ್ರೆಯವರ ಕವನ, ಆತನ ಡೈವೋರ್ಸ್ ಮತ್ತು ಹೊಸ ಮದುವೆ... ಹೀಗೆ ಹತ್ತು ಹಲವು ವಿಷಯಗಳು ಬಂದುಹೋದವು. ಅವುಗಳಲ್ಲಿ ಹಲವನ್ನು ಇಲ್ಲಿ ನೀಡಿದ್ದೇವೆ.

*** ನೀವು ರೀಮೇಕ್ ಸಿನಿಮಾದ ಮುಖಾಂತರ ನಿರ್ದೇಶಕನಾಗುವ ಅನಿವಾರ್ಯತೆ ಇತ್ತೇ?**

ಇತರೆ ಚಿತ್ರಗಳಲ್ಲಿ ನಾನು ನಿರ್ಮಾಪಕನಾಗಿ, ನಟನಾಗಿ ಮಾತ್ರ ಅನುಭವ ಪಡೆದಿದ್ದೆ. ಇಲ್ಲಿ ನಿರ್ದೇಶಕನಾಗಿ ನನ್ನದೇ ಶೈಲಿಯಲ್ಲಿ ನಿಮಗೆ ಕಥೆ ಹೇಳುತ್ತೇನೆ. ಇಲ್ಲಿ ನಾನು ನಟನಿಗಿಂತ ಕಥೆ ಹೇಳುವ ಕಥೆಗಾರನಾಗಿ ಬಂದಿದ್ದೇನೆ. ಇಷ್ಟಾಗಿಯೂ ಇದು ನನ್ನ ಜೀವನದ ಒಂದು ಪಯಣದ ಘಟ್ಟ ಅಷ್ಟೆ.

*** ನೀವು ದುಷ್ಟನ ಪಾತ್ರಗಳಿಂದ ಕನ್ನಡ ಪ್ರೇಕ್ಷಕರಿಗೆ ಪರಿಚಿತರಾದವರು. ಈ ಚಿತ್ರದಲ್ಲಿ ಒಳ್ಳೆಯ ಅಪ್ಪ.. ಅದನ್ನ ಕನ್ನಡದ ಪ್ರೇಕ್ಷಕ ಸ್ವೀಕರಿಸುತ್ತಾನೆಂದು ನಿಮಗನಿಸುತ್ತದೆಯೇ?**

ಹ..ಹ್ಹ..ಹ್ಹ.. (ಹೆಂಚು ಹಾರಿಹೋಗುವಂತೆ ನಗುತ್ತಾ) ನಾನು ದುಷ್ಟನ ಪಾತ್ರಗಳಲ್ಲಿ ನಟಿಸಿರಬಹುದು. ಆದರೆ ನಾನು ಒಳ್ಳೆಯವನೆಂಬುದು ಕನ್ನಡದ ಪ್ರೇಕ್ಷಕರಿಗೆ ಗೊತ್ತು, ನಾನು ಯಾವುದೇ ಭಾಷೆಯಲ್ಲಿ ರಾಜ್ಯ ಪ್ರಶಸ್ತಿ ಅಥವಾ ರಾಷ್ಟ್ರ ಪ್ರಶಸ್ತಿ ಪಡೆದಾಗಲೂ ಕನ್ನಡದ ಜನ ಮತ್ತು ಪ್ರೇಕ್ಷಕರು ಅದನ್ನು ಆನಂದಿಸಿದ್ದಾರೆ ಮತ್ತು ಸಂಭ್ರಮಿಸಿದ್ದಾರೆ. ನಾನು ಇಲ್ಲಿಯವನೇ. ಹೀಗಾಗಿ ನನ್ನ ಸಾಧನೆ, ಸಾಹಸ, ವಿವಾದ, ನನ್ನ ಡೈವೋರ್ಸ್, ನನ್ನ ಹೊಸ ಮದುವೆ... ಇವೆಲ್ಲವನ್ನು ಕನ್ನಡಿಗರು ಆನಂದಿಸಿದ್ದಾರೆ ಎಂದಮೇಲೆ ನನ್ನ ಚಿತ್ರವನ್ನು ನೋಡಿ ಆನಂದಿಸುವುದಿಲ್ಲವೇ?

*** ನೀವು ಕರ್ನಾಟಕದ ಗಡಿದಾಟ ಹೊರಹೋದ ನಂತರ ಎಷ್ಟು ಸಾಧನೆ ಮಾಡಿದ್ದೀರೋ, ಅಷ್ಟೇ ವಿವಾದಕ್ಕೊಳಗಾಗಿದ್ದೀರಲ್ಲವೇ?**

Controversy is my surname!

*** ನಿಮ್ಮ ನಿರ್ದೇಶನದ ಮೊದಲ ಚಿತ್ರದ ಬಿಡುಗಡೆಯ ಮುನ್ನ ಯಾವ ರೀತಿ ಪ್ರಚಾರ ಕೈಗೊಳ್ಳುತ್ತೀರಿ?**

ನೋಡಿ, ನಾನು ನನ್ನ ಚಿತ್ರದ ಬಗ್ಗೆ **desparate** ಆಗಿ ಪಬ್ಲಿಸಿಟಿ ಮಾಡಲ್ಲ, ಆದರೆ ಬಿಡುಗಡೆಯ ಮುನ್ನ ನಾನು **brand ambassador** ಆಗಿರುವ ವೋಡಾಫೋನ್‌ನವರು ರಾಜ್ಯಾದ್ಯಂತ ನೂರು ವಿನೈಲ್ ಹಾಕಲು ಒಪ್ಪಿಕೊಂಡಿದ್ದಾರೆ. ಹಾಗೆಯೇ ಹಿಂದೂಸ್ತಾನ್ ಲಿವರ್ಸ್ ಲಿಮಿಟೆಡ್‌ನವರು ಎಲ್ಲಾ ಚಾನೆಲ್‌ಗಳಲ್ಲಿ ನನ್ನ ಚಿತ್ರದ **trailer**ಅನ್ನು ಪ್ರಾಯೋಜಿಸಲು ಮುಂದೆ ಬಂದಿದ್ದಾರೆ. ಇದೆಲ್ಲದರ ಮೊತ್ತವೇ ಸುಮಾರು ಒಂದು ಕೋಟಿ ರೂ. ಆಗುತ್ತದೆ. ಬಹುಶಃ ಇಷ್ಟೊಂದು ಹಣವನ್ನು ಕನ್ನಡದ ನಿರ್ಮಾಪಕರು ಪಬ್ಲಿಸಿಟಿಗೆ ಸುರಿದಿಲ್ಲ ಎಂಬುದು ನನ್ನ ಭಾವನೆ. ಇದರ ಹೊರತಾಗಿ ಎಲ್ಲಾ ಜಿಲ್ಲಾ ಕೇಂದ್ರಗಳಿಗೆ ನಾನು ಭೇಟಿ ನೀಡುತ್ತೇನೆ. ಒಮ್ಮೆ ಚಿತ್ರ ಬಿಡುಗಡೆಯಾದ ನಂತರ ನಾನು ಚಿತ್ರದ ಬಗ್ಗೆ ಏನೂ ಹೇಳುವುದಿಲ್ಲ, ಗೆಳೆಯರ ಜೊತೆಗೆ ಸಕಲೇಶಪುರ ಅಥವಾ ಕರಾವಳಿಗೆ ಹೋಗಿ ಮಳೆಯಲ್ಲಿ ಒಂದೆರಡು ಕಾಲ ಕಳೆಯಬೇಕೆಂದಿದ್ದೇನೆ.

*** ನೀವು ನಿಮ್ಮ ಚಿತ್ರಕ್ಕೆ ಬೇಕಾದ ಒಳ್ಳೆಯ ಪಬ್ಲಿಸಿಟಿ ಮಾಡಿದರೂ ಒಳ್ಳೆಯ ಥಿಯೇಟರ್‌ಗಳು ನಿಮಗೆ ಸಿಕ್ಕಿಲ್ಲವಲ್ಲ?**

ಅದೊಂದು ದೊಡ್ಡ ಮಾಫಿಯಾ. ಅದನ್ನು ಭೇದಿಸಿ ಒಳಹೋಗಲು ನನಗೆ ಕಷ್ಟವಾಗುತ್ತಿದೆ. ಏನಾದರೂ ಇದು ನನ್ನ ಮೊದಲ ಅನುಭವ ತಾನೇ? ಮುಂದೆ ನೋಡೋಣ.

ಹೀಗೆ ಮಾತು ಸಾಗಿದ್ದಾಗ, ರೈ ಎರಡು ದಿನಗಳ ಹಿಂದೆ ಕಾಸ್ಮೋಪಾಲಿಟನ್ ಕ್ಲಬ್‌ನಲ್ಲಿ ಭಾರತೀಯ ಕ್ರಿಕೆಟ್ ಧ್ರುವತಾರೆ ಜಿ.ಆರ್.ವಿಶ್ವನಾಥ್ ಆಕಸ್ಮಿಕವಾಗಿ ಸಿಕ್ಕಿದ್ದನ್ನು, ಅವರನ್ನು ಸ್ವತಃ ತಾನೇ ಪರಿಚಯಿಸಿಕೊಂಡು ಅವರೊಂದಿಗೆ ಎರಡು ಗಂಟೆಗಳ ಕಾಲ ಹರಟೆಹೊಡೆದಿದ್ದನ್ನು ರೈ ಸಂಭ್ರಮದಿಂದ ವರ್ಣಿಸಿದರು.

ಆ ನಂತರ ಮಾತು ಕ್ರಿಕೆಟ್‌ನಿಂದ ಸಾಹಿತ್ಯದತ್ತ ಸಾಗಿತು. "ನದಿಯ ಮೇಲಿರಬೇಕಾದ ಸೇತುವೆಗಳು, ನಗರದ ಮೇಲೆ ಹಾರಿ ಬಂದಿವೆ" ಎಂದು ಜಯಂತ್ ಕಾಯ್ಕಿಣಿ ಬರೆದ ಕವನದ ಸಾಲುಗಳನ್ನು ರೈ ನೆನೆಸಿಕೊಂಡರು. ಇದೆಲ್ಲದರ ಮಧ್ಯೆ ಲಂಕೇಶರೊಂದಿಗಿನ ಒಡನಾಟ, ಅವರ ಜೊತೆ ಗುಂಡು ಹಾಕಿದ್ದು, ನಾಟಕ ಓದಿದ್ದು, ಸಿಟ್ಟು ಮಾಡಿಕೊಂಡು ಜಗಳವಾಡಿದ್ದು, ಎಲ್ಲವನ್ನೂ ಸಂಭ್ರಮದಿಂದ ಹೇಳುತ್ತಾ ಆ ದಿನಗಳನ್ನು ನೆನಪಿಸಿ ಕೊಂಡರು. "ಮೇಷ್ಟ್ರು ನನ್ನ ಪಾಲಿಗೆ ದ್ರೋಣಾಚಾರ್ಯರಿದ್ದಂತೆ. ನಾನು ಅವರ ಶಿಷ್ಯ ಏಕಲವ್ಯ, ಅವರಿಂದ ಜೀವನದ ಅನೇಕ ಪಾಠಗಳನ್ನು ಕಲಿತೆ" ಎಂದು ಹೇಳಲು ಮರೆಯಲಿಲ್ಲ, ಹಾಗೆಯೇ ಅವರ ಕಾಲೇಜು ಅಧ್ಯಾಪಕ ಜಿ.ಕೆ. ಗೋವಿಂದ ರಾವ್, ಸಾಹಿತಿಗಳಾದ ಯು.ಆರ್.ಅನಂತಮೂರ್ತಿ, ಬೇಂದ್ರೆ, ತೇಜಸ್ವಿ, ಕಾರ್ನಾಡ್, ನರಸಿಂಹಸ್ವಾಮಿ... ಹೀಗೆ ಎಲ್ಲಾ ಸಾಹಿತಿಗಳ ಕಾವ್ಯ ಕವನ ಮತ್ತು ಅವರುಗಳ ಬಗ್ಗೆ ಜೋಕ್ ಕಟ್ ಮಾಡುತ್ತಾ ರೈ ಮಾತನಾಡುತ್ತಲೇ ಹೋದರು.


ಬೆಳಗ್ಗಿನ ಹೊತ್ತು ಹೈದರಾಬಾದ್‌ನಲ್ಲಿ ಅವರದೇ ನಿರ್ಮಾಣ ಸಂಸ್ಥೆಯ 'ಪಯಣ' ಎಂಬ ಚಿತ್ರದ ಶೂಟಿಂಗ್‌ನಲ್ಲಿ ಭಾಗವಹಿಸುವ ರೈ ಪ್ರತಿದಿನ ಸಂಜೆ ಹೊತ್ತಿಗೆ ಬೆಂಗಳೂರಿಗೆ ವಾಪಸ್ಸಾಗಿ ಮಧ್ಯರಾತ್ರಿ ತನಕ 'ನಾನೂ ನನ್ನ ಕನಸು' ಚಿತ್ರದ ಬಿಡುಗಡೆ ತಯಾರಿಯಲ್ಲಿ ನಿರತರಾಗಿರುತ್ತಾರೆ. ಭಾರತೀಯ ಚಿತ್ರರಂಗದ ದಿಗಂತದಲ್ಲಿ ಈಗಾಗಲೇ ಒಂದು ಸುತ್ತು ಹಾರಾಟ ನಡೆಸಿ ಬಂದಿರುವ ರೈ ಸದ್ಯಕ್ಕೆ ನಿರ್ದೇಶಕನಾಗಿ ಕನ್ನಡ ಚಿತ್ರರಂಗದಲ್ಲಿದ್ದಾರೆ.

"ನಾನು ಹನ್ನೆರಡು ಚಿತ್ರಗಳನ್ನು ನಿರ್ಮಿಸಿದ್ದೇನೆ, ನೂರಾರು ಚಿತ್ರಗಳಲ್ಲಿ ನಟಿಸಿದ್ದೇನೆ, ಅನೇಕ ಪ್ರಶಸ್ತಿಗಳನ್ನು ಪಡೆದಿದ್ದೇನೆ. ಆದರೂ ಈ ನಿರ್ದೇಶನದ ಪಯಣದಲ್ಲಿ ನನಗೆ ಪ್ರತಿಯೊಂದು ಘಟ್ಟದಲ್ಲೂ ಆನಂದ ದೊರಕಿದೆ" ಎನ್ನುತ್ತಾರೆ ರೈ. ಇಂತಹ ಬಹುಮುಖಿ ಪ್ರತಿಭೆಯ ಈ ನಟನ ನಿರ್ದೇಶನದ ಚೊಚ್ಚಲ ಚಿತ್ರವನ್ನು ಕನ್ನಡದ ಪ್ರೇಕ್ಷಕ ಮತ್ತು ಉದ್ಯಮದ ಜನ ಹೇಗೆ ಸ್ವೀಕರಿಸುತ್ತಾರೆ ಎಂಬುದು ಗೊತ್ತಾಗಬೇಕಾದರೆ ಬರುವ ಮೇ 7ರ ತನಕ ಕಾಯಬೇಕು.

"ಚಿತ್ರ ಸೋತರೂ, ಗೆದ್ದರೂ ಅದರಾಚೆಗಿನ ಜೀವನವನ್ನು ನಾನು ಎದುರು ನೋಡುತ್ತಿದ್ದೇನೆ" ಎನ್ನುವ ರೈ ಮಾತು ಬರೀ ಶಬ್ದಗಳ ಪದಪುಂಜವಲ್ಲ; ಅದು ಅನೇಕ ಅರ್ಥಗಳನ್ನು ಹೇಳುವ ವಾಸ್ತವಿಕತೆಯ ಮಾತು ಎಂದರೂ ತಪ್ಪಾಗಲಾರದು.

● ಶೆಣೈ





PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate...